ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 27 ಸಂಚಿಕೆ 03 ಜನವರಿ 16, 2005 ಬೆಲೆ ರೂ. 3.00




ಎಡಪಕ್ಷಗಳ : ಮುಂದಿರುವ ಸಂದಿಗ್ಧ ಸನ್ನಿವೇಶ



ಆಕ್ರಂದನದ ಎದೆಯಲ್ಲಿ





ತೃತೀಯ ರಂಗ ಮತ್ತು ಸಿಪಿಐ(ಎಂ)

ದುಡಿಯುವ ಮಹಿಳೆ : ಯಶಸ್ಸು ಮತ್ತು ಸವಾಲುಗಳು

- ಸುನಾಮಿ ತರುವ ಭೀಕರ ರೋಗಗಳು
- ಕುವೆಂಪು ಕಾವ್ಯ ದೃಶ್ಯದ ಪ್ರಯೋಗ
- ಜನವಾದಿ ಹೋರಾಟ - ಸಾರಾಯಿ ಅಂಗಡಿ ಎತ್ತಂಗಡಿ
- ಬಿಜೆಪಿ ಬಗ್ಗೆ ಬಂಗಾರಪ್ಪ ಹೇಳುತ್ತಾರೆ !

ದುಡಿವ ಮಹಿಳೆಯರ ಚಳುವಳಿ

ಹಲವು ಯಶಸ್ಸುಗಳು - ಸವಾಲುಗಳು

ಎಸ್.ವರಲಕ್ಷ್ಮಿ

ಹಾದಿಲಿ ಹೋಗೋರೇ, ಹಾಡೆಂದೂ ಹೆಳ್ಬೆಡಿ
ಹಾಡಲ್ಲ! ನನ್ನ ಒಡಲುರಿ
ಅದು ಬೆವರಲ್ಲ ನನ್ನ ಕಣ್ಣೀರು

ಹಿಂದಿನ ಮಹಿಳೆಯರು ತಮ್ಮ ದುಡಿಮೆಯ ಬಗೆಗಿನ ಅರಿವಿಲ್ಲದೆ ದುಡಿಮೆ ಯಾವಾಗ, ವಿಶ್ರಾಂತಿ ಯಾವಾಗ ಎಂಬುದರ ಅರಿವೇ ಇಲ್ಲದೆ ತಮ್ಮ ಮನಸ್ಸಿನ ನೋವನ್ನು ಈ ಜಾನಪದಗಳಲ್ಲಿ ಹಾಡುತ್ತಿದ್ದರು.

ಅಂದು ಮಹಿಳೆಯರು ಕೆಲವೇ ಕ್ಷೇತ್ರಗಳಲ್ಲಿ ದುಡಿದು ಇಂದು ಮಹಿಳೆ ದುಡಿಯದ ಸ್ಥಳವಿಲ್ಲ, ಎಂಥದ್ದೇ ವಿಭಾಗದಲ್ಲಿ ಬೇಕಾದರೂ ಛಲದಿಂದ ದುಡಿಯುವುದನ್ನು ಕಾಣಬಹುದು. ಈ ಛಲ ಮಹಿಳೆ ಸಮಾಜದಲ್ಲಿ ಸಮಾನತೆಯನ್ನು ಪಡೆಯಲು ಅನ್ನುವುದಕ್ಕಿಂತ ತನ್ನ ದೈನಂದಿನ ಜೀವನವನ್ನು, ತನ್ನ ಕುಟುಂಬವನ್ನು ನಿರ್ವಹಿಸಲು ದುಡಿಯುತ್ತಿರುವುದನ್ನು ಕಾಣಬಹುದಾಗಿದೆ.

ಸರ್ಕಾರಿ ಅಂಶಗಳ ಪ್ರಕಾರ ದೇಶದಲ್ಲಿ ಒಟ್ಟು 40 ಕೋಟಿ ಕಾರ್ಮಿಕರು ದುಡಿಯುತ್ತಿದ್ದಾರೆ. ಅವರಲ್ಲಿ 12 ಕೋಟಿ ಮಹಿಳೆಯರು ಇವರು ಹೆಚ್ಚು ದುಡಿಯುತ್ತಿರುವುದು ಅಸಂಘಟಿತ ಕ್ಷೇತ್ರದಲ್ಲಿ!

ಸರ್ಕಾರದ ನೀತಿಗಳನ್ನು ವಿರೋಧಿಸಿ ಮತ್ತು ಕಾರ್ಮಿಕ ಕಾನೂನುಗಳ ಜಾರಿಗಾಗಿ ಮಹಿಳೆಯರು ಸಂಘಟಿತರಾಗಿ ಹೋರಾಟಗಳನ್ನು ನಡೆಸುತ್ತಿದ್ದಾರೆ. ಆದರೆ ಅವರ ಹೋರಾಟಗಳು ಎಲ್ಲೂ ಕೂಡಾ ದಾಖಲಾಗುತ್ತಿಲ್ಲ. ಅದರೆ ದುಡಿಯುವ ವರ್ಗದ ಮುಖವಾಣಿ ಐಕ್ಯರಂಗ ವಾರಪತ್ರಿಕೆ ಇಂತಹ ಹೋರಾಟಗಳನ್ನು ಮತ್ತು ಈ ಸಮಸ್ಯೆಗಳನ್ನು ಗುರುತಿಸಿ ಪ್ರಚಾರಪಡಿಸುತ್ತಿರುವುದು ಆಶಾದಾಯಕವಾಗಿದೆ.

ದುಡಿಯುವ ಮಹಿಳೆಯರ ಪರಿಸ್ಥಿತಿ:

ರಾತ್ರಿಪಾಳಿಯ ಕಡ್ಡಾಯ ಕೆಲಸದ ನಿಷೇದ, ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ವಿರುದ್ಧ ಸುಪ್ರಿಂ ಕೋರ್ಟ್ ನೀಡಿದ ತೀರ್ಪನ್ನು ಕಾನೂನಾಗಿ ಜಾರಿ ಮಾಡಬೇಕು, ಕಾರ್ಮಿಕ ಕಾನೂನುಗಳ ಜಾರಿ, ಎಲ್ಲಾ ಮಹಿಳೆಯರಿಗೂ ಹೆರಿಗೆ ಭತ್ಯೆ, ಶಿಶು ಪಾಲನಾ ಕೇಂದ್ರ, ಪ್ರತ್ಯೇಕ ಮಹಿಳಾ ಶೌಚಾಲಯ ಇನ್ನಿತರ ಬೇಡಿಕೆಗಳನ್ನಿಟ್ಟು ರಾಜ್ಯದ ಬೆಂಗಳೂರು, ಮೈಸೂರು ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಸಮಾವೇಶಗಳನ್ನು ನಡೆಸಿ 15 ಸಾವಿರಕ್ಕಿಂತಲೂ ಹೆಚ್ಚು ಸಹಿ ಸಂಗ್ರಹಿಸಿದೆ. ಈ ಬೇಡಿಕೆಗಳ ಆಧಾರದಲ್ಲಿ ಅಖಿಲ ಭಾರತದ ಮಟ್ಟದ ಸಮಾವೇಶ ನವೆಂಬರ್ 17 ರಂದು ನವದೆಹಲಿಯಲ್ಲಿ ನಡೆದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ರಾಜ್ಯದಲ್ಲಿ ಸಂಘಟಿತ ಕ್ಷೇತ್ರದಲ್ಲಿ ಲೈಂಗಿಕ ಕಿರುಕುಳಗಳು ಹೆಚ್ಚುತ್ತಿರುವುದನ್ನು ಕಾಣಬಹುದಾಗಿದೆ. ಕಾರ್ಖಾನೆಗಳಲ್ಲಿ ಯೂನಿಯನ್ ಚಟುವಟಿಕೆಗಳಲ್ಲಿ ಸಕ್ರೀಯ ಮಹಿಳಾ ಕಾರ್ಯಕರ್ತರನ್ನು ಹೆಚ್ಚು ಸಕ್ರೀಯಗೊಳಿಸಲು ಬಿಡದೆ ಲೈಂಗಿಕ ಕಿರುಕುಳ ಕೊಡುತ್ತಿರುವುದು ಸಾಮಾನ್ಯವಾಗಿದೆ.

ದುಡಿಯುವ ಮಹಿಳೆಯರ ಮೂಲಭೂತ ಹಕ್ಕು ಹೆರಿಗೆ ಭತ್ಯೆಯನ್ನು ನೀಡುವುದು. ಮನುಷ್ಯ ಬಟ್ಟೆ ಹಾಕುವುದನ್ನು ಕಲಿತಾಗಿನಿಂದ ಮಾನವಕುಲ ಇರುವವರೆಗೂ ಬಟ್ಟೆಯನ್ನು ತೊಡಲೇಬೇಕಾಗಿದೆ. ಇಂತಹ ಪ್ರಾಮುಖ್ಯತೆ ಹೊಂದಿರುವ ಕೈಮಗ್ಗ ಕ್ಷೇತ್ರದ ಮಹಿಳೆಯರಿಗೆ ಹೆರಿಗೆಭತ್ಯೆ ಸೌಲಭ್ಯವಿಲ್ಲ. ಸ್ವಾತಂತ್ರ್ಯಪೂರ್ವದಿಂದ ಅಂಚೆ ಇಲಾಖೆಯಲ್ಲಿ ದುಡಿಯುವ ಇಲಾಖೇತರ ಮಹಿಳಾ ನೌಕರರಿಗೆ, ಗೌರವಧನದ ಆಧಾರದಲ್ಲಿ ಸರ್ಕಾರ ವಿವಿಧ ಯೋಜನೆಗಳಲ್ಲಿ ದುಡಿಯುವ ಮಹಿಳೆಯರಿಗೆ ಹೆರಿಗೆ ಭತ್ಯೆಯಿಲ್ಲ. ಇನ್ನು ಖಾಸಗಿ ಕಾರ್ಖಾನೆಗಳು ಬಹಳ ಮುಖ್ಯವಾಗಿ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಮಹಿಳೆಯರು ಹೆರಿಗೆ ರಜೆಗಾಗಿ ಕೆಲಸಕ್ಕೆ ರಾಜಿನಾಮೆ ನೀಡಿ ಹೆರಿಗೆಯ ನಂತರ ಕೆಲಸಕ್ಕೆ ಹೊಸದಾಗಿ ನೇಮಕ ಮಾಡಿಕೊಳ್ಳಲಾಗುವುದು.

ಹಾಗೆಯೇ ಮಹಿಳೆಯರು ದುಡಿಯುವ ಹಲವಾರು ವಿಭಾಗಗಳು ಮುಖ್ಯವಾಗಿ ಮಹಿಳಾ ಕಂಡಕ್ಟರ್‌ಗಳಿಗೆ ಶಾಲಾ ಶಿಕ್ಷಕೀಯರು, ಅಂಗನವಾಡಿ ನೌಕರರು, ಊರಿಂದೂರಿಗೆ ಹೋಗಿ ದುಡಿಯುವ ಮಹಿಳೆಯರು ಶೌಚಾಲಯಗಳ ಸೌಲಭ್ಯವಿಲ್ಲದೆ ನೀರನ್ನೇ ಕುಡಿಯುವುದಿಲ್ಲ! ಇದರ ಪರಿಣಾಮ ಆ ಮಹಿಳೆಯರ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬುದನ್ನು ಅಂದಾಜಿಸಬಹುದಾಗಿದೆ.

ಇಂತಹ ಹಲವು ಸಮಸ್ಯೆಗಳ ವಿರುದ್ಧ ಹೋರಾಟ ಮುಂದುವರಿಯುತ್ತಿದೆ.

ಇತ್ತೀಚೆಗೆ ಕರ್ನಾಟಕ ರಾಜ್ಯದಲ್ಲಿ ನಡೆದಿರುವ ಕಾರ್ಮಿಕ ಚಳುವಳಿಗಳ ಭಾಗವಾಗಿಯೇ ದುಡಿಯುವ ಮಹಿಳೆಯರ ಹೋರಾಟವನ್ನು ಮೆಲುಕು ಹಾಕಬೇಕಿದೆ.

ಜಾಗತೀಕರಣ ನೀತಿಗಳ ವಿರುದ್ಧ :

ಪ್ರಪಂಚವನ್ನು ಜಾಗತಿಕ ಹಳ್ಳಿಯನ್ನಾಗಿಸುವ ಜಾಗತೀಕರಣ ಹೆಚ್ಚುವ ಬಡತನ, ನಿರುದ್ಯೋಗ, ತಾರತಮ್ಯ, ಶೋಷಕರ ಮತ್ತು ಶೋಶಿತರ ಮಧ್ಯ ಅಂತರವನ್ನು ಹೆಚ್ಚಿಸುವ, ಶ್ರಮಶಕ್ತಿಗೆ ಸ್ವಲ್ಪವೂ ಬೆಲೆ ಕೊಡದ ಶ್ರಮಜೀವಿಗಳ ಮೇಲೆ ಇನ್ನಷ್ಟು ಅಟ್ಟಹಾಸ ಗೈಯುವ ಜಾಗತೀಕರಣವನ್ನು ವಿರೋಧಿಸಿ ಸಿಐಟಿಯು ಹಲವು ಚಳುವಳಿಗಳನ್ನು ನಡೆಸಿದೆ. ಈ ಚಳುವಳಿಗಳಲ್ಲಿ ಮಹಿಳೆಯರು ಹೆಚ್ಚಾಗಿದ್ದರು ಎಂಬುದನ್ನು ಗುರುತಿಸಬೇಕಾಗಿದೆ.

2ನೇ ರಾಷ್ಟ್ರೀಯ ಕಾರ್ಮಿಕ ಆಯೋಗ ಶಿಫಾರಸ್ಸುಗಳನ್ನು ವಿರೋಧಿಸಿ



ಜಾಗತೀಕರಣದ ನೀತಿಗಳ ಜಾರಿಯ ಹಿನ್ನೆಲೆಯಲ್ಲಿ ಕಾರ್ಮಿಕ ಕಾನೂನುಗಳನ್ನು ಮೊಟಕುಗೊಳಿಸುವ ರೀತಿಯಲ್ಲಿ 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗ ಹಲವಾರು ಕಾರ್ಮಿಕವಿರೋಧಿ ಶಿಫಾರಸ್ಸುಗಳನ್ನು ಮಾಡಿದೆ.

ಮಾಲೀಕರ ಒತ್ತಾಯಕ್ಕೆ ಮಣಿದು, ಕಾರ್ಮಿಕ ಹಿತವನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಮಾಲೀಕರು ಮನಬಂದಂತೆ ಕೆಲಸಗಾರರನ್ನು ಬಳಸಿ ಬಿಸಾಡುವುದಕ್ಕೆ ಅದರ ಶಿಫಾರಸ್ಸುಗಳಲ್ಲಿ ಸೇರಿಸಲಾಗಿದೆ. ಸಾವಿರಾರು ಕಾರ್ಮಿಕರನ್ನು ಬೀದಿಪಾಲು ಮಾಡಿ, ಯಾವುದೇ ಅಡೆತಡೆ ಇಲ್ಲದೆ ಕಾರ್ಖಾನೆಗಳನ್ನು ಮುಚ್ಚುವ ಸ್ವಾತಂತ್ರ್ಯವನ್ನು ಈ ಆಯೋಗ ಮಾಲೀಕರಿಗೆ ನೀಡಿದೆ. ಕಾರ್ಮಿಕ ಆಯೋಗವು ಪ್ರಮುಖ ಕೆಲಸಗಳಿಗೆ ಹೊರತುಪಡಿಸಿ, ಎಲ್ಲಾ ಕೆಲಸಗಳಿಗೂ ಗುತ್ತಿಗೆ ಕಾರ್ಮಿಕರನ್ನು ಬಳಸಬಹುದು ಹಾಗೂ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಪ್ರಮುಖ ಕೆಲಸಗಳಿಗೂ ಗುತ್ತಿಗೆ ಕಾರ್ಮಿಕರನ್ನು ಬಳಸಿಕೊಳ್ಳುವ ಅವಕಾಶ ಮಾಡಿಕೊಟ್ಟಿದೆ. ಮುಷ್ಕರದ ಹಕ್ಕು ಮತ್ತು ಕಾರ್ಮಿಕ ಸಂಘಗಳ ನೊಂದಣಿಯ ಹಕ್ಕನ್ನು ಸಹ ಮೊಟಕುಗೊಳಿಸಲಾಗಿದೆ.

ಮಹಿಳಾ ಕಾರ್ಮಿಕರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳುವ ಮಾಲೀಕರ ಬೇಡಿಕೆಗೆ ಆಯೋಗ ಒಪ್ಪಿಗೆ ನೀಡಿದೆ. ಮಹಿಳೆಯರಿಗೆ ಆಡಳಿತ ವರ್ಗವು ಸೂಕ್ತ ಸಾರಿಗೆ, ರಕ್ಷಣೆ ಮತ್ತು ಪಾಳಿ ಮೊದಲು ಹಾಗೂ ಪಾಳಿಯ ಬಳಿಕ ಸಮಾಧಾನಕರ ವಿಶ್ರಾಂತಿಯ ವ್ಯವಸ್ಥೆ ಒದಗಿಸಲು ಸಾಧ್ಯವಾದರೆ ಮಹಿಳೆಯರನ್ನು ರಾತ್ರಿಪಾಳಿಯಲ್ಲಿ ದುಡಿಸಿಕೊಳ್ಳಲು ಯಾವುದೇ ನಿರ್ಬಂಧವಿಲ್ಲವೆಂದೂ ಆಯೋಗ ಶಿಫಾರಸ್ಸು ಮಾಡಿದೆ. ಆದರೆ, ನಮ್ಮ ಅನುಭವದಿಂದ ತಿಳಿಯುವುದೇನೆಂದರೆ ಬಹುತೇಕ ಆಡಳಿತವರ್ಗಗಳು ರಾತ್ರಿ ಪಾಳಿಯ ಮಹಿಳೆಯರಿಗೆ ಯಾವುದೇ ಸಾರಿಗೆ ವ್ಯವಸ್ಥೆ ಒದಗಿಸುವುದಿಲ್ಲ. ಕೆಲವು ರಫ್ತು ಸಂಸ್ಕರಣಾ ವಲಯಗಳಲ್ಲಿ (ಇಪಿಝುಡ್) ಮತ್ತು ಬಿಪಿಎಲ್‌ಗಳಲ್ಲಿ ಅವರ ರಕ್ಷಣೆಯ ಬಗ್ಗೆ ಯಾವುದೇ ಕಾಳಜೀ ಇಲ್ಲದೆ, ಮಹಿಳಾ ಕಾರ್ಮಿಕರನ್ನು ಅರ್ಧರಾತ್ರಿಯಲ್ಲಿ ಹತ್ತಿರದ ಬಸ್ ಸ್ಟಾಪ್‌ನಲ್ಲಿ ಬಿಟ್ಟು ಹೋಗುವುದು ಸರಿಯಾದ ಸಾರಿಗೆ ಸಿಗದೆ ಮಹಿಳೆಯರು ಪರದಾಡುವಂತಾಗಿದೆ. ಮೇಲಾಗಿ ಕೌಟುಂಬಿಕ ಜವಾಬ್ದಾರಿಯಿರುವುದರಿಂದ ಮಹಿಳೆಯರು ಹಗಲು ಹೊತ್ತಿನಲ್ಲಿ ಯಾವುದೇ ವಿಶ್ರಾಂತಿ ಪಡೆಯಲು ಸಾಧ್ಯವಿಲ್ಲ. ಇದರಿಂದಾಗಿ ಮಹಿಳೆಯರ ಆರೋಗ್ಯದ ಮೇಲೆ ಮತ್ತು ಅವರ ಕೆಲಸದ ಮೇಲೂ ಪರಿಣಾಮ ಬೀರುತ್ತದೆ. ಕೆಲವು ನಿರ್ದಿಷ್ಟ ಕೈಗಾರಿಕೆಗಳಲ್ಲಿ ವಾಸ್ತವತೆಯ ಆಧಾರದಲ್ಲಿ ರಾತ್ರಿಪಾಳಿಯ ಅವಕಾಶ ನೀಡಬಹುದೇ ಹೊರತು, ಯಾವುದೇ ಅಡೆತಡೆಯಿಲ್ಲದೆ ಅನಿರ್ಬಂಧಿತ ರಾತ್ರಿ ಪಾಳಿಯ ಅವಕಾಶವನ್ನು ನೀಡಿದರೆ ಮಹಿಳೆಯ ಶೋಷಣೆಯನ್ನು ಮಾಲೀಕರು ತೀವ್ರಗೊಳಿಸಲು ಸಹಾಯವಾಗುತ್ತದೆ.

ಕಾರ್ಮಿಕಸಂಘದ ಐಕ್ಯತೆಗೆ ವಿಪತ್ತಾಗಬಲ್ಲ ಕಾರ್ಮಿಕ ಆಯೋಗದ ಇನ್ನೊಂದು ಶಿಫಾರಸ್ಸು, ‘‘ಸದಸ್ಯತ್ವ ಆಧಾರಿತ ಸಂಘ’’ಗಳನ್ನು ಪ್ರೋತ್ಸಾಹಿಸಬೇಕೆಂಬ ಸಲಹೆ ಮತ್ತು ಅವುಗಳಿಗೆ ವಿಶೇಷ ಮಾನ್ಯತೆ ನೀಡುವುದು.

ಮಹಿಳಾ ಕಾರ್ಮಿಕರ ದೊಡ್ಡ ವಿಭಾಗವು ಕಾರ್ಮಿಕ ಚಳುವಳಿಯ ಪರಿಧಿಯೊಳಗಿಲ್ಲವೆಂಬುದು ಮತ್ತು ಅವರನ್ನು ತುರ್ತಾಗಿ ಸಂಘಟಿಸುವ ಅಗತ್ಯವಿದೆ ಎಂಬುದು ವಾಸ್ತವ. ಆದರೆ, ದುಡಿಯುವ ಮಹಿಳೆಯರಿಗೆ ಪ್ರತ್ಯೇಕ ಸಂಘಗಳನ್ನು ಹುಟ್ಟು ಹಾಕುವುದರಿಂದ ಈ ಸಮಸ್ಯೆ ಪರಿಹಾರವಾಗು ವುದಿಲ್ಲ. ದುಡಿಯುವ ಮಹಿಳೆಯರನ್ನು ಮುಖ್ಯವಾಹಿನಿಯಾದ ಕಾರ್ಮಿಕ ಚಳುವಳಿಯ ಭಾಗವಾಗಿ ಸಂಘಟಿಸಬೇಕು ಮತ್ತು ಅದರಲ್ಲಿರುವ ಅವರ ಸೋದರರೊಂದಿಗೆ ಸಕ್ರಿಯವಾಗಿ ಪಾತ್ರವಹಿಸುವಂತೆ ತೊಡಗಿಸಬೇಕು. ಅನೇಕ ಕೈಗಾರಿಕೆಗಳಲ್ಲಿ, ಮಾಲೀಕರು ವೇತನದ ವೆಚ್ಚ ತಗ್ಗಿಸಲು ಹಾಗೂ ಚಳುವಳಿಯನ್ನು ದುರ್ಬಲ ಗೊಳಿಸಲು ಮಹಿಳೆಯರನ್ನು ಬಳಸುತ್ತಿದ್ದಾರೆ. ಮಹಿಳೆಯರಿಗೆ ಪ್ರತ್ಯೇಕ ಸಂಘ ಮಾಡುವುದರಿಂದ ಲಿಂಗದ ಆಧಾರದಲ್ಲಿ ಕಾರ್ಮಿಕ ಚಳುವಳಿಯನ್ನು ವಿಭಜಿಸಿ ಪುರುಷ ಹಾಗೂ ಮಹಿಳಾ ಕಾರ್ಮಿಕರನ್ನು ಶೋಷಿಸಲು ಮಾಲೀಕರಿಗೆ ಹೆಚ್ಚು ಅನುಕೂಲವಾಗುತ್ತದೆ.

ಈ ಶಿಫಾರಸ್ಸುಗಳನ್ನು ವಿರೋಧಿಸಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಸೇರಿ
-19 ಅಗಸ್ಟ್ 2002 ರಂದು ಪ್ರತಿಜ್ಞೆಸ್ವೀಕಾರ ಮತ್ತು ಪ್ರಚಾರ
- 23 ರಿಂದ 28 ಸೆಪ್ಟೆಂಬರ್ 2002ನಲ್ಲಿ ಜಿಲ್ಲಾಮಟ್ಟದ ಪ್ರತಿಭಟನೆ
-18 ರಿಂದ 23 ನವೆಂಬರ್ 2002 ರಾಜ್ಯಮಟ್ಟದ ಜಂಟಿ ರ್‍ಯಾಲಿಗಳು
- ಜನವರಿ 8, 2003 ರಂದು ಸಾಮೂಹಿಕ ಸತ್ಯಾಗ್ರಹಗಳಲ್ಲಿ ಮಹಿಳೆಯರು ಹೆಚ್ಚು ಪಾಲ್ಗೊಂಡಿದ್ದಾರೆ.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯಿಂದ ಪ್ರತ್ಯೇಕವಾಗಿ 2003 ಅಂತರದಲ್ಲಿ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ರಾಜ್ಯದಲ್ಲಿ ಅಲ್ಲಲ್ಲೇ ನಡೆದಿರುವ ಪ್ರತಿಭಟನೆಗಳು:- ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೀಡಿ ಕೈಗಾರಿಕೆ ಗೃಹಾಧಾರಿತಾ ಹಾಗೂ ಅಲ್ಲಿಯ ಸಾಮಾನ್ಯ ಜನರ ಜೀವನಾಧಾರವಾಗಿದೆ. ಸೌಲಭ್ಯಗಳನ್ನು ಕೊಡಬೇಕೆಂದೂ ಬಿಕ್ಕಟ್ಟಿನಲ್ಲಿ ಬೀಡಿ ಕೈಗಾರಿಕೆ ಎಂಬುದೇ ಹೆಚ್ಚು ಪ್ರಚಾರವಾಗುತ್ತಿದೆ. ಅದಕ್ಕೆ ತಕ್ಕನಾಗಿ ಹೈಕೋರ್ಟ್ ಬಹಿರಂಗಸ್ಥಳಗಳಲ್ಲಿ ದೂಮಪಾನ ನಿಷೇಧ ಕಾಯಿದೆ ಜಾರಿಗೆ ತಂದಿದೆ. ಇದನ್ನು ವಿರೋಧಿಸಿ ಸಾವಿರಾರು ಮಹಿಳೆಯರು ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಅಂತರ್‍ರಾಷ್ಟ್ರೀಯ ಕಾರ್ಮಿಕ ಆಯೋಗ ಮತ್ತು ಕೆಲವು ಸ್ವಯಂ ಸೇವಾ ಸಂಘಟನೆಗಳು ಪರ್ಯಾಯ ಉದ್ಯೋಗ ಕಲ್ಪಿಸುತ್ತೇವೆ ಎಂದೂ ಹೇಳಿ ಪ್ರಚಾರ ಮಾಡುತ್ತಿದ್ದರೂ ಬೀಡಿ ಮಹಿಳೆಯರು ಈ ಪ್ರಚಾರದ ವಿರುದ್ಧವಾಗಿ ಸೌಲಭ್ಯಗಳನ್ನು ನೀಡಿ ಮತ್ತು ಧೂಮಪಾನ ಕಾಯಿದೆ ವಾಪಸ್ಸಾಗಲಿ ಎಂಬ ಧ್ವನಿ ಮುಗಿಲೆತ್ತರಕ್ಕೆ ಮೊಳಗುತ್ತಿದೆ. ತಮ್ಮಲ್ಲಿಯೇ ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ಆರ್ಥಿಕ ಸ್ವಾವಲಂಬನೆಗಾಗಿ ಹೋರಾಡುತ್ತಿದ್ದಾರೆ.

ಮುಂದುವರಿಯುವುದು

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸಿಪಿಐ(ಎಂ) ರಾಜ್ಯ ಸಮ್ಮೇಳನ-ದಿನಾಚರಣೆ**
  ಜನವರಿ 21 ರಿಂದ 24, 2005
  ಉದ್ಘಾಟನೆ : ಪುರಭವನ, ಅಜ್ಜರಕಾಡು, ಉಡುಪಿ
  ಪ್ರತಿನಿಧಿ ಸಮ್ಮೇಳನ :
  ಶ್ರೀ ನಾರಾಯಣಗುರು ಕಲ್ಯಾಣ ಮಂಟಪ, ಬನ್ನಂಜೆ, ಉಡುಪಿ
  ಬಹಿರಂಗ ಸಭೆ : 24,01-05 ಸಂಜೆ 4 ಗಂಟೆಗೆ, ಪುರಭವನದ ಆವರಣ ಅಜ್ಜರಕಾಡು, ಉಡುಪಿ
- **ಜನವರಿ 11 ರಿಂದ 13,2005**
  ಕೋಲಾರದಲ್ಲಿ 12 ನೇ ಸಮ್ಮೇಳನ ಬಾಗೇಪಲ್ಲಿ
  ಬಹಿರಂಗಸಭೆ - ಜನವರಿ 11,2004 - ಮದ್ಯಾಹ್ನ 12.00 ಗಂಟೆಗೆ
- **ಜನವರಿ 27,2005**
  ದೇಶದಾದ್ಯಂತ ಬೀಡಿ ಕಾರ್ಮಿಕರ ಬೇಡಿಕೆ ದಿನ
- **ಜನವರಿ 28,2005**
  ಅಕ್ಷರದಾಸೋಹ ನೌಕರರ (ಬಿಸಿಯೂಟ) ವಿಧಾನಸೌಧ ಚಲೋ
  ಬೆಳಿಗ್ಗೆ 11.00 ಗಂಟೆಗೆ
  ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ

Printed & Published by Communist Party of India (M...

ಆಕ್ರಂದನದ ಎದೆಯಲ್ಲಿ

ಸುನಾಮಿ ಸಂತ್ರಸ್ತರಿಗೆ ನೆರವಿನ ಹಸ್ತ ಚಾಚಿದವರು, ಸತ್ತವರು, ಸಾವಿನಂಚಿನಲ್ಲಿ ನಿಂತು ಹೋರಾಡುವವರು, ಯಾವ ಜಾತಿ, ಮತ, ಭಾಷೆ ಎಂದು ಯೋಚಿಸಲಿಲ್ಲ. ಆದರೆ ಇಲ್ಲೂ ಇದ್ದಾರೆ ಆಕ್ರಂಧನಗಳ ಎದೆಯಲ್ಲಿ ವಿಷದ ಕತ್ತಿಯಾಡಿಸುವವರು.

ಸುನಾಮಿ ಸಂತ್ರಸ್ತರತ್ತ ನೆರವಿನ ಮಹಾಪೂರವೇ ಹರಿಯುತ್ತಿದೆ. ಸುನಾಮಿ ಅಲೆಗಳಪ್ಪಳಿಕೆಯಲ್ಲಿ ಬದುಕುಳಿದವರಿಗೆ ನೆಲೆಯೊದಗಿಸಲು ನಾಡಿನ ಜನತೆ ನೀಡಿದ ಸ್ಪಂದನೆ ಅಭೂತಪೂರ್ವವಾದುದು. ಕಡಲ ತೀರದುದ್ದಕ್ಕೂ ಪೀಡಿತ ಪ್ರದೇಶಗಳ ಸ್ಥಿತಿ-ಗತಿ, ಜನತೆಯ ಆಕ್ರಂದನ, ಅಳಲುಗಳ ಚಿತ್ರಣ ಮೂಡಿಸುವಲ್ಲಿ ಟಿ.ವಿ.ಪತ್ರಿಕಾ ಮಾಧ್ಯಮಗಳ ಪಾತ್ರ ಮಹತ್ವದ್ದಿದೆ. ಜನಮನದ ಅಂತಃಕರಣ ಮಿಡಿಯುವಂತೆ ಮಾಡಿವೆ.

ಸಂತ್ರಸ್ತರಿಗೆ ನೆರವು ನೀಡುವಲ್ಲಿ - ಎಳೆಯ ಮಕ್ಕಳಿಂದ ಮುದುಕರವರೆಗೆ, ಅನುಕೂಲಸ್ಥರಿಂದ ಹಿಡಿದು ಅಂದೇ ದುಡಿದುಣ್ಣುವ ಸಾಮಾನ್ಯರವರೆಗೆ ಎಲ್ಲಾ ವಿಭಾಗಗಳ-ವರ್ಗಗಳ ಜನ ಮುಂದಾಗಿರುವುದು. 'ಮನುಕುಲವೊಂದೇ' ಎಂಬ ಮಾನವೀಯತೆಯ ಅಂತರ್‌ಸೆರೆಯ ಚಲನ ಕಂಡುಬಂದಿತು.

"ಸ್ವಾಮಿ ನಾಲ್ಕು ಜನ ಕೈಜೋಡಿಸಿದರೆ ಮುಳುಗುವವನ ಮೇಲೆತ್ತಬಹುದು ತಕ್ಕಳ್ಳಿ" ಎನ್ನುತ್ತ 50 ರೂಪಾಯಿಗಳ ನೋಟೊಂದನ್ನು ಸಂಗ್ರಹದ ಡಬ್ಬಿಯೊಳಗೆ ಇಳಿಬಿಟ್ಟಳು ಆ ಮಹಿಳೆ. ಈಕೆ ತರಕಾರಿ ಮಾರುವಾಕೆ. ಆದಾಯ ಎಷ್ಟಿದ್ದೀತು? ಒಂದು ನೂರು - ನೂರಿಪ್ಪತ್ತು. ಕುಟುಂಬದ ಪೋಷಣೆಗೆ ಒಂದು ದಿನದ ಅಗತ್ಯವದು. ಆಕೆಗೆ ತನ್ನ ಬದುಕಿನ ಇಂಗಿತ ಅಗತ್ಯಗಳಿಗಿಂತ ಕಡಲತಡಿಯಲ್ಲಿ ಕಂಗಾಲಾದವರ ಅಗತ್ಯ ಪ್ರಧಾನವಾಗಿ ಕಂಡಿತು. ಶಿವಾಜಿನಗರದಲ್ಲಿ ಸಿಪಿಐ(ಎಂ)ನ ರಾಜ್ಯಸಮಿತಿಯಿಂದ ಸಂಗ್ರಹಕ್ಕೆಂದು ಪಾದಯಾತ್ರೆ ಮಾಡುವಾಗ ಈ ಮಹಿಳೆ ತನ್ನ ದಿನದ ದುಡಿಮೆಯಲ್ಲಿ ಅಲ್ಪ ಆದಾಯದಲ್ಲಿಯೇ ಇಷ್ಟೊಂದು ಹಣ ಹಾಕಿ ಹಾರೈಸಿದುದನ್ನೇ ನೋಡಿ.

ಹಾದಿಯಲ್ಲಿ ನಡೆವಾಗ, ಅಂಗಡಿಗಳ ಮುಂದೆ ಸಂಗ್ರಹದ ಹುಂಡಿ ಹಿಡಿದಾಗ ಬಿಡಿಗಾಸು ನೋಟುಗಳನ್ನು ನೀಡಿದರು. ಒಂದೆರಡು ತಾಸಿನಲ್ಲೇ ಆದ ಸಂಗ್ರಹ 10 ಸಾವಿರ ದಾಟಿತ್ತು. ಪ್ರದೇಶ ಪ್ರದೇಶಗಳಲ್ಲಿ ನಡೆಯುತ್ತಿರುವ ಸಂಗ್ರಹ ಲಕ್ಷ ತಲುಪುವುದರತ್ತ ಸಾಗುತ್ತಿದೆ. ಮೊನ್ನೆ ಎಸ್‌ಎಫ್‌ಐ - ಡಿವೈಎಫ್‌ಐನ ಕಛೇರಿಯತ್ತ ಇಣುಕಿದಾಗ ಅಲ್ಲಿ ಟೇಬಲ್ ಮೇಲೆ ಪುಟ್ಟ ಪುಟ್ಟ ಪ್ಲಾಸ್ಟಿಕ್ ಚೀಲಗಳು ಒಡಲು ತುಂಬಿ ಕೂತಿದ್ದವು. "ಅದೇನು ಬಿಸಿ ತಿಂಡಿಯಾ" ಎಂದದ್ದಕ್ಕೆ ಅಲ್ಲ ಕಾಮ್ರೇಡ್ ಅದು ಸುನಾಮಿ ಹುಂಡಿ' ಎಂದರು ಕೋಲಾರದ ವಿದ್ಯಾರ್ಥಿ ಮುಖಂಡರಾದ ಗೀತಾ. ಅದನ್ನೆಲ್ಲಾ ಎಣಿಸಿ ಹಾಕಿದ ವಿನೋದ್ ಆರು ಸಾವಿರ ರೂ ಇದೆಯೆಂದ. 'ಇದು ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳ ಕೊಡುಗೆ. ನಮ್ಮ ಮನವಿಗೆ ಇಲ್ಲವೆಂದವರೇ ಇಲ್ಲ. ಅದೂ ಎಸ್‌ಎಫ್‌ಐನ ಗೆಳೆಯರು ಕೇಳುತ್ತಾರೆಂದರೆ...." ಹಣ ನೀಡುವವರಿಗೂ ಅದು ತಲುಪುವುದು ಎಂಬ ವಿಶ್ವಾಸ ಬೇಕಿಬೇಕಲ್ಲ. ಸಿಪಿಐ(ಎಂ), ಎಸ್‌ಎಫ್‌ಐ, ಡಿವೈಎಫ್‌ಐ, ಚಿಂತೆಯಿಲ್ಲ ಕೊಡಬಹುದು...' ಹೀಗೆ ಉದ್ಗರಿಸುವವರಲ್ಲಿ ವಿಶ್ವಾಸ ಹುಟ್ಟುವುದು ಎಂದರೆ ಒಂದೆರಡು ದಿನಗಳ ಕೆಲಸವಲ್ಲ. ದೀರ್ಘಕಾಲದ ಹೋರಾಟ- ಸಮರ್ಪಣಾ ಭಾವದ ಪ್ರತಿಫಲ-ಪ್ರತೀಕ. ಸಂತ್ರಸ್ತರ ಹೆಸರಿನಲ್ಲಿ ಹಣ ಸಂಗ್ರಹಿಸಿ ತಲುಪಿಸಲಾರದವರು, ಬಂದ ನೆರವನ್ನು ಹಾದಿಯಲ್ಲೇ ಹಂಚಿಕೊಂಡು ಬಿಡುವವರು, ಪುನರ್ ನಿರ್ಮಾಣಕ್ಕೆಂದು ಮೀಸಲಿಟ್ಟು ಸಾವಿರಾರು ಕೋಟಿಗಳಲ್ಲಿ ಶೇ.25 ರಷ್ಟಾದರೂ ಮಾಡಿದ ಸೇವೆಗೆ ಫೀಜೆಂದು ಕಿಸೆಗೆ ಹಾಕುವವರು, ಸೇವಾಕಾಂಕ್ಷಿಗಳು ಜನ ಹೆಣವಾಗಿ, ಅಷ್ಟಿಷ್ಟು ಜೀವಹಿಡಿದು ಬದುಕಿಸಿರೋ ಎಂದು ತಲ್ಲಣದ ಮೊರೆ ಇಡುವಾಗಲೇ ಅಲ್ಲಿ ದಿಕ್ಕು ದೆಸೆಯಿಲ್ಲದೆ ಬಿದ್ದಿರುವ ಜೀವ ಉಳಿಸುವುದಕ್ಕೆಂದು ಹೋಗಿ ಸಿಕ್ಕಿದ್ದನ್ನು ಬಾಚಿ ಪರಾರಿಯಾಗುವ ಒಂದು ಗ್ಯಾಂಗ್‌ಗಳುಇಂಥಹವುಗಳ ಎದುರಿನಲ್ಲಿ ಜನರಿಗೆ ವಿಶ್ವಾಸ ಹುಟ್ಟುವುದು ಎಂದರೆ ಸುಮ್ಮನಲ್ಲ ಎಂದು ಇಷ್ಟು ಹೇಳಬೇಕಾಯಿತು. ಜನರ ಸ್ಪಂದನೆ ಹೀಗೆ ಸದ್ದು ಗದ್ದಲವಿಲ್ಲದೆ ಸ್ವಯಂ ಸ್ಫೂರ್ತಿಯಿಂದ ಸ್ವಯಂಸೇವಕರಾಗಿ ಕೆಲಸದಲ್ಲಿ ತೊಡಗಿದವರು ಸಾವಿರಾರು ಜನ. ಇದು ಅಲ್ಲಿಯ ಚಿತ್ರಣದ ಒಂದು ಮುಖ.

ಹೊಸಕೋಟೆಯಿಂದ ವೈದ್ಯರ ತಂಡವೊಂದು ಔಷಧಿ, ಹಾಲಿನಪುಡಿ ವಾಹನದಲ್ಲಿ ತುಂಬಿಕೊಂಡು ನಾಗಪಟ್ನಂ ಕಡೆ ಹೊರಡಲಣಿಯಾಗಿತ್ತು. ಅದರಲ್ಲಿ ಒಬ್ಬರು ಹಿರಿಯ ರಾಜಕಾರಣಿಯೊಬ್ಬರಿಗೆ

ಈವಾರ ಕರ್ನಾಟಕ ಒಂದು ನೋಟ
— ಎಸ್.ವೈ.ಗುರುಶಾಂತ್

ಹೋಗುವ ಬಗ್ಗೆ ತಿಳಿಸಿದರು. ನೀವಿರ್‍ರೀ ಪೇಪರೋರ್‍ನ ಕರೆಸ್ತೀನಿ. ಒಂದು ಫೋಟೋ ಹಾಕಿಸೋಣ' ಎಂದು ಹೇಳಿದರಂತೆ. ಇದೆಲ್ಲಾ ಬೇಡವೆಂದು ಹೋದ ತಂಡ 3 ದಿನ ಅಲ್ಲಿದ್ದು ಸಹಾಯ ಮಾಡಿ ವಾಪಾಸಾಗಿದೆ. ಮನುಷ್ಯರಾಗಿ ಮಾಡಬೇಕಾದ ಕನಿಷ್ಟ ಈ ಕರ್ತವ್ಯಕ್ಕೆ ಪ್ರಚಾರ ಯಾಕೆ ಸಾರ್ ಎಂದು ಪ್ರಶ್ನಿಸಿದರು ತಂಡದ ಯುವವೈದ್ಯ ಡಾ.ನೂರ್‌ಖಾನ್ ಇಂತಹ ಕೆಲಸಕ್ಕೆ ತೊಡಗಿದವರು ಅನೇಕರು, ಅನೇಕ ತಂಡಗಳು ಸುದ್ದಿಗಾಗಿ ಹೋದವರಲ್ಲ. ನಿಜ ಇಂತಹ ಕೆಲಸಗಳು ಸುದ್ದಿಯಾಗಬೇಕು. ಇನ್ನೊಬ್ಬರಿಗೆ ಪ್ರೇರಣೆಯಾಗಬೇಕು. ಅದು ಅಲ್ಲಿಯ ನಿಜ ಚಿತ್ರಣದ ಒಂದು ಮುಖ. ಆದರೆ ಪ್ರಚಾರಕ್ಕಾಗಿಯೇ 'ಸಮಾಜಸೇವೆಗೆ' ಇಳಿದು, ಅಂತಃಕರಣದ ಮಿಡಿತಕ್ಕಿಂತ ಪ್ರಚಾರದ ಹಂಬಲವೇ ಹೆಚ್ಚಾದರೆ...? ಈ ನಡುವಿನ ಒಂದು ಪ್ರಕರಣವಂತೂ ಹೇಸಿಗೆ ಹುಟ್ಟಿಸಬೇಕು. ಬುರುಡೆ ಪುರಾಣಗಳು, ಸೃಷ್ಟಿಕೊಂಡ ಪುರಾವೆಗಳು, ಸಂಗತಿಗಳ ತಿರುಚುವಿಕೆ ಹೀಗೆಲ್ಲಾ ಒಂದಿಲ್ಲೊಂದು ಐಟಂ ಹೊತ್ತೇ ಬರುವ ವಿಜಯ ಕರ್ನಾಟಕ ಮಧ್ಯಪುಟದ ಲೇಖನ. ಆತ ಕರಸೇವಕ ಎಂಬುದಕ್ಕೆ ಅನುಮಾನವಿಲ್ಲ. "ಸುನಾಮಿಯ ಸುಳಿಯ ಆರ್ಭಟವಿನ್ನೂ ನಿಂತಿರಲಿಲ್ಲ. ಅಲ್ಲಿ ಎದ್ದುಬಿಟ್ಟವು ಗುಡಾರಗಳು, ದುಮುಕಿದ್ದರು ಸ್ವಯಂಸೇವಕರು. ಅಲ್ಲಿ ಸರ್ಕಾರವಿನ್ನೂ ಬಂದಿರಲಿಲ್ಲ...." ಆತ ಹೇಳತೊಡಗಿದ್ದು ಆರ್.ಎಸ್.ಎಸ್.ನ ಸೇವೆಯ ಬಗ್ಗೆ. ಇರಲಿ ಇದಕ್ಕೆ ಅಷ್ಟು ತಕರಾರು ಇರಬೇಕಿಲ್ಲ. ಹಲವು ಕೈಗಳಲ್ಲಿ ಇದರದ್ದು ಒಂದು ಇರಲಿ. ಆತ ಮುಂದುವರೆದಿದ್ದು ಹೀಗೆ 'ನಮ್ಮ ಹಿಂದುಗಳು ಇಂಡೋನೇಶಿಯಾದಲ್ಲಿ ಸತ್ತವರು ಮುಸ್ಲಿಂ ಎಂದು ಯೋಚಿಸಲಿಲ್ಲ... ನೆರವಿಗೆ ಧಾವಿಸಿದರು. 'ಹಿಂದೂ' ಹೃದಯವೈಶಾಲ್ಯತೆ ಕೊಂಡಾಡುತ್ತಲೇ ಅಲ್ಲಿಯೂ ಮುಸ್ಲಿಂರ ಮೇಲೆ ಅದು ಇಲ್ಲದವರು ಎಂದು ಆರೋಪಿಸುವ ಕೋಮು ವಿಭಜನೆ ಧ್ವನಿ ಹೊರಡಿಸಿದ್ದನಾತ. ನೆರವು ನೀಡಿದವರಿಗೆ ತಾವೇನೋ ಮಹಾ ಕಾರ್ಯ ಮಾಡುತ್ತೇವೆಂದು ಕಿಂಚಿತ್ತೂ ಅನಿಸಿರಲಿಕ್ಕಿಲ್ಲ. ಈ ಸಹಾಯಹಸ್ತ ಚಾಚಿದವರು, ಹಲವು ಧರ್ಮಗಳಿಗೆ ಸೇರಿದವರು. ನೊಂದು ನೊಂದೊಡಲು ಬಿರಿವಂತೆ ಆಕ್ರಂದಿಸಿದವರು ಹಲವು ಧರ್ಮಿಯರು,




ಭಾಷಿತರು. ಇಲ್ಲಿ ಮಾನವೀಯತೆಯ ಮಿಡಿತ, ಬೆಸೆವ ಬಾಂಧವ್ಯ ಮುಖ್ಯವೆಂದು ಇವರಿಗೇಕೆ ಅನಿಸುವುದಿಲ್ಲ.

ಆಗ ನನಗೆ ತಟ್ಟನೇ ನೆನಪಾದದ್ದು 'ನನ್ನ ಮಗ ರವಿ ರಟ್ಟಿನ ಡಬ್ಬಕ್ಕೆ ಕಾಗದ ಹಚ್ಚಿ ಹುಂಡಿ ಡಬ್ಬ ಮಾಡಿ ನಮ್ಮ ಮನೆಯ ಸುತ್ತಲಿನ ಮನೆಗಳಿಗೆ ಹೋಗಿ ಸುನಾಮಿ ನಿಧಿ ಸಂಗ್ರಹಿಸಬಂದಿದ್ದನು. ಅವನು ಟಿವಿಯಲ್ಲಿ ನೋಡಿದ್ದೇ ತಕ್ಷಣ ಹೀಗೆ ಓಡಾಡಿದ. ಹಣವನ್ನು ಶಾಲೆಗೆ ತಲುಪಿಸಿದ" ಸಂಗಾತಿ ಪ್ರಸನ್ನ ಹೀಗೆ ಮಾತನಾಡುವಾಗ ಹೇಳಿದರು. ಬಚ್ಚೆಗೌಡರ ನೇತೃತ್ವದಲ್ಲಿ ಸುನಾಮಿ ನಿಧಿ ಸಂಗ್ರಹದ ಮೈಕ್ ಪ್ರಚಾರ ಕೇಳಿದ ಪುಟ್ಟ ಮಗಳು 'ಅಪ್ಪಾ ನಿನ್ನದು ಪ್ಯಾಂಟ್, ಕೊಡು, ನನ್ನೆರಡು ಫ್ರಾಕ್‌ಗಳು, ಅಮ್ಮ ಸೀರೆ ಕೊಡಲಿ, ಅಜ್ಜಿ...." ಹೇಳುತ್ತಲಿದ್ದಳು. ಮೊನ್ನೆ ಶಿವಾಜಿನಗರದಲ್ಲಿ ಸಂಗ್ರಹಿಸುವಾಗ ಅದೇ ತಾನೆ ಚೆನ್ನೈನಿಂದ ಬಂದಿದ್ದ ಯಶು ತನ್ನ ತೊಂದರೆಗಳನ್ನು ಲಕ್ಷಿಸದೆ ಡಬ್ಬ ಹಿಡಿದು ಓಡಾಡುತ್ತಿದ್ದ ಲವಲವಿಕೆ, ಚಾಕಲೇಟ್ ತಿನ್ನಲೆಂದೇ ಪಾಲಕನಿಂದ ಕಾಡಿಸಿ ಪಡೆದಿದ್ದ ಬಿಡಿಗಾಸನ್ನು ಸಂತ್ರಸ್ತ ಹುಂಡಿಗೆ ನೀಡಿದ. ಸಿಂಧನೂರಿನ ಜಾಲಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳ ಸ್ಪಂದನದ ಸುದ್ದಿ ಓದುವಾಗ, ಬೀಸುವ ಗಾಳಿಯನ್ನು, ಸೂಸುವ ಬೆಳಕನ್ನು, ಹಕ್ಕಿಗಳ ಕಲರವದ ಸಹಜತೆಯನ್ನು ಅರಿಯದವರು ಕೊಚ್ಚೆಗುಂಡಿಯ ಕೆಸರಲ್ಲಿ ಬಂದು ರುಚಿ ಹುಡುಕುತ್ತಾರೆ. ಆಕ್ರಂದನದ ಎದೆಯಲ್ಲಿ ವಿಭಜನೆಯ ವಿಷದ ಕತ್ತಿಯಾಡಿಸುತ್ತಾರೆ. 'ಸುನಾಮಿ' ಕಂಚಿಶ್ರೀಗಳ ಬಂಧನದಿಂದ ಸಂಭವಿಸಿತೇ? ಎಂದು ಕೇಳುವವರೂ ಕೂಡ, ಅಂತಹದ್ದೇ ಕಸುಬಿನವರು... (ಸುನಾಮಿ ಸುಳಿಯಲ್ಲಿ ಕಳಂಕ ತೊಳೆದುಕೊಳ್ಳಬಯಸುತ್ತಾರೆ, ಹಚ್ಚುತ್ತಾರೆ)

ಬಿಜೆಪಿ ಎಂದರೇನು? ಬಂಗಾರಪ್ಪ ಹೇಳುತ್ತಾರೆ ಕೇಳಿ

ತಮ್ಮ ಲೆಕ್ಕಾಚಾರ ತಲೆಕೆಳಗಾದ ಬಳಿಕವೂ ಬಿಜೆಪಿಯಲ್ಲೇ ಇರಲು ಯತ್ನಿಸಿದ ಬಂಗಾರಪ್ಪ ಕೊನೆಗೆ ಬಂಡಾಯ ಹೂಡಬೇಕಾಯಿತೇಕೆ?

ಬಂಗಾರಪ್ಪನವರು ಬಂಡಾಯದ ಭಾವುಟ ಮತ್ತೊಮ್ಮೆ ಹಾರಿಸಿದ್ದಾರೆ. ರಾಜ್ಯದ ಉದ್ದಗಲಕ್ಕೂ ಓಡಾಡಿ ಬಿಜೆಪಿ ನಾಯಕತ್ವದ ಕಾರ್ಯವೈಖರಿ, ಪಕ್ಷದ ರೀತಿ-ನೀತಿಗಳನ್ನು ಜಾಲಾಡಿಸುತ್ತಿದ್ದಾರೆ. ಮೂರನೆ ಪರ್ಯಾಯ ಕಟ್ಟುವ ಮಾತುಗಳು ಅವರು ಇತ್ತೀಚಿಗೆ ನಂಬಿ, ಪಾರ್ಲಿಮೆಂಟಿನಲ್ಲಿ ಅನಂತಕುಮಾರ್ ಜೊತೆ ನಿಂತು ಯುಪಿಎ ಹಾಯ್‌ಹಾಯ್, ಸಿಪಿಎಂ ಹಾಯ್‌ಹಾಯ್ ಎಂಬುದಕ್ಕೆ ತಿಲಾಂಜಲಿ ನೀಡಲು ಸಾಕಷ್ಟು ಸಿದ್ದತೆ ಮಾಡಿಕೊಂಡಿದ್ದಾರೆ ಎನ್ನುವುದು ಸೂಚನೆಯಾಗಿದೆ.



ಕಾಂಗ್ರೆಸ್‌ನಲ್ಲಿದ್ದ ಮಾಜಿ ಮುಖ್ಯಮಂತ್ರಿ ಸಾರೆಕೊಪ್ಪದ ಬಂಗಾರಪ್ಪನವರು ಬಿಜೆಪಿ ಸೇರಿದ್ದೇ ಮೊನ್ನೆಯ 2004 ರ ಸಾರ್ವತ್ರಿಕ ಚುನಾವಣೆಯಲ್ಲಿ. ಮತ್ತೆ ಕೇಂದ್ರದಲ್ಲಿ ವಾಜಪೇಯಿ ಎನ್‌ಡಿಎ ಸರ್ಕಾರವನ್ನು ಹಿಂತಿರುಗಿಸುವ 'ಹವಾ'ವನ್ನು ಪತ್ರಿಕೆ-ಟಿವಿಗಳು ಊದುತ್ತಿದ್ದ ಕಾಲ. ಅದನ್ನು ನಂಬಿದರು, ಕೇಂದ್ರದಲ್ಲಿ ಸಚಿವರಾಗುವ ಒಂದು ಛಾನ್ಸ್‌ಗೆ ಕಾದರು, ಹಾಗೆಂದೇ ಅವರನ್ನು ಸೇರಿಸಿಕೊಳ್ಳುವಾಗಲೂ ಬಿಜೆಪಿ ನಾಯಕರು ಆಮಿಷ ಒಡ್ಡಿದ್ದು ವರದಿಗಳಾದವು. ಹೀಗೆ ದಣಿವಿಲ್ಲದೆ ಓಡಾಡಿದರು. ಈ ಹೊಸ ದಂಡನಾಯಕ. ಆದರೆ ಜನ ಕೊಟ್ಟ ಅಪ್ಪಣೆಯಿಂದ ಎನ್‌ಡಿಎ ತಿಪ್ಪರಲಾಗ ಕಂಡಿತು. ಬಂಗಾರಪ್ಪನವರ ಗರಿಗೆದರಿದ್ದ ಆಸೆ ಮಣ್ಣುಗೂಡಿತು. ಕೊನೆಗೆ ಕರ್ನಾಟಕದ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೂ ಆಸೆಪಟ್ಟರು. ಆದರೆ ಸಂಘಪರಿವಾರ ನಂಬಬೇಕಲ್ಲ. ವಿರೋಧಪಕ್ಷದ ನಾಯಕನಾಗಿದ್ದಾಗ ಸರ್ವಸುಖಕ್ಕೆಂದೇ ಈ ಹಾದಿ' ಎಂದು ನಂಬಿ ಜೀವನ ಸವೆಸಿದ್ದ ಜಗದೀಶ್ ಶೆಟ್ಟರಿಗೆ ಕಟ್ಟಿಬಿಟ್ಟರಲ್ಲ ಪಟ್ಟ. ಅನಂತಕುಮಾರನಿಗೆ ಅಡಿಯಾಳಾಗಬೇಕು ಎನ್ನುತ್ತಿದ್ದ ಕೆಲವರು. ಇದು ಹಿಂದುಳಿದ ವರ್ಗದ ನಾಯಕನಿಗೆ ಹೀಗಾಗಿರಬೇಕು. ಇನ್ನು ಬಂಡಾಯ ಬಿಟ್ಟರೆ ಬೇರೇನಿದೆ?

'ಹೌದು ನಾನು ರಾಜಕಾರಣಿ, ಸನ್ಯಾಸಿಯಲ್ಲ, ಅಧಿಕಾರ ಹಿಡಿಯಲೆಂದೇ ರಾಜಕೀಯ' ಉಳಿದವರು ಮಾಡೋದೇನು? ಎಂದೇ ಖಾರವಾಗಿ-ನಿಖರವಾಗಿ ಕೇಳುತ್ತಾರೆ. 'ಬಂ' ಬಿಜೆಪಿಯ ಬೊಗಳೆ ಮಾತಿಗೆ ಮರುಳಾಗಿ ಪಕ್ಷ ಸೇರಿದ ಬಹುತೇಕರು ವರ್ಷ ಎರಡರಲ್ಲಾದರೂ ಖಾಲಿ ಮಾಡಿದ್ದಾರೆ. ಪ್ರೊ.ವೆಂಕಟಗಿರಿಗೌಡ, ನಂಜೇಗೌಡ (ಗರ್ಭಗುಡಿ ಸಂಸ್ಕೃತಿ ವಿರೋಧಿಸಿ ಹೊರ ಬಂದವರು) ಬಾಬಾಗೌಡ ಪಾಟೀಲ್, ತಾರಾದೇವಿ... ಸಂಘಪರಿವಾರದ ಚೆಡ್ಡಿ ದರ್ಬಾರಿನ ಚಿತ್ರಾನ್ನದಲ್ಲಿ 'ಬಂ' ನಂಥವರು ಕರಿಬೇವಿನ ಸೊಪ್ಪು ಎಂಬುದೇ ಅನುಭವ. ಜೊತೆಗಿದ್ದು ಇಲ್ಲವಾಗಿ, ನಗುವ ತುಟಿಗಳ ಹಿಂದೆ ಹಲ್ಲು ಮಸೆಯುತ್ತಾ, ಒಂದಾಗಿ ನಿಂತು ಕೈಎತ್ತಿ ಫೋಟೋ ತೆಗೆಸಿಕೊಳ್ಳುತ್ತಲೇ ವಿಭಜನೆಯ ಆಟ ಹೂಡುವ ಈ ಖಾವಿ ಪಡೆಯ ಕಟ್ಟಾಳುಗಳು ವಂಚನೆ - ಉಸಿರುಗಟ್ಟಿಸುವ ವಾತಾವರಣವನ್ನು ಅಲ್ಲಿ ಸ್ಥಾನವಿಲ್ಲದ್ದನ್ನು ಬಂಗಾರಪ್ಪ ಬೇಗನೆ ಅರಿತುಕೊಂಡಿದ್ದಾರೆ ಎನ್ನಬಹುದು. ಆದರೆ ಮತ್ತೆ ಪಯಣ ಎಲ್ಲಿಗೆ.... ನೀರಿಲ್ಲದ ಬಾವಿಗೆ ಆಗಬಾರದು. ಬಿಜೆಪಿಯತ್ತ ಆಗಾಗ ಇಣುಕುವ ಕರ್ನಾಟಕದ ಕೆಲವು ಶಾಸಕ ಶಿಖಾಮಣಿಗಳು ಇದರಿಂದ ಎಚ್ಚರವಾದಾರೇ?

ಜನವಾದಿ ಹೋರಾಟ : ಸಾರಾಯಿ ಅಂಗಡಿ ಎತ್ತಂಗಡಿ

..ಗಳೂರಿನ ವರ್ತೂರು ಕ್ಷೇತ್ರದ ವ್ಯಾಪ್ತಿಗೆ ಬರುವ ಕೆ.ಆರ್.ಪುರಂ ನಗರ ಸಭೆ ವಾರ್ಡ್ ನಂಬರ್ 3 ರ ನೇತ್ರಾವತಿ ಬಡಾವಣೆಯಲ್ಲಿ ಸುಮಾರು 30 ವರ್ಷಗಳಿಂದ ಸಾರಾಯಿ ಅಂಗಡಿಯಿತ್ತು. ಸಾರಾಯಿ ಅಂಗಡಿ ತೆರೆಯುವಾಗ ಯಾವುದೇ ಮನೆಗಳು ಇಲ್ಲದೆ ಗದ್ದೆ ಜಾಗವಾಗಿತ್ತು. ನಂತರ 10 ವರ್ಷಗಳಲ್ಲಿ ಸಾಕಷ್ಟು ಬದಲಾವಣೆಯಾಗಿ ನೂರಾರು ಮನೆಗಳು ನಿರ್ಮಾಣವಾಗಿವೆ. ನಂತರದ ದಿನದಲ್ಲಿ ಈ ಬಡಾವಣೆಗೆ ಹೊಂದಿಕೊಂಡಂತೆ ಸಬ್‌ರಿಜಿಸ್ಟರ್ ಕಛೇರಿ, ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯ ಕಛೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಅರಣ್ಯ ಇಲಾಖೆ ಮತ್ತಿತರ ಉಪಕಛೇರಿಗಳನ್ನು ತೆರೆಯಲಾಯಿತು ಮತ್ತು ಪಕ್ಕದಲ್ಲೇ ಪ್ರತಿ ಮಂಗಳವಾರ ಸಂತೆ ನಡೆಯುತ್ತದೆ. ಕೆಲಸ ಕಾರ್ಯಗಳಿಗೆ ಸಾಕಷ್ಟು ಜನರು ಸಾರಾಯಿ ಅಂಗಡಿ ಮುಂದೆ ಇರುವ ರಸ್ತೆಯಲ್ಲಿಯೇ ಹಾದು ಹೋಗಬೇಕು.

ಬೆಳಿಗ್ಗೆ 4 ಗಂಟೆಯಿಂದ ರಾತ್ರಿ 12ರತನಕ ಅಂಗಡಿ ತೆರೆದಿದ್ದು ಕಂಠಪೂರ್ತಿ ಕುಡಿದು ತಮಗೆ ತಾವೇ ತಲೆ ಬುರುಡೆ ಹೊಡೆದು ರಕ್ತ ಸುರಿಸುವುದು. ಅವಾಚ್ಯ ಶಬ್ದಗಳಿಂದ ಕೂಗಾಟ, ಅಕ್ಕಪಕ್ಕದ ಮನೆಗಳಿಗೆ ನುಗ್ಗಿ ಬಾಗಿಲು ಒಡೆಯುವುದು ಸರ್ವೆ ಸಾಮಾನ್ಯವಾಗಿತ್ತು.

ಈ ಪ್ರದೇಶದಲ್ಲಿ ಮಧ್ಯಮ ವರ್ಗದ ಕಾರ್ಮಿಕರು ವಾಸ ಮಾಡುತ್ತಾ ಸಾರಾಯಿ ಅಂಗಡಿ ಸಮಸ್ಯೆಯಿಂದ ಸಾಕಷ್ಟು ಬೇಸರಗೊಂಡು ಹಲವಾರು ಬಾರಿ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ.

ಈ ಕ್ಷೇತ್ರದ ಶಾಸಕರಾಗಿ ಎ.ಕೃಷ್ಣಪ್ಪ 2 ಭಾರಿ ಕ್ಯಾಬಿನೆಟ್ ಸಚಿವರಾಗಿದ್ದರು. ಒಂದು ಭಾರಿ ಅಶ್ವಥನಾರಾಯಣರೆಡ್ಡಿ ಶಾಸಕರು ಹಾಗೂ ಗ್ರಹಮಂತ್ರಿಗಳಾಗಿದ್ದರು. ಇವರ ಗಮನಕ್ಕೆ ತಂದಾಗ ಸರ್ಕಾರಕ್ಕೆ ಲಾಭವಿದೆ ಹಾಗೆ ತೆಗೆಯಲೂ ಸಾಧ್ಯವಿಲ್ಲವೆಂದು ಉತ್ತರ. ಮೂರು ಜನ ನಗರಸಭೆಯ ಸದಸ್ಯರು ಬದಲಾವಣೆಯಾದರು ಸಾರಾಯಿ ಅಂಗಡಿಗೆ ಮುಕ್ತಿಯಿಲ್ಲ.

ಇವರೆಲ್ಲರ ಬೇಜವಾಬ್ದಾರಿ ವರ್ತನೆಯಿಂದ ಬೇಸರಗೊಂಡ ಸ್ಥಳೀಯರು ಇದೇ ಪ್ರದೇಶದಲ್ಲಿ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಗೌರಮ್ಮನವರು ವಾಸವಿದ್ದು ಸಾರಾಯಿ ಅಂಗಡಿ ತೆರವು ಮಾಡುವಂತೆ ಮಹಿಳಾ ಸಂಘಟನೆಯ ವತಿಯಿಂದ ನಗರಸಭೆ ಆಯುಕ್ತರು ಮಾನ್ಯ ಜಿಲ್ಲಾಧಿಕಾರಿ ಮತ್ತು ಉಪ ಆಯುಕ್ತರು ಅಬಕಾರಿ ಇಲಾಖೆಗೆ ಮನವಿಯನ್ನು ನೀಡುವ ಮೂಲಕ ನಿರಂತರ ಹೋರಾಟದ ಭಾಗವಾಗಿ 30 ವರ್ಷಗಳಿಂದ ಇದ್ದ ಸಾರಾಯಿ ಅಂಗಡಿಯನ್ನು ಮಹಿಳಾ ಸಂಘಟನೆ 6 ತಿಂಗಳಲ್ಲಿ ಅಂದರೆ ದಿನಾಂಕ 29.12.2004ರ ರಾತ್ರಿ 11 ಗಂಟೆಗೆ ಅಲ್ಲಿಂದ ತೆರವುಗೊಳಿಸಲು ಸಾಧ್ಯವಾಯಿತು. ಇದು ಜನವಾದಿ ಮಹಿಳಾ ಸಂಘಟನೆಗೆ ಸಂದ ಜಯ. ವಿಜನಾಪುರ ಸ್ಲಂನಲ್ಲಿ ಸಹ ಕಳ್ಳಭಟ್ಟಿ ಸಾರಾಯಿ ಮಾರಾಟ ನಿಲ್ಲಿಸಲಾಗಿದೆ.

ತಾಜಾ ಬೀಡಿ ಉತ್ಪಾದಕರಿಂದ ಕಾನೂನ ಬಾಹಿರ ಬೀಡಿ ಕಾರ್ಖಾನೆ ಬಂದ್

ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಶಹರದಲ್ಲಿನ ಸುಮಾರು 200 ಬೀಡಿ ಕಾರ್ಮಿಕರು ಕೆಲಸ ಮಾಡುತ್ತಿದ್ದ ಮೆ. ಎಂ.ಎಫ್. ಸಿದ್ದಕಿ ಬೀಡಿ ಕಾರ್ಖಾನೆ ಕಳೆದು ದಿನಾಂಕ 28.09.2004ರಿಂದ ದಿಡೀರನೆ ಬಂದ್ ಮಾಡಿ ಆಡಳಿತ ವರ್ಗ ಓಡಿಹೋಗಿದ್ದು ಈ ಕಾರ್ಖಾನೆಯ ಬಿಡಿ ಮನೆ ಕಾರ್ಮಿಕರು (ಬೀಡಿ ಹೋಮ್ ವರ್ಕ್ಸ್) ಕೆಲಸವಿಲ್ಲದೆ ಮುಚ್ಚಿರುವ ಕಾರ್ಖಾನೆಯ ಬಾಗಿಲನಲ್ಲಿ ನಿರಂತರ ಧರಣಿ ಮುಷ್ಕರವನ್ನು ಹೂಡಿದ್ದಾರೆ.

ಕಾರ್ಖಾನೆಯ ಮುಚ್ಚುವಿಕೆ ಔದ್ಯೋಗಿಕ ವಿವಾದ ಕಾಯ್ದೆ 1947ರಲ್ಲಿನ ಪ್ರಾವಧಾನಗಳ ವಿರುದ್ಧವಾಗಿದ್ದರಿಂದ ಕಾರ್ಖಾನೆ ಮಾಲಿಕರ ಮೇಲೆ ಕಾನೂನ ಕ್ರಮ ಜರುಗಿಸಿ ಕಾರ್ಖಾನೆ ಪುನರಾರಂಭಿಸಲು ಕಾರ್ಮಿಕರಿಂದ ಹಲವಾರು ಸಲ ಸಲ್ಲಿಸಿದ ಮನವಿ, ಪುಕಾರಗಳ ಸರ್ಕಾರದ ಮೇಲೆ ಯಾವುದೆ ಪ್ರಭಾವ ಆಗಿದೆ ಕಾರ್ಮಿಕರು ಕಳೆದ 3 ತಿಂಗಳುಗಳಿಂದ ಕುಟುಂಬ ಸಹಿತ ದುರ್ದಶೆಗೆ ಪಾಲಾಗಿದ್ದಾರೆ.

ಈ ಕುರಿತು ಕಾರ್ಮಿಕ ಆಯುಕ್ತರು, ಉಪಕಾರ್ಮಿಕ ಆಯುಕ್ತರು ಹಾಗೂ ಇಲಾಖೆ ಕಾರ್ಯದರ್ಶಿಯವರಿಗೆ ನೀಡಿರುವ ಪುಕಾರಗಳ ಬಗ್ಗೆ ಯಾವುದೆ ಕ್ರಮ ಕೈಗೊಳ್ಳದೆ ಕಣ್ಣು ಮುಚ್ಚಿ ಕೈಕಟ್ಟಿಕೊಂಡು ಸುಮ್ಮನೆ ಇರುವ ಸರ್ಕಾರದ ಬಗ್ಗೆ ಕಾರ್ಮಿಕ ವರ್ಗದಲ್ಲಿ ಅತ್ಯಂತ ಅಸಂತೋಷ ಉಂಟಾಗಿದೆ. ಕಾರ್ಮಿಕ ಕಾನೂನುಗಳಲ್ಲಿ ಸೂಕ್ತ ಕ್ರಮ ಜರುಗಿಸಲು ಸಾಕಷ್ಟು ಪ್ರಾವಧಾನಗಳಿದ್ದು ಅವುಗಳ ಆಧಾರದ ಮೇಲೆ ಈ ಬೀಡಿ ಕಾರ್ಮಿಕರಿಗೆ ಪರಿಹಾರ ದೊರಕಿಸಿಕೊಡಲು ಸಾಕಷ್ಟು ಅವಕಾಶವಿದ್ದರು ಸಹ ಇಲಾಖೆ ಅಧಿಕಾರಿಗಳು ಕಾರ್ಮಿಕರಿಗೆ ಯಾವ ಪರಿಹಾರ ನೀಡಲು ಅಸಮರ್ಥವಾಗಲು ಕಾರಣ ಏನು ಎಂಬುದರ ಬಗ್ಗೆ ಅನುಮಾನಗಳಿವೆ.

ಈ ಬೀಡಿ ಕಾರ್ಮಿಕರು ಮಹಿಳೆಯರಾಗಿದ್ದು ಅವರು ತನ್ನ ಕುಟುಂಬದ ಸಮೇತ ನಿಪ್ಪಾಣಿ ಶಹರದಲ್ಲಿ ಪ್ರತಿಭಟನಾ ಸಭೆ ನಡೆಸಿ ನಿಪ್ಪಾಣೀಯ ಉಪ ತಹಶೀಲ್ದಾರರಿಗೆ ಮನವಿ ಪತ್ರ ನೀಡಿರುತ್ತಾರೆ. ಅಲ್ಲದೆ ಪುನಹಾ ಪ್ರತಿಭಟನಾ ಮೋರ್ಚಾ ನಡೆಸಿ (ಚಳವಳಿ) ಒಂದು ದಿನದ ನಾಡ ಕಛೇರಿ ಎದುರು ಧರಣಿ ಕೂತಿರುತ್ತಾರೆ. ಹಾಗೂ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಸಹಾ ಮನವಿ ಪತ್ರ ಸಲ್ಲಿಸಿರುತ್ತಾರೆ. ಕಾರ್ಮಿಕರು ಶಹರ ಪೋಲಿಸ್ ಠಾಣೆಯಲ್ಲಿ ಚಳವಳಿ ಹೋಗಿ ಈ ಬೀಡಿ ಕಾರ್ಖಾನೆಯ ಆಡಳಿತ ವರ್ಗದವರು ಕಾರ್ಮಿಕರ ಭವಿಷ್ಯ ನಿರ್ವಾಹ ನಿಧಿಯ ಹಣವನ್ನು ದೋಚಿರುವ ಬಗ್ಗೆ ಪುಕಾರ ಸಹ ನೀಡಿರುತ್ತಾರೆ. ಆದರೆ ಈ ಕುರಿತು ಇನ್ನೂ ಯಾವುದೆ ಕ್ರಮ ಆಗದೆ ಪರಾರಿ ಆಗಿರುವ ಕಾರ್ಖಾನೆ ಮಾಲಿಕ 200 ಬೀಡಿ ಕಾರ್ಮಿಕರನ್ನು ವಂಚಿಸಿ ಆರಾಮವಾಗಿದ್ದಾರೆ.

ನಿಪ್ಪಾಣಿಯಲ್ಲಿಯ ಬೀಡಿ ಕಾರ್ಮಿಕರು ಈ ಬಗ್ಗೆ (ಸಿ.ಐ.ಟಿ.ಯು.)ವಿನ ಕಾರ್ಮಿಕ ಸಂಘದ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಸಿ.ಎ. ಖರಾಡೆಯವರ ನೇತೃತ್ವದಲ್ಲಿ ಸಂಘಟಿತರಾಗಿದ್ದು ತಮಗೆ ಅಂತಿಮ ನ್ಯಾಯ ದೊರಕಿಸುವವರೆಗೆ ಹೋರಾಟವನ್ನು ಮುಂದುವರೆಸಿ ಅಗತ್ಯವಿದ್ದಲ್ಲಿ ಉಗ್ರ ಹೋರಾಟ ನಡೆಸಲು ತೀರ್ಮಾನಿಸಿದ್ದಾರೆ.



ನಿಪ್ಪಾಣಿಯಲ್ಲಿನ ತಾತಾ ಬೀಡಿ ಉತ್ಪಾದಕ ಮೆ. ಎಂ.ಎಫ್. ಸಿದ್ದಕಿ ಮುಚ್ಚಿರುವ ಬೀಡಿ ಕಾರ್ಖಾನೆ ಎದುರು ಕಳೆದ 3 ತಿಂಗಳಿಂದ ಧರಣಿ ಕೂತಿರುವ ಬೀಡಿ ಕಾರ್ಮಿಕರು ಮಧ್ಯದಲ್ಲಿ ಕಾಂ. ಸಿ.ಎ. ಖರಾಡೆ ಜಿಲ್ಲಾ ಸಿ.ಐ.ಟಿ.ಯು. ಅಧ್ಯಕ್ಷರು.

ಮೂಡಬಿದ್ರಿ ಸಿಐಟಿಯು ನೇತೃತ್ವದಡಿ ಅಕ್ಷರ ದಾಸೋಹ ನೌಕರರ ಸಮಾವೇಶ

25.12.2004 ರಂದು ಅಕ್ಷರ ದಾಸೋಹ ನೌಕರರ ಮೂಡಬಿದ್ರಿ ವಲಯ ಮಟ್ಟದ ಸಮಾವೇಶ ಮೂಡಬಿದ್ರಿ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ರಮಣಿಯವರ ಅಧ್ಯಕ್ಷತೆಯಲ್ಲಿ ಝ್ಯುದ್ ಫ್ಲಾಝಾದಲ್ಲಿರುವ ಸಿಐಟಿಯು ಸಭಾಂಗಣದಲ್ಲಿ ನಡೆಯಿತು.

ಸಮಾವೇಶಕ್ಕೆ ಅಕ್ಷರದಾಸೋಹ ನೌಕರರ ರಾಜ್ಯ ಅಧ್ಯಕ್ಷರಾದ ವರಲಕ್ಷ್ಮಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಆಗಮಿಸಿದ್ದರು. ಗೀತಾ ಬೆಳ್ತಂಗಡಿ ಸುಕನ್ಯ (ಅಂಗನವಾಡಿ ಕಾರ್ಯಕರ್ತೆಯರ ಜಿಲ್ಲಾ ಸಂಚಾಲಕಿ) ಸಿಪಿಐ(ಎಂ) ಮೂಡಬಿದ್ರಿ ವಲಯ ಕಾರ್ಯದರ್ಶಿ ಪ್ರದೀಪ್ ಉಪಸ್ಥಿತರಿದ್ದರು.

ಈ ಸಮಾವೇಶವು 23 ಜನರಿರುವ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದು ದೇವಕಿ ಮಾಂಟ್ರಾಡಿ ಇವರನ್ನು ಅಧ್ಯಕ್ಷರನ್ನಾಗಿಯೂ, ಗಿರಿಜ ಮೂಡಬಿದ್ರಿ ಇವರನ್ನು ಕಾರ್ಯದರ್ಶಿಯನ್ನಾಗಿಯೂ ಆಯ್ಕೆ ಮಾಡಿತು.

ಗಿರಿಜಾ ಸ್ವಾಗತಿಸಿ, ದೇವಕಿ ಮಾಂಟ್ರಾಡಿ ವಂದಿಸಿದರು.

ಅಕ್ಷರದಾಸೋಹ ಕೆಲಸಗಾರರು ಹೋರಾಟದತ್ತ

ಉಡುಪಿ ತಾಲ್ಲೂಕುಮಟ್ಟದ ಅಕ್ಷರದಾಸೋಹ ಕೆಲಸಗಾರರ ಪ್ರಥಮ ಸಮ್ಮೇಳನವು ಉಡುಪಿ ಉಡ್‌ಲ್ಯಾಂಡ್ಸ್ ರೆಸ್ಟೋರೆಂಟ್ ಸಭಾಂಗಣದಲ್ಲಿ ಡಿಸೆಂಬರ್ 26 ರಂದು ನಡೆಯಿತು. ಕರ್ನಾಟಕ ರಾಜ್ಯ ಅಕ್ಷರದಾಸೋಹ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಲೀಲಾವತಿ ಯವರು ಈ ಸಮ್ಮೇಳನದ ಉದ್ಘಾಟಿಸಿ, ಅಕ್ಷರದಾಸೋಹ ಕೆಲಸಗಾರರಿಗೆ ಪ್ರತೀ ತಿಂಗಳು ಕ್ರಮಬದ್ಧವಾಗಿ ವೇತನ ಪಡೆಯಲು ಸಾಧ್ಯವಾಗುತ್ತಿಲ್ಲ. ಅವರ ಸಂಬಳದ ಚೆಕ್ ಶಾಲೆಗಳಿಗೆ ಬಂದರೂ ಅದಕ್ಕೆ ಬ್ಯಾಂಕ್ ಚಾರ್ಜು 60 ರಿಂದ 70 ರೂ.ವರೆಗೆ ಕಡಿತ ಆಗುತ್ತದೆ. ಕರ್ನಾಟಕ ಸರಕಾರದ ಉಪಹಾರ ಯೋಜನೆಯ ಸಹ ನಿರ್ದೇಶಕರ 16-10-2004 ಆದೇಶದಲ್ಲಿ ಪ್ರತಿ ತಿಂಗಳೂ ಕ್ರಮಬದ್ಧವಾಗಿ ಆಯಾಯ ಕೆಲಸಗಾರರ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಬೇಕೆಂದು ತಿಳಿಸಿದೆ. ಆದರೆ ಈ ಆದೇಶ ಉಡುಪಿ ಜಿಲ್ಲೆಯಲ್ಲಿ ಜಾರಿಯಾಗಿಲ್ಲ. ಅಕ್ಷರದಾಸೋಹ ಕೆಲಸಗಾರರನ್ನು ಖಾಯಂಗೊಳಿಸಬೇಕು. ಈಗಿನ ವೇತನ ಹೆಚ್ಚಳ ಆಗಬೇಕು. ಖಾಸಗಿ ಶಾಲೆಗಳ ಅಡುಗೆ ಕೆಲಸಗಾರರಿಗೂ ಸರಕಾರವೇ ವೇತನ ಕೊಡಬೇಕು. ಈ ಬೇಡಿಕೆಗಳನ್ನು ಒತ್ತಾಯಿಸಲು ಜನವರಿ 29 ರಂದು ಉಡುಪಿಯಲ್ಲಿ ನಡೆಯುವ ಹೋರಾಟದಲ್ಲಿ ಎಲ್ಲಾ ಅಕ್ಷರದಾಸೋಹ ಕೆಲಸಗಾರರು ಭಾಗವಹಿಸಬೇಕು ಎಂದು ಕರೆ ನೀಡಿದರು.

ಈ ಸಭೆಯನ್ನುದ್ದೇಶಿಸಿ ರೈತಸಂಘದ ಜಿಲ್ಲಾಧ್ಯಕ್ಷ ಡೇವಿಡ್ ಕರ್ಕಡ ಮತ್ತು ಮುಖ್ಯೋಪಾಧ್ಯಾಯ ಶಂಭು ಸುವರ್ಣ ಕೊಡವೂರು ಇವರು ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈಯವರು ಮಾತನಾಡುತ್ತಾ ಕೆಲಸಗಾರರ ದೀರ್ಘ ಕಾಲದ ಹೋರಾಟದಿಂದ ಉದ್ದೇಶ ಈಡೇರಲು ಸಾಧ್ಯವಿದೆ. ಕೆಲಸಗಾರರು ದೊಡ್ಡ ಸಂಖ್ಯೆಯಲ್ಲಿ ಸಂಘಟಿತರಾಗಿ ಸರಕಾರದ ಮೇಲೆ ಒತ್ತಡ ತರಬೇಕು. ಈ ಉದ್ದೇಶದಿಂದ ಅಕ್ಷರದಾಸೋಹ ಕೆಲಸಗಾರರು ಸಂಘಟಿತರಾಗಿ ಹೋರಾಟಕ್ಕೆ ಮುಂದಾಗಬೇಕೆಂದು ಹೇಳಿದರು. ಅಕ್ಷರದಾಸೋಹ ಕೆಲಸಗಾರರ ಉಡುಪಿ ತಾಲೂಕು ಸಮಿತಿಗೆ ಅಧ್ಯಕ್ಷರಾಗಿ ಕೃಷ್ಣಮ್ಮ ಪಡುಬಿದ್ರಿ, ಉಪಾಧ್ಯಕ್ಷರಾಗಿ ಗೀತ ಚಿತ್ರಪಾಡಿ ಮತ್ತು ದೋಗು ಸುವರ್ಣ, ಕಾರ್ಯದರ್ಶಿಯಾಗಿ ಭಾರತಿ ಒಳಕಾಡು, ಜತೆಕಾರ್ಯದರ್ಶಿಗಳಾಗಿ ಸುಪ್ರಭ ಎಸ್.ಕಿಣಿ, ರಮೇಶ ಮೆಂಡನ್, ಖಜಾಂಚಿಯಾಗಿ ಕೃಷ್ಣ ಎಸ್, ಅಮೀನ್ ಆಯ್ಕೆಯಾದರು. ಸಮಿತಿ ಸದಸ್ಯರಾಗಿ ವೇದಾವತಿ ಹೆಜಮಾಡಿ, ಸಹನಾ ಕಂಚಿನಡ್ಕ, ವಾರೀಜ ಪೊಲಿಪು, ಕೆ.ಶಾರದಾ ಕೊರ್ಕಣಿ, ಸರಸ್ವತಿ ಪೇತ್ರಿ, ಶಕುಂತಲಾ, ಕೆಳಾರ್ಕಳ ಬೆಟ್ಟು, ಉಷಾ.ಬಿ., ಮೆಂಡನ್ ಬಣ್ಣಂಪಳ್ಳಿ, ಮಾಲತಿ ನಾಯ್ಕ, ಸೆಲಿಗಾ, ಜಾತಬೆಟ್ಟು, ಶಕುಂತಲಾರಾವ್, ಪ್ರಭಾವತಿ ಸ್ವಾಬರಕಟ್ಟೆ, ಸುಂದರಿ ಕಲ್ಯಾಣಪುರ ಸುನಂದ ಲಕ್ಷ್ಮಿನಗರ ಇವರು ಆಯ್ಕೆಯಾದರು.

ರಮೇಶ ಮೆಂಡನ್ ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ದೋಗು ಸುವರ್ಣ ವಂದಿಸಿದರು.

Printed & Published by Communist...

ಸುನಾಮಿ ಸಂತ್ರಸ್ತರಿಗೆ ಸಹಾಯ ಸಂಗ್ರಹ ಮುಂದುವರಿಕೆ



ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ಇತರೆ ಸಾಮೂಹಿಕ ಸಂಘಟನೆಗಳು ಸುನಾಮಿ ಸಂತ್ರಸ್ತರ ಸಹಾಯಕ್ಕೆ ಧಾವಿಸಲು ಕರೆ ನೀಡಿದ್ದು, ಜಿಲ್ಲಾ ಸಮ್ಮೇಳನಗಳಲ್ಲಿ, ಸಮಿತಿ ಸಭೆಗಳಲ್ಲಿ ಹಣ ಸಂಗ್ರಹವಾಗಿದೆ. ಡಿಸೆಂಬರ್ 31 ರಂದು ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಬೆಂಗಳೂರು ಜಿಲ್ಲಾ ಮುಖಂಡರು ಶಿವಾಜಿನಗರ ಬಸ್ ನಿಲ್ದಾಣ, ಕಮರ್ಷಿಯಲ್ ಸ್ಟ್ರೀಟ್ ಮೊದಲಾದ ಕಡೆಗಳಲ್ಲಿ ಪಾದಯಾತ್ರೆ ನಡೆಸಿ ಹತ್ತು ಸಾವಿರ ರೂನಷ್ಟು ಹಣ, ಬಟ್ಟೆ ಬರೆ ಸಂಗ್ರಹವಾಗಿತ್ತು.

ಬೆಂಗಳೂರು ಜಿಲ್ಲೆಯಿಂದ ಒಟ್ಟು 45 ಕ್ವಿಂಟಲ್ ಅಕ್ಕಿಯನ್ನು ಸಂಗ್ರಹಿಸಿ, ಪಕ್ಷದ ನಾಗಪಟ್ಟಣಂ ಜಿಲ್ಲಾ ಕಾರ್ಯದರ್ಶಿಯವರ ಮೂಲಕ ಸಂತ್ರಸ್ತರಿಗೆ ಹಂಚಲಾಯಿತು. ಹೊಸಕೋಟೆ ತಾಲ್ಲೂಕು ಒಂದರಲ್ಲೇ 35 ಕ್ವಿಂಟಲ್ ಅಕ್ಕಿ ಸಂಗ್ರಹಿಸಲಾಗಿದ್ದು, ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಆರ್.ಮನೋಹರ್ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಮಾಜಿ ಶಾಸಕ ಸು.ರಂ.ರಾಮಯ್ಯ



ಖುದ್ದು ಲಾರಿಯಲ್ಲಿ ತೆರಳಿ ಪರಿಹಾರ ಕಾರ್ಯ ನೆರವೇರಿಸಿದರು.

ಮೈಕೊ ಕಾರ್ಖಾನೆಯಲ್ಲಿರುವ ಸಿಐಟಿಯು ಬೆಂಬಲಿತ ತಂಡವು ಟಿ.ಶಿವಶಂಕರ್, ಸುರೇಶ್, ಮಂಜು ಮತ್ತಿತರರ ನೇತೃತ್ವದಲ್ಲಿ ಕಡಲೂರು ಜಿಲ್ಲೆ ರಲ್ಕೆ ಗ್ರಾಮದ ಬಳಿ ಇರುವ ಆಲ್‌ತಿಟ್ಟು (ದ್ವೀಪ) ಮತ್ತು ಕುಪ್ಪಂಗೆ ತೆರಳಿ ಅಲ್ಲಿ ಡಿವೈಎಫ್‌ಐ ಏರ್ಪಡಿಸಿದ್ದ ಸಂತ್ರಸ್ತರ ಶಿಬಿರಕ್ಕೆ ಎರಡು ವ್ಯಾನ್‌ಗಳಷ್ಟು ಬ್ರೆಡ್, ಔಷಧಿ, ಮತ್ತಿತರ ಸಾಮಗ್ರಿಗಳನ್ನು ಒದಗಿಸಿ ಪರಿಹಾರ ಕಾರ್ಯದಲ್ಲಿ ನೆರವಾದರು.

ಬೆಂಗಳೂರಿನ ಶ್ರೀರಾಮಪುರ, ಕೆ.ಆರ್.ಪುರ ಮತ್ತಿತರ ಪ್ರದೇಶಗಳಲ್ಲಿ ಪಕ್ಷದ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಮನೆ ಮನೆಗೆ ತೆರಳಿ ಬಟ್ಟೆಬರೆ, ಹಣ ಸಂಗ್ರಹಿಸಿದರು. ಹಳೆಬಟ್ಟೆಗಳಿಂದ ಚರ್ಮರೋಗ ಮತ್ತಿತರ ತೊಂದರೆಗಳಿಗೆ ಕಾರಣವಾಗುವ ಹಿನ್ನೆಲೆಯಲ್ಲಿ ಅದನ್ನು ಮಾರಾಟ ಮಾಡಿ 32000 ರೂ ಸಂಗ್ರಹಿಸಿದ್ದು ಒಟ್ಟು 85,000 ರೂ. ಈಗಾಗಲೇ ಸಂಗ್ರಹಿಸಲಾಗಿದೆ. ಇದಲ್ಲದೆ, ಕಾರ್ಖಾನೆಗಳಲ್ಲಿ, ಬ್ಯಾಂಕು, ಎಲ್‌ಐಸಿಗಳಲ್ಲಿ ಕಾರ್ಮಿಕರು, ನೌಕರರು ಕನಿಷ್ಟ ಒಂದು ದಿನದ ವೇತನವನ್ನು ನೀಡಿದ್ದು ತಮ್ಮ ತಮ್ಮ ಆಡಳಿತ ಮಂಡಳಿಗಳ ಮೂಲಕ ನೇರವಾಗಿ ಪ್ರಧಾನ ಮಂತ್ರಿಯವರ ಅಥವಾ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಕಳುಹಿಸಲಾಗಿದೆ. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿ ಈಗಾಗಲೇ 8900 ರೂ ಮತ್ತು 2 ಕ್ವಿಂಟಲ್‌ಗೂ ಹೆಚ್ಚು ಅಕ್ಕಿ ಸಂಗ್ರಹಿಸಿದೆ.

ಡಿಸೆಂಬರ್ 30 ರಂದು ನಡೆದ ಸಿಪಿಐ(ಎಂ) ರಾಜ್ಯಸಮಿತಿ ಸಭೆಯಲ್ಲಿ ರೂ.2290 ಸಂಗ್ರಹವಾಗಿದ್ದು, ಬಳ್ಳಾರಿ ಜಿಲ್ಲಾ ಸಮ್ಮೇಳನದಲ್ಲಿ ಪ್ರತಿನಿಧಿಗಳಿಂದ ರೂ.680, ಕೊಡಗು ಜಿಲ್ಲಾ ಸಮ್ಮೇಳನದ ಪ್ರತಿನಿಧಿಗಳಿಂದ ರೂ.460 ಸಂಗ್ರಹವಾಗಿದೆ.

ತುಮಕೂರು ಜಿಲ್ಲೆಯಲ್ಲಿ ವಿವಿಧ ಸಂಘಟನೆಗಳೊಂದಿಗೆ ಸೇರಿ 3 ಗಂಟೆಗಳ ಕಾಲ ಸಾರ್ವಜನಿಕರಿಂದ ಸಂಗ್ರಹಿಸಿ ರೂ.15000 ಕ್ಕೂ ಹೆಚ್ಚು ಹಣವನ್ನು ಸಂಗ್ರಹಿಸಿದ್ದು, ಪ್ರಧಾನಮಂತ್ರಿಯವರ ಪರಿಹಾರನಿಧಿಗೆ ಕಳುಹಿಸಲಾಗಿದೆ. ಹೊಸ ಬೆಡ್‌ಶೀಟ್, ಟವೆಲ್, ಚಪ್ಪಲಿ ಮೊದಲಾದವುಗಳನ್ನು ಸಂಗ್ರಹಿಸಿ ನಾಗಪಟ್ಟಣಂ ಜಿಲ್ಲೆಗೆ ಕಳುಹಿಸಲಾಗಿದೆ.

ಕೋಲಾರದಲ್ಲಿ ಕಾಲೇಜು, ಹೈಸ್ಕೂಲು ವಿದ್ಯಾರ್ಥಿಗಳು ಎಸ್‌ಎಫ್‌ಐ ನೇತೃತ್ವದಲ್ಲಿ, ತಮ್ಮ ದೈನಂದಿನ ಖರ್ಚಿಗೆಂದು ತಂದೆತಾಯಿ ಕೊಟ್ಟಿರುವ ಹಣವನ್ನು ಕಲೆಹಾಕಿ ರೂ.9000 ಕ್ಕೂ ಹೆಚ್ಚು ಹಣವನ್ನು ಸಂಗ್ರಹಿಸಿದ್ದಾರೆ.

ಇನ್ನು ಹಲವಾರು ಜಿಲ್ಲೆಗಳಿಂದ ಸುನಾಮಿ ಸಂತ್ರಸ್ತರ ನೆರವಿಗೆ ಹಣ ಸಂಗ್ರಹಿಸಲಾಗುತ್ತಿದ್ದು, ವಿವರಗಳನ್ನು ಮುಂದೆ ನೀಡಲಾಗುವುದು. ಡಿ.ಡಿ, ಚೆಕ್‌ಗಳನ್ನು 'ಸುನಾಮಿ ರಿಲೀಫ್ ತಂಡ' ಹೆಸರಿನಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಕಛೇರಿಗೆ ಕಳುಹಿಸುವುದು.

ಶ್ರೀರಾಮಪುರದಲ್ಲಿ ಸಂಗ್ರಹ : ಪ್ರಪಂಚವು ಶತಮಾನದ ಇತಿಹಾಸದಲ್ಲಿ ಒಂದು ದೊಡ್ಡ ದುರಂತವಾದ 'ಸುನಾಮಿ' ಭೂಕಂಪದ ಬಗ್ಗೆ ಕಳೆದ ಸಂಚಿಕೆಯ ಪತ್ರಿಕೆಯಲ್ಲಿ ಶರತ್ ಚಂದ್ರರ ಲೇಖನವನ್ನು ಓದಿದ್ದೀರಿ. ಒಂದೂವರೆ ಲಕ್ಷಕ್ಕೂ ಹೆಚ್ಚಿನ ಜನರನ್ನು ಬಲಿ ತೆಗೆದುಕೊಂಡ ಸುನಾಮಿ ದುರಂತ ಇನ್ನೂ ಲಕ್ಷಾಂತರ ಬೀದಿಪಾಲಾದ ಜನರನ್ನು ರಕ್ಷಿಸಲು ದೇಶದಲ್ಲಿ ಪರಿಹಾರ ಕಾರ್ಯಗಳು ನಡೆಯುತ್ತಿದೆ.

ಇದರ ಭಾಗವಾಗಿ ಬೆಂಗಳೂರಿನ ಶ್ರೀ ರಾಂಪುರ ಪ್ರದೇಶದಲ್ಲಿ ನಿಧಿ ಸಂಗ್ರಹ ಮತ್ತು ಕೆಲವು ಅತ್ಯವಶ್ಯಕ ವಸ್ತುಗಳಾದ ಬಟ್ಟೆ ಮತ್ತು ಆಹಾರ ಸಾಮಗ್ರಿಗಳನ್ನು ಸಂಗ್ರಹ ಮಾಡಲಾಯಿತು. ಒಟ್ಟು 7 ಸಾವಿರದಷ್ಟು ಹಣ ಮತ್ತು ಒಂದು ಟೆಂಪೊ ಪೂರ್ತಿ ಬಟ್ಟೆಯನ್ನು ಮತ್ತು ಅಲ್ಪಪ್ರಮಾಣದ ಆಹಾರ ಸಾಮಗ್ರಿಯನ್ನು ಸಂಗ್ರಹ ಆಯಿತು. ಸಂಗ್ರಹವು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ಮತ್ತು ಸಿಐಟಿಯು ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ನಡೆಯಿತು. ಸುಮಾರು 40 ಜನ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಾವು ಕೇವಲ ಅಂಗಡಿಗಳತ್ತ ಸಂಗ್ರಹಕ್ಕೆ ಹೋಗುತ್ತಿರುವಾಗ ಜನತೆ ಮನೆಯಿಂದ ಬಂದು ಹಣ ಮತ್ತು ಬಟ್ಟೆಯನ್ನು ನೀಡಿ ಮಾನವೀಯತೆ ಮೆರೆದರು. ಪ್ರದೇಶದ ಮತ್ತು ದೇಶದ ಜನತೆಗೆ ಇದು ಅತ್ಯಂತ ದುಃಖದ ಸಂಗತಿಯಾಗಿದೆ. ನಿರಾಶ್ರಿತ ಜನರಿಗೆ ಮತ್ತಷ್ಟು ಬೇಗ ಪರಿಹಾರ ಒದಗಲಿ ಎಂದೂ ಹಾರೈಸಿದರು.



ಧಾರ್ಮಿಕ ಸಂಸ್ಥೆಗಳು ಸ್ವಿಸ್ ಬ್ಯಾಂಕುಗಳಾಗಬಾರದ, ಪಾರದರ್ಶಕತೆ ಬೇಕು

ಹಾವೇರಿಯಲ್ಲಿ ಡಿಸೆಂಬರ್ 15 ರಂದು "ಧಾರ್ಮಿಕ ಸಂಸ್ಥೆಗಳಿಗೆ ನೀತಿ ಸಂಹಿತೆ ಬೇಕೆ" ಎಂಬ ಕುತೂಹಲಕಾರಿ ವಿಚಾರ ಸಂಕಿರ್ಣ ಇಲ್ಲಿಯ ಎಸ್‌ಎಫ್‌ಐ ಹಾಗೂ ಆಲ್ ಇಂಡಿಯಾ ಲಾಯರ್ಸ್ ಯೂನಿಯನ್ ಸಂಯುಕ್ತ ಆಶ್ರಯದಲ್ಲಿ ಜರುಗಿತು

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಹಿರಿಯ ಕಾರ್ಮಿಕ ನಾಯಕ ನಿತ್ಯಾನಂದಸ್ವಾಮಿ ವಹಿಸಿದ್ದರು. ಸಮಾಜದ ಎಲ್ಲ ಸೌಲಭ್ಯಗಳನ್ನು ಅನುಭವಿಸಿದ ಧಾರ್ಮಿಕ ಸಂಸ್ಥೆಗಳು ಮತ್ತು ಮುಖಂಡರು ಕಾನೂನಿನ ಕಠಿಣ ಕ್ರಮಗಳನ್ನು ಸಮಾಜವ್ಯವಸ್ಥೆ ಕಟ್ಟಳೆಯನ್ನು ಕಾನೂನನ್ನು ಮುರಿದಾಗ ಕಾನೂನಿನ ಕಠಿಣ ಕ್ರಮಗಳನ್ನು ಅನುಭವಿಸುವುದು ಪ್ರಜಾಪ್ರಭುತ್ವದಲ್ಲಿ ಅತ್ಯಂತ ಸಹಜವಾದದ್ದು, ಧಾರ್ಮಿಕ ಮುಖಂಡರು ಪ್ರಶ್ನಾತೀತರೆಂದು ಅವರಿಗೆಂದೇ ಪ್ರತ್ಯೇಕ ಕಾನೂನು ಮಾಡುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗುತ್ತದೆ ಎಂದರು.

ಸಮಾಜದ ಬೇರೆ ಬೇರೆ ಕ್ಷೇತ್ರದ ಜನರು ಈ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ವಿಷಯದ ಪ್ರತಿಪಾದನೆಯನ್ನು ನ್ಯಾಯವಾದಿ ಜಿ.ವಿ.ಹಿರೇಮಠ ಮಾಡಿ ಧಾರ್ಮಿಕ ಸಂಸ್ಥೆಗಳಿಗೆ ಮತ್ತು ಧರ್ಮಾಧಿಕಾರಿಗಳಿಗೆ ಸಮಾಜವನ್ನು ಮುನ್ನಡೆಸಲು ನೀತಿ ಸಂಹಿತೆ ಅಗತ್ಯವಾಗಿ ಮತ್ತು ಇದ್ದ ಕಾಯ್ದೆಗಳಲ್ಲಿ ಹೊಸ ಕಲಂಗಳನ್ನು ಸೇರಿಸಿ ಧಾರ್ಮಿಕ ಸಂಸ್ಥೆಗಳ ಹಾಗೂ ಧಾರ್ಮಿಕ ಮುಖಂಡರ ಅನ್ಯಾಯದ/ ಅಧರ್ಮದ ನಡವಳಿಕೆಗಳನ್ನು ನಿಯಂತ್ರಿಸಲು ಜನಸಾಮಾನ್ಯರು ಸರಕಾರದ ಮೇಲೆ ಒತ್ತಡ ತರಬೇಕೆಂದು ಚರ್ಚೆ ಪ್ರಾರಂಭಿಸಿದರು.

ಸಾಹಿತಿ ಸತೀಶ ಕುಲಕರ್ಣಿಯವರು ಮಾತನಾಡಿ ಸಮಾಜದ ಎಲ್ಲ ಸಾಮಾನ್ಯರಂತೆ ಈಗಿರುವ ಕಾನೂನಿನ ಅಡಿಯಲ್ಲಿಯೇ ಸಂಹಿತೆಗಳು ಇರಬೇಕೆ ಹೊರತು ಯಾವುದೇ ಧರ್ಮಾಧಿಕಾರಿಯನ್ನು ಸಾಮಾನ್ಯ ಪ್ರಜೆಗಿಂತ ಪ್ರತ್ಯೇಕಿಸುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ ಎಂದರು.

ಹರಪನಹಳ್ಳಿಯ ಪ್ರೊ.ಡಿ.ವಿ.ಬಡಿಗೇರ ಅವರು ಮಾತನಾಡಿ ಮಠಗಳು ಆರ್ಥಿಕ ಭಲಾಢ್ಯತೆಯಿಂದ ಶಕ್ತಿ ಕೇಂದ್ರಗಳಾಗಿ ಸಮಾಜದ ಎಲ್ಲ ರಂಗಗಳಿಗೆ ಕೈಚಾಚಿವೆ. ಇದರ ಬದಲಾಗಿ ಜನಸಾಮಾನ್ಯರ ಬದುಕಿನ ಬಗ್ಗೆ ಸಹ ಚಿಂತನೆ ಮಾಡುವ ಕೇಂದ್ರಗಳಾಗಬೇಕು, ಅವು ಶೋಷಕ ಶಕ್ತಿಗಳನ್ನು ರಕ್ಷಿಸುವ ಕೇಂದ್ರಗಳಾಗಬಾರದು ಎಂದು ಹೇಳಿದರು.

ಬೆಂಗಳೂರಿನ ಪ್ರಸನ್ನಕುಮಾರರು ಮಾತನಾಡುತ್ತ ಮಠಮಾನ್ಯಗಳು ಮೂಲಭೂತವಾಗಿ ಪಾಳೇಗಾರಿಕೆಯ ಸಂಕೇತಗಳಾಗಿದ್ದು ಪ್ರಜಾಪ್ರಭುತ್ವೀಕರಣಗೊಳ್ಳಬೇಕಾಗಿದ್ದು ತುರ್ತು ಅಗತ್ಯ ಮತ್ತು ಅವು ಜನರಿಗೆ ಹೊಣೆಗಾರರಾಗಿರಬೇಕು ಅಂದರೆ ಉತ್ತರಕೊಡುವಂತವರಾಗಬೇಕು. ಧಾರ್ಮಿಕ ಸಂಸ್ಥೆಗಳಲ್ಲಿಯ ಅಪಾರ ಹಣ ಜನರ ಹಣವಾಗಿದ್ದರಿಂದ, ಅವುಗಳ ಹಣದ ವ್ಯವಹಾರಗಳನ್ನು ನಿಯಂತ್ರಿಸಲು ಕಾನೂನುಗಳನ್ನು ಸರಕಾರ ರೂಪಿಸೇಕು. ಒಂದು ವೇಳೆ ಇದ್ದರೆ ಅವುಗಳನ್ನು ಬಲಪಡಿಸಬೇಕು.

ಚರ್ಚೆಯಲ್ಲಿ ನವಲಗುಂದದ ನಿವೃತ್ತ ಪ್ರಾಚಾರ್ಯ ಬಿ.ಎಸ್.ಸೊಪ್ಪಿನ, ಕೆ.ಎಲ್.ಭಟ್ಟ, ಎಚ್.ಐ.ಇಳಿಗೇರ, ಗಂಗಾಧರ, ನಂದಿ, ಆರ್.ಸಿ.ನಂದಿಹಳ್ಳಿ, ಶೋಭಾ ಜಾಗಟಗೇರಿ, ರುದ್ರಪ್ಪ ಬಾಬಿನ್ ಚನ್ನಬಸಪ್ಪ ಮುಂತಾದವರು ಭಾಗವಹಿಸಿದ್ದರು.

ಆರ್.ಐ.ಆಯಿ ಮಾತನಾಡುತ್ತ ಹಿಂದೆ ಧರ್ಮಗುರುಗಳು ಅಡವಿಯಲ್ಲಿ, ಹಿಮಾಲಯದಲ್ಲಿ ವಾಸಮಾಡುತ್ತ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಆದರೆ ಇವರೆಲ್ಲ ಈಗ ಊರೊಳಗೆ ಬಂದಿದ್ದರಿಂದ ದಾರಿತಪ್ಪುತ್ತಿದ್ದಾರೆ ಕಾರಣ ಎಲ್ಲ ಧರ್ಮಗುರುಗಳು ಅಡವಿಯಲ್ಲಿ ಹಿಮಾಲಯದಲ್ಲಿ ವಾಸ ಮಾಡುವದು ಉತ್ತಮ ಅಂತ ಹೇಳಿದರು.

ಆರಂಭದಲ್ಲಿ ಎಸ್.ಎಫ್.ಐನ ವಿಜಯಕುಮಾರ್ ದೊಡ್ಡಮನಿ ಸ್ವಾಗತಿಸಿದರು. ಕೊನೆಯಲ್ಲಿ ನಾರಾಯಣ ಕಾಳೆ ವಂದಿಸಿದರು. ವಿಕಾಸ ಹಿರೇಮಠ, ಬಸವರಾಜ ಗುಳೇದ, ಚಂದ್ರ ಅಕ್ಕಿವಳ್ಳಿ, ರಾಮ..... ಪ್ರಕಾಶಮನಗಿ, ಅದ್ದಾಪ್ಪ, ಚಿಕ್ಕಣ್ಣನವರ ಮೊದಲಾದವರು ಹಾಜರಿದ್ದರು.

ಯುದ್ಧವೇ ನಡೆಯದ ಮರಣ


ನೀರೆಂಬುವುದು ಸುಲಭ ನಾ?
ಜೀವವೆಂಬುವುದು ಉಚಿತ ನಾ?
ಸುನಾಮಿ ಸುಳಿ ಎಂಬುವುದು ಸುಮ್ಮನೇನಾ?
ಮರೆಯುವುದುಂಟಾ ಈ ದಿನ ನಾ?
ದಾರಿ ಇಲ್ಲ ಜೀವನಕ್ಕೆ
ಹಾದಿ ಇಲ್ಲ ನೋವಿಗೆ
ಯಾರೂ ಇಲ್ಲ ಜೊತೆಗೆ
ಸಾವು ಬಂತು ಒಟ್ಟಿಗೆ
ಊರೇ ಹೋಯಿತು ನೀರಿಗೆ
ನೀರಿನ ಮಾಯೆ
ದುಃಖದ ಛಾಯೆ
ಸುನಾಮಿ ಸುಳಿಯೇ
ಕೊನೆಗೂ ನೀ ಮಾಡಿದ್ದೇಯೇ
ಜೀವನದ ಅಳಿವೆ
ಬರೆಯಲು ಆಗದು ಕವನ
ನೋಡಲಾಗದು ಇದನ್ನ
ಯುದ್ಧವೇ ನಡೆಯದ ಮರಣ
ಮಾಡಿದ್ದಾರೆಲ್ಲ ಜೀವದಾನ
ನೀವೆಲ್ಲಾ ನೀಡಿ ನಿಧಿ ಪರಿಹಾರವನ್ನ

ಜೆ.ಬೇಬಿ
ಘಟ್ಟಪುರ, ಬೆಂಗಳೂರು -62

ಎಡಪಕ್ಷಗಳ ಮುಂದೀಗ ಸಂದಿಗ್ಧ ಸನ್ನಿವೇಶ

ಮುಂದಿನ ತಿಂಗಳು ಮೂರು ರಾಜ್ಯಗಳಲ್ಲಿ ಬಿಹಾರ, ಝಾರ್ಖಂಡ್ ಮತ್ತು ಹರ್ಯಾಣ- ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಇದರಿಂದಾಗಿ ಮತ್ತೆ ಭಾರತದ ರಾಜಕಾರಣ ಈ ಚುನಾವಣೆಗಳ ನಂತರ ಯಾವ ಸ್ವರೂಪ ಪಡೆಯಲಿದೆ ಎಂದು ರಾಜಕೀಯ ವೀಕ್ಷಕರ ಊಹಾಪೋಹ ಆರಂಭವಾಗಿದೆ. ಈ ಮೂರು ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳ ಸ್ಥಿತಿ-ಗತಿಗಳ ಒಂದು ಸಂಕ್ಷಿಪ್ತ ನೋಟ ನಮಗೆ ಈ ವಿಷಯದಲ್ಲಿ ನೆರವಾಗಬಹುದು. ಆ ಸಂಕ್ಷಿಪ್ತ ನೋಟವನ್ನು ಹರ್ಕಿಶನ್ ಸುರ್ಜಿತ್ ನೀಡಿದ್ದಾರೆ

ಮೊದಲು ಹರ್ಯಾಣಾವನ್ನು ತೆಗೆದುಕೊಳ್ಳೋಣ. ಓಂಪ್ರಕಾಶ್ ಚೌತಾಲಾರ ಇಂಡಿಯನ್ ನ್ಯಾಶನಲ್ ಲೋಕದಳ (ಐಎನ್‌ಎಲ್‌ಡಿ)ದ ಐದು ವರ್ಷಗಳಲ್ಲಿ ಜನರ ವಿಶ್ವಾಸವನ್ನು ಸಂಪೂರ್ಣವಾಗಿ ಕಳಕೊಂಡಿದೆ. ಅದೇ ರೀತಿ ಅದರೊಂದಿಗೆ ಸ್ವಲ್ಪ ಸಮಯ ಮೈತ್ರಿ ಹೊಂದಿದ್ದ ಬಿಜೆಪಿ ಕೂಡ. ಈಗ ಅದು ಸಂಬಂಧ ಕಡಿದುಕೊಂಡಿದೆ. ಈ ಎರಡು ಪಕ್ಷಗಳಿಗೆ ಬದ್ಧವಾದ ಮತಗಳು ಪರಸ್ಪರರ ನೆರವಿಗೆ ಬರುವುದಿಲ್ಲ ಎಂಬುದು ಸ್ಪಷ್ಟ. ಬಹುಶಃ ಅವು ಪರಸ್ಪರ ಹಾನಿ ಉಂಟುಮಾಡಬಹುದಷ್ಟೆ. ಅತ್ತ ಕಾಂಗ್ರೆಸ್ ಪಕ್ಷ ಖಂಡಿತಾ ಸ್ವಲ್ಪ ವಿಶ್ವಾಸಗಳಿಸಿಕೊಂಡಿದೆ.



ಆದ್ದರಿಂದ ಮೇ 2004 ರ ಲೋಕಸಭಾ ಚುನಾವಣೆಗಳಲ್ಲಾದಂತೆ ಅಧಿಕಾರಸ್ಥ ವಿರೋಧಿ ಅಂಶದ ಪ್ರಯೋಜನ ಅದಕ್ಕೆ ದಕ್ಕಬಹುದು. ಅಷ್ಟೇ ಅಲ್ಲ ಬನ್ಸಿಲಾಲ್ ಕಾಂಗ್ರೆಸ್‌ಗೆ ಮರಳಿರುವುದು ಅದರ ಸಾಧ್ಯತೆಗಳನ್ನು ಹೆಚ್ಚಿಸಿದೆ.

ಎಡಪಕ್ಷಗಳು ಮತ್ತು ಮೇಲೆ ಹೇಳಿದ ಪಕ್ಷಗಳನ್ನು ಬಿಟ್ಟು ಇತರ ಪಕ್ಷಗಳ ಅಸ್ತಿತ್ವ ರಾಜ್ಯದಲ್ಲಿ ಅಷ್ಟೇನೂ ಇಲ್ಲ. ಚುನಾವಣೆಯ ಫಲಿತಾಂಶವನ್ನು ಕಾಂಗ್ರೆಸ್ ಮತ್ತು ಐಎನ್‌ಎಲ್‌ಡಿಯ ಬಲಾಬಲಗಳೇ ನಿರ್ಧರಿಸುತ್ತವೆ. ಕಾಂಗ್ರೆಸ್ ಇದರಲ್ಲಿ ಉತ್ತಮ ಸ್ಥಿತಿಯಲ್ಲಿದೆ ಇನ್ನು ಬಿಜೆಪಿ ಇಲ್ಲಿ ಐಎನ್‌ಎಲ್‌ಡಿ ಯ ವಿರುದ್ಧ ಅಂಸತೃಪ್ತಿಯ ಪ್ರಯೋಜನ ಪಡೆಯುವ ಸ್ಥಿತಿಯಲ್ಲಿ ಇಲ್ಲ. ಅದು ಭಾರೀ ನಷ್ಟ ಅನುಭವಿಸುವ ಸಂಭವವೇ ಜಾಸ್ತಿ.

ಝಾರ್ಖಂಡ್‌ನಲ್ಲಿ ಕಾಣಬಹುದಾದ ಫಲಿತಾಂಶವೂ ಅಷ್ಟೇ ಸ್ಪಷ್ಟ. ಬಿಹಾರದ ವಿಭಜನೆಯಿಂದಾಗಿ ಈ ರಾಜ್ಯ ಬಿಜೆಪಿಯ ಮಡಿಲಿಗೆ ಬಿದ್ದಂತಾಯಿತು. ಆಗ ಕಳೆದ ವರ್ಷಗಳಲ್ಲಿ ಅದು ಎಷ್ಟು ಕೆಟ್ಟದಾಗಿ ವರ್ತಿಸಿದೆಯೆಂದರೆ ಜನರ ವಿಶ್ವಾಸವನ್ನೆಲ್ಲಾ ಕಳಕೊಂಡಿದೆ. ಈ ರಾಜ್ಯದ ರಚನೆಯಾದದ್ದು ಬುಡಕಟ್ಟು ಹಿತಾಸಕ್ತಿಗಳ ರಕ್ಷಣೆಯ ಹೆಸರಲ್ಲಿ ಆದರೆ ಬಿಜೆಪಿ ಮೈತ್ರಿ ಹೊಂದಿದ ಕೆಲವು ದೊಡ್ಡ ಬಂಡವಾಳಶಾಹೀ ಮನೆತನಗಳಿಗೆ ಹಾಗೂ ಪಟ್ಟಭದ್ರ ಹಿತಾಸಕ್ತಿಗಳಿಗೆ ಪ್ರಯೋಜನವಾಗಲು ಬುಡಕಟ್ಟು ಜನಗಳಿಗೆ ವಂಚನೆ. ಈ ರಾಜ್ಯದಲ್ಲಿ ಸುಲಿಗೆಕೋರ ಶಕ್ತಿಗಳಿಂದ ಬುಡಕಟ್ಟು ಜನಗಳಿಗೆ ಸ್ವಲ್ಪವಾದರೂ ರಕ್ಷಣೆ ನೀಡುತ್ತಿದ್ದ ಸಂತಾಲ್ ಪರಗಣ ಗೇಣಿ ಕಾನೂನು ಹಾಗೂ ಛೋಟಾ ನಾಗ್ಪುರ ಗೇಣಿ ಕಾನೂನನ್ನು ಕಳಚಿಹಾಕಿದ ಪಿತೂರಿ ನಡೆಸುವ ಮಟ್ಟದವರೆಗೂ ಈ ಪಕ್ಷ ಹೋಯಿತು. ಆದ್ದರಿಂದ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆಜನಗಳಿಗೆ ಇನ್ನಷ್ಟು ತೊಂದರೆಗಳು ಕಾದಿವೆ ಎಂಬ ಅರಿವು ಮೂಡಿರುವುದು ಸ್ಪಷ್ಟ. ಆದ್
ಮಾಡಬೇಕಾಗಿ ಬಂದಿರುವ ವಿವಿಧ ತಂತ್ರಗಳ
ರೇಷನ್ ಕಾರ್ಡಿಗೆ ಸಂಬಂಧಪಟ್ಟಂತೆ ಪಕ್ಷ
ಚುನಾವಣಾ ಆಯೋಗ ದೃಢ ನಿಲುವು ತಳೆದಾಗ
ಮಾತಿನ ಸಹಾನುಭೂತಿ ಕೂಡಾ ಸಿಗಲಿಲ್ಲ. ಇನ್ನೊ
ಜೆಎಂಎಂ ಮತ್ತು ಆರ್‌ಜೆಡಿ ಜತೆಗೂಡುವ ಸಂಬ
ಬಿಜೆಪಿ ಮತ್ತು ಅದರ ಮಿತ್ರರು ಇಲ್ಲಿ ಭ
ಎದುರಿಸುತ್ತಿದ್ದಾರೆ.




ಬಿಹಾರದಲ್ಲೂ ಹತಾಶೆ

ಬಿಹಾರದಲ್ಲಿ ಬಿಜೆಪಿ ಭಾರಿ ತೊಂದರೆಯಲ್ಲಿದೆ. ಬರಲಿರುವ ಅಪಖ್ಯಾತಿಯಿಂದ ಪಾರಾಗುವುದು ಹೇಗೆ ಎಂಬುದೇ ಸದ್ಯಕ್ಕೆ ಅದರ ಚಿಂತೆಯಾಗಿದೆ. ಎರಡು ತಿಂಗಳ ಹಿಂದೆ ಅದು ಉಮಾಭಾರತಿಯನ್ನು ಆರು ವರ್ಷಗಳ ಅವಧಿಗೆ ಪಕ್ಷದಿಂದ ಉಚ್ಚಾಟಿಸಬೇಕಾಗಿ ಬಂದಿತು. ಆದರೆ ಈಗ ಬಿಹಾರದಲ್ಲಿ ಹಿಂದುಳಿದ ವರ್ಗಗಳ ಮತ ಗಳಿಸುವ ಆಸೆಯಿಂದ ಅವಮಾನ ನುಂಗಿಕೊಂಡು ಆಕೆಯನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಂಡಿದೆ. ಆದರೆ ಆಕೆ ಆ ಆಸೆ ಈಡೇರಿಸಬಲ್ಲಳೇ ಎಂಬ ಬಗ್ಗೆ ಯಾರಿಗೂ ಖಚಿತ ನಿರೀಕ್ಷೆಯಿಲ್ಲ. ಏಕೆಂದರೆ ಆಕೆ ಬಿಹಾರಕ್ಕೆ ಹೊರಗಿನವರು, ಬಿಹಾರದಲ್ಲಿ ಯಾವುದೇ ನೆಲೆ ಹೊಂದಿಲ್ಲ. ಬಿಜೆಪಿ ಪ್ರಯೋಗಿಸುತ್ತಿರುವ ಇನ್ನೊಂದು ತಂತ್ರವೆಂದರೆ ಹೇಗಾದರೂ ರಾಮ್ ವಿಲಾಸ್ ಪಾಸ್ವಾನ್‌ರನ್ನು ಲಾಲೂ-ವಿರೋಧಿ ಮೈತ್ರಿಕೂಟದೊಳಗೆ ಸೆಳೆದುಕೊಳ್ಳುವುದು. ಜೆಡಿ(ಯು)ನ ನಿತಿಶ್ ಕುಮಾರ್ ಬಿಜೆಪಿ ಅಧ್ಯಕ್ಷರ ಅಪೇಕ್ಷೆಯಂತೆಯೇ ಈ ಪ್ರಯತ್ನ ನಡೆಸಿದ್ದಾರೆ ಎಂಬುದು ಒಂದು ಬಹಿರಂಗ ಗುಟ್ಟು. ಆದರೆ ಈಗಾಗಲೇ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಕೈ ಸುಟ್ಟುಕೊಂಡಿರುವ ಪಾಸ್ವಾನ್‌ಗೆ ಮುಸ್ಲಿಮರ ನಡುವೆ ಅಳಿದುಳಿದ ಬೆಂಬಲವನ್ನು ಕಳೆದುಕೊಳ್ಳಬೇಕಾದೀತೆಂಬ ಭಯವಿದೆ. ಜೆಡಿ(ಯು) ಪಕ್ಷ ಬಿಜೆಪಿಯಿಂದ ಮೈತ್ರಿಯನ್ನು ಕಡಿದುಕೊಂಡರೆ ಮಾತ್ರವೇ ಲಾಲೂ-ವಿರೋಧಿ ರಂಗ ರಚಿಸಲು ತಾನು ಸಿದ್ಧ ಎಂದು ಅವರೆಂದಿದ್ದಾರೆ. ಇದನ್ನಂತೂ ನಿರೀಕ್ಷಿಸಲು ಸಾಧ್ಯವಿಲ್ಲ. ಇತ್ತೀಚೆಗಷ್ಟೇ ಬಿಜೆಪಿ ಮತ್ತೆ ತನ್ನ ಕೋಮುವಾದಿ ಮೂಲಕ್ಕೆ ಹಿಂದಿರುಗುವ ಮಾತನಾಡಿದಾಗ ಜೆಡಿ(ಯು) ಮುಖಂಡರು ಆರ್ಭಟದ ಪ್ರದರ್ಶನ ಮಾಡಿದರು. ಆದರೆ ಬೆನ್ನು ಮೂಳೆಯಿಲ್ಲದವರು, ಜಾತ್ಯತೀತೆಯನ್ನು ರಕ್ಷಿಸುವಲ್ಲಿ ದೃಢವಾಗಿ ನಿಲ್ಲುವ ಧೈರ್ಯ ತಮಗಿಲ್ಲ ಎಂದು ಅವರು ಪ್ರದರ್ಶಿಸಿದ್ದಾರಷ್ಟೆ. ಒಟ್ಟಿನಲ್ಲಿ ಆರ್‌ಜೆಡಿ, ಕಾಂಗ್ರೆಸ್ ಮತ್ತು ಎಡಪಕ್ಷಗಳ ಮೈತ್ರಿ ಬಿಹಾರದಲ್ಲಿ ಬಿಜೆಪಿ ಮತ್ತು ಅದರ ಮಿತ್ರರಿಗೆ ಬಲವಾದ ಏಟು ನೀಡಲಿದೆ. ಹಾಗಾದರೆ ಅದು ಬಿಜೆಪಿಗೆ ಇನ್ನೊಂದು ಪ್ರಹಾರ. ಏಕೆಂದರೆ ವಿಭಜನೆಯ ನಂತರವೂ ಬಿಹಾರ ದೇಶದ ಮೂರನೇ ಅತಿಹೆಚ್ಚು ಜನಸಂಖ್ಯೆಯ ರಾಜ್ಯ ಹಾಗೂ ಜೆಡಿ(ಯು)ನ ಎರಡು ಬಲವಾದ ನೆಲೆಗಳಲ್ಲಿ ಒಂದು.

ಬದಲಾಗುತ್ತಿರುವ ಪರಿಸ್ಥಿತಿ

ಆದರೆ ಸದ್ಯದಲ್ಲೇ ನಡೆಯಲಿರುವ ವಿಧಾನಸಭಾ ಚುನಾವಣೆಗಳ ಆಚೆಗೆ ನೋಡಲು ಪ್ರಯತ್ನಿಸಿದರೆ ಪರಿಸ್ಥಿತಿ ತುಂಬಾ ಅಸ್ಥಿರವಾಗಿರುವುದು ಅರಿವಾಗುತ್ತದೆ. ದೀರ್ಘಾವಧಿಯಲ್ಲಿ ಏನಾಗಬಹುದು ಎಂದು ಯಾರೂ ಖಡಾಖಂಡಿತವಾಗಿ ಹೇಳಲು ಸಾಧ್ಯವಿಲ್ಲ. ಸದ್ಯಕ್ಕೆ ಕೋಮುವಾದೀ ಶಕ್ತಿಗಳು ಹತಾಶಗೊಂಡಿವೆ, ಆಂತರಿಕ ಭಿನ್ನಾಭಿಪ್ರಾಯಗಳನ್ನು ಎದುರಿಸುತ್ತಿವೆ. ಒಂದುಗೂಡುವ ಅವರ ಪ್ರಯತ್ನಗಳೆಲ್ಲಾ ವಿಫಲವಾಗಿವೆ. ಅಂದರೆ ಕಾಂಗ್ರೆಸ್ ಭಾರಿ ಶಕ್ತಿಕೂಡಿಸಿಕೊಂಡಿದೆಯೆಂದು ಅದರ ಅರ್ಥವಲ್ಲ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಚುನಾವಣೆಗಳಲ್ಲಿ ಕೋಮುವಾದ-ವಿರೋಧಿ ಭಾವನೆಗಳನ್ನು ಕ್ರೋಢೀಕರಿಸುವಷ್ಟು ಬಲಿಷ್ಟವಾಗಿರದ ರಾಜ್ಯಗಳಲ್ಲಿ ಕಾಂಗ್ರೆಸ್ ಖಂಡಿತವಾಗಿ ನೆಲೆಗಳಿಸಿದೆ. ಆದರೆ ತಾನೊಂದೇ ಕೋಮುವಾದಿ ಶಕ್ತಿಗಳನ್ನು ಅದು ಎದುರಿಸಲಾರದು.



ಅದೇ ವೇಳೆಗೆ ಕೆಲವು ರಾಜ್ಯಗಳಲ್ಲಿ ಕೆಲವು ಪಕ್ಷಗಳಿವೆ - ಅವು ಜಾತ್ಯತೀತ ಸ್ವರೂಪ ಹೊಂದಿವೆಯಾದರೂ ಅವುಗಳಲ್ಲಿ ಐಕ್ಯತೆಯಿಲ್ಲ (ನಾವಿಲ್ಲಿ ತಾವು ಜಾತ್ಯತೀತರು ಎಂದು ಹೇಳಿದರೂ ಸಂಕುಚಿತ ಚುನಾವಣಾ ಪ್ರಯೋಜನಕ್ಕಾಗಿ ಹಾಗೂ ಮಂತ್ರಿ ಸ್ಥಾನಗಳಿಗಾಗಿ ಬಿಜೆಪಿ
ಪಕ್ಷಗಳನ್ನು ಲೆಕ್ಕದಿಂದ ಹೊರಗಿಡೋಣ). ಈ ಹೆಚ್ಚಿನ
ಜವಾಗಿ ಎಡಪಕ್ಷಗಳತ್ತ ವಾಲುವಂತವು, ನಮ್ಮೊಡನೆ
ಾಗಿ ನಿಯಮಿತವಾಗಿ ಸಂಪರ್ಕ ಹೊಂದಿವೆ. ಆದರೆ
ಗಳು ಮತ್ತು ನಮ್ಮ ನಡುವೆಯಲ್ಲಿ ಹಲವು
ಪ್ರಸ್ತುತ ಕಾರ್ಯತಂತ್ರಗಳ ಬಗ್ಗೆಯೂ
ಗಳಿವೆ. ಈ ಭಿನ್ನಾಭಿಪ್ರಾಯಗಳು ಇಲ್ಲ
ಸುವಂತಿಲ್ಲ. ಆದರೆ ಈ ಭಿನ್ನಾಭಿಪ್ರಾಯಗಳು
ಬೇಗನೇ ಕಡಿಮೆಯಾಗುತ್ತವೆ ಎಂದು
ರಗಳಿವೆ.

ಇವಲ್ಲದೆ ತಕ್ಷಣದ ಅಗತ್ಯಗಳಿಗೆ ಅನುಗುಣವಾಗಿ ತಮ್ಮ ನಿಲುವು ಬದಲಿಸುವ ಪಕ್ಷಗಳೂ ಇವೆ. ಅವುಗಳ ಅದೃಷ್ಟ ಆಗಾಗ ಬದಲಾಗುತ್ತಲೇ ಇದೆ. ಜಯಲಲಿತಾ ನೇತೃತ್ವದ ಎಐಎಡಿಎಂಕೆ ಇದಕ್ಕೊಂದು ಉದಾಹರಣೆ 1998-99 ರಲ್ಲಿ ಈ ಮಹಿಳೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಒಂದು ಭಾಗವಾಗಿದ್ದರು. ಬಿಜೆಪಿ ಆಕೆಯ ಮಿತ್ರಪಕ್ಷಗಳನ್ನು ಆಕರ್ಷಿಸಲು ಪ್ರಯತ್ನಿಸಿದಾಗ ಮೈತ್ರಿಕೂಟವನ್ನು ಬಿಟ್ಟರು. ಏಪ್ರಿಲ್ 1999 ರಲ್ಲಿ ಆ ಸರ್ಕಾರದ ಪತನಕ್ಕೆ ಕಾರಣರಾದರು. ಆಕೆಯ ಪರಮಶತ್ರು, ಡಿಎಂಕೆಯ ಕರುಣಾನಿಧಿ ಆಗ ಬಿಜೆಪಿಯೊಂದಿಗೆ ಕೈಜೋಡಿಸಿ, ಅವರ ಸರ್ಕಾರವನ್ನು ಸೇರಿದರು. ಆದರೆ ಡಿಎಂಕೆಯು ಎನ್‌ಡಿಎ ಬಿಟ್ಟು ಯುಪಿಎ ಸೇರುವ ಸಮಯವೂ ಬಂತು, ಜಯಲಲಿತಾಗೆ ತನ್ನನ್ನು ಯಾರೂ ಲೆಕ್ಕಿಸದ ಪರಿಸ್ಥಿತಿ ಬಂತು. ನಂತರ ಆಕೆ ಬಿಜೆಪಿಯ ಮನ್ನಣೆ ಗಳಿಸಲು ತಮಿಳುನಾಡಿನಲ್ಲಿ ಮತಾಂತರ - ವಿರೋಧಿ ಶಾಸನವೊಂದನ್ನು ತರುವಂತಹ ಕೆಲವು ಪ್ರಶ್ನಾರ್ಹ ಕ್ರಮಗಳನ್ನು ಕೈಗೊಂಡರು. ಆದರೆ ಆ ರಾಜ್ಯದಲ್ಲಿ ಬೆಳೆಯುತ್ತಿದ್ದ ಪರಿಸ್ಥಿತಿಯಿಂದಾಗಿ ಆಕೆ ಕಂಚಿ ಶಂಕರಾಚಾರ್ಯರರನ್ನು ಬಂಧಿಸಬೇಕಾಗಿ ಬಂತು, ಈ ಮೂಲಕ ಅದೇ ಬಿಜೆಪಿಯನ್ನು ಎದುರು ಹಾಕಿಕೊಳ್ಳಬೇಕಾಗಿಬಂತು. ಒಟ್ಟು ಫಲಿತಾಂಶವೆಂದರೆ ಡಿಎಂಕೆ ಮತ್ತು ಇತರ ಪಕ್ಷಗಳು ಕಾಂಗ್ರೆಸ್ಸಿನೊಂದಿಗಿದ್ದರೆ ಎಐಎಡಿಎಂಕೆಯನ್ನು ತನ್ನತ್ತ ಸೆಳೆಯಲು ಯತ್ನಿಸುತ್ತಿದ್ದ ಬಿಜೆಪಿ ಅದನ್ನೇ ವಿರೋಧಿಸಬೇಕಾಗಿ ಬಂದಿದೆ.



ಎಡಪಕ್ಷಗಳ ಪಾತ್ರ

ಎಡಪಕ್ಷಗಳಿಗೆ ಈ ದೇಶದ ಜನಗಳ ನಡುವೆ ಬಹಳಷ್ಟು ಪ್ರತಿಷ್ಠೆ ಮತ್ತು ಸದ್ಭಾವನೆಯಿದೆ. ಆದರೆ ಬೇಸರದ ಸಂಗತಿಯೆಂದರೆ ಈ ಪಕ್ಷಗಳ ಬಲ ಅವುಗಳ ಪ್ರತಿಷ್ಠೆ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಅವು ವಹಿಸುತ್ತಿರುವ ಪಾತ್ರಕ್ಕೆ ಅನುಗುಣವಾಗಿಲ್ಲ.

ಎಡಪಕ್ಷಗಳು ಒಂದು ವಿಚಿತ್ರ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಮೊದಲನೆಯದಾಗಿ, ಈ ಹಿಂದೆ ಹೇಳಿರುವಂತೆ, ಜಾತ್ಯತೀತ ಪಕ್ಷಗಳ ನಡುವೆ ಐಕ್ಯತೆಯಿಲ್ಲ. ಇದರಿಂದಾಗಿ ನಮ್ಮ ಜಾತ್ಯತೀತ ರಾಜಕೀಯ ವ್ಯವಸ್ಥೆ, ಸಮಿಶ್ರ ಸಂಸ್ಕೃತಿ ಹಾಗೂ ರಾಷ್ಟ್ರೀಯ ಐಕ್ಯತೆಯ ರಕ್ಷಣೆಯಲ್ಲಿ ತೊಂದರೆಗಳಿವೆ. ಅದೇ ವೇಳೆಗೆ ಆರ್ಥಿಕ ಪ್ರಶ್ನೆಗಳಲ್ಲಿ ಎಡಪಕ್ಷಗಳು ಸುಮಾರಾಗಿ ಏಕಾಂಗಿಯಾಗಿವೆ. ಹೆಚ್ಚಿನ ಕಾಂಗ್ರೆಸ್ಸೇತರ, ಬಿಜೆಪಿಯೇತರ ಪಕ್ಷಗಳಿಗೆ ಉದಾರೀಕರಣ - ಖಾಸಗೀಕರಣ - ಜಾಗತೀಕರಣದ ನೀತಿಗಳ ಬಗ್ಗೆ ವಿರೋಧವೇನೂ ಇಲ್ಲ. ಇದು ಎಡಪಕ್ಷಗಳ ಮುಂದೆ ಇನ್ನಷ್ಟು ತೊಂದರೆಗಳನ್ನು ತಂದಿಟ್ಟಿವೆ. ಒಂದೇ ಉದಾಹರಣೆ ತಗೊಳ್ಳುವುದಾದರೆ ಒಬ್ಬ ಲಾರ್ಡ್ ಮೇಘನಾದ ದೇಸಾಯಿಯಂತಹ ಬ್ರಿಟಿಷ್ ನಾಗರಿಕ ಕೂಡಾ (ತಥಾಕಥಿತ) ಆರ್ಥಿಕ ಸುಧಾರಣೆಗಳ ಪ್ರಶ್ನೆಯ ಮೇಲೆ ಕಾಂಗ್ರೆಸ್ ಮತ್ತು ಬಿಜೆಪಿ ಒಂದು 'ಮಹಾ ಮೈತ್ರಿಕೂಟ' ವನ್ನು ರಚಿಸಿಕೊಳ್ಳಬೇಕು ಎಂದು ಸೂಚಿಸುವ ಭಂಡತನ ತೋರಿದ್ದಾನೆ. ಇಂತಹ ಒಂದು ಕೂಟ ಅಸ್ತಿತ್ವಕ್ಕೆ ಬರುತ್ತದೋ ಇಲ್ಲವೋ ಎಂಬುದು ಬೇರೆ ಪ್ರಶ್ನೆ. ಆದರೆ ಇಂತಹ ಸೂಚನೆ ಬಂದಿದೆಯೆಂಬುದೇ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಭಾರತದ ರಾಜಕೀಯ ಪಕ್ಷಗಳು ಮತ್ತುರಾಜಕೀಯ ವ್ಯವಸ್ಥೆಯ ಮೇಲೆ ಎಂತಹ ಒತ್ತಡಗಳನ್ನು ಹೇರಲು ಪ್ರಯತ್ನಿಸುತ್ತದೆ ಎಂಬುದನ್ನೂ ಸೂಚಿಸುತ್ತದೆ.

ಹೀಗೆ ಇಂದಿನ ಪರಿಸ್ಥಿತಿಯಲ್ಲಿ ಎಡಪಕ್ಷಗಳು ಇಬ್ಬಗೆಯ ಕೆಲಸ ಮಾಡಬೇಕಾದ ಅವಶ್ಯಕತೆಯಿದೆ. ಒಂದೆಡೆ ನಮ್ಮ ಜಾತ್ಯತೀತತೆ ಮತ್ತು ರಾಷ್ಟ್ರೀಯ ಐಕ್ಯತೆಗಾಗಿ ಇತರ ಪಕ್ಷಗಳನ್ನು, ಶಕ್ತಿಗಳನ್ನು ಅಣಿನೆರೆಸಬೇಕಾಗಿ ಬಂದಿದೆ. ಅದೇ ವೇಳೆಗೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಶಕ್ತಿಗಳೆದುರಾಗಿ ಬ್ರೆಡ್‌ನ್‌ವುಡ್ ಸಂಸ್ಥೆಗಳಿಂದ ಹೊಮ್ಮುತ್ತಿರುವ ಹಾಗೂ ಸಾಮ್ರಾಜ್ಯಶಾಹಿ ದೇಶಗಳ ಹಿತಸಾಧಿಸುವ ನೀತಿಗಳಿಂದ ಭಾರತೀಯ ಜನಸಮೂಹಗಳ ಪ್ರಮುಖ ಹಿತಾಸಕ್ತಿಗಳನ್ನು ಜೀವನಮಟ್ಟಗಳನ್ನು ರಕ್ಷಿಸಬೇಕಾಗಿದೆ.



ಬಂಡವಾಳಶಾಹಿ - ಪರ, ಸಾಮ್ರಾಜ್ಯಶಾಹಿ - ಪರ ಮಾಧ್ಯಮಗಳು ಈ ನೀತಿಗಳ ಪರವಾಗಿ ಹಾಗೂ ಎಡಪಕ್ಷಗಳ ವಿರುದ್ಧವಾಗಿ ಹೆಣೆಯುತ್ತಿರುವ ಸುಳ್ಳಿನ ಕಂತೆಗಳಿಂದಾಗಿ ಈ ಹೋರಾಟ ಇನ್ನಷ್ಟು ಕಷ್ಟಕರವಾಗಿದೆ. ಇಲ್ಲಿ ಮಾಧ್ಯಮಗಳು ಪ್ರಚಾರಪಡಿಸಿದ ಇಂತಹ

Printed & Published by Communist Party of




ಳ್ಳುಗಳ ಒಂದು ದಾಹರಣೆಯನ್ನು ನೋಡಿ. ಂಬರ್ 31, 2004 ಕ್ಕೆ ಮಲ್ಟಿ - ಬರ್ ಅಗ್ರಿಮೆಂಟ್ (ಜವಳಿ ತ್ರದಲ್ಲಿ 'ಬಹು-ಎಳೆ ಒಪ್ಪಂದ' - FA) ನ ಅವಧಿ ಮುಗಿದು ಭಿವೃದ್ಧಿ ಹೊಂದಿದ ದೇಶಗಳ ಾರುಕಟ್ಟೆಗಳಲ್ಲಿ ಭಾರತ, ಕಿಸ್ತಾನ ಮತ್ತಿತರ ಕೆಲವು ಶಗಳಿಗೆ ವಿಧಿಸಿದ ಕೋಟಾಗಳು ಲ್ಲವಾಗುವುದರಿಂದ ಭಾರತೀಯ ಪನಿಗಳಿಗೆ ಸ್ಪರ್ಧೆಯಲ್ಲಿ ದೊಡ್ಡ ಪ್ರಯೋಜನ ಸಿಗುತ್ತದೆ, ಭಾರತದ ವಳಿ ರಫ್ತು ಬಹಳವಾಗಿ ಹೆಚ್ಚುತ್ತದೆ ಎಂದೆಲ್ಲಾ ಪ್ರಚಾರ ಮಾಡಿದೆವು. ದರೆ ಈ MFA ಮುಗಿದು ಒಂದು ವಾರವೂ ಆಗಿಲ್ಲ, ಅಷ್ಟರಲ್ಲೇ ಮೆರಿಕನ್ನರು ಭಾರತದ ಕಾರ್ಖಾನೆಗಳನ್ನು ನಿಯಮಿತವಾಗಿ ರೀಕ್ಷಿಸುವ ಯೋಜನೆ ಹಾಕುತ್ತಿದ್ದಾರೆ ಎಂಬ ವರದಿಗಳು ಬಂದಿವೆ. ಮ ಮಟ್ಟಗಳ ಹೆಸರಲ್ಲಿ ಭಾರತದಿಂದ ಅವರ ದೇಶಕ್ಕೆ ಜವಳಿ ಮದಿನ ಮೇಲೆ ಮಿತಿ ಹಾಕುವುದು ಇದರ ಉದ್ದೇಶ. ಇದು ನಮ್ಮ ಾಧ್ಯಮದವರ ಮಂದದೃಷ್ಟಿಯನ್ನು ತೋರಿಸುತ್ತದೆ. ಏಕೆಂದರೆ ಮೆರಿಕನ್ನರು ಶ್ರಮಮಟ್ಟಗಳ ನೆಪ ಹೂಡುವುದು ಹೊಸತೇನಲ್ಲ, ಈ ಹಿಂದೆ ಭಾರತದ ರಫ್ತನ್ನು ಮಿತಿಗೊಳಿಸಲು ಈ ನೆವದಲ್ಲಿ ಅವರು ನಿರ್ಬಂಧಗಳನ್ನು ಹೇರಲು ಪ್ರಯತ್ನಿಸಿದ ಉದಾಹರಣೆಗಳಿವೆ.



ಈಗ ಭಾರತ ಸರ್ಕಾರದ ಪ್ರಕ್ರಿಯೆ ಪೇಟೆಂಟ್ ವ್ಯವಸ್ಥೆಯನ್ನು ಅಂತ್ಯಗೊಳಿಸಿ ಅದರ ಬದಲು ಉತ್ಪನ್ನ ಪೇಟೆಂಟ್ ವ್ಯವಸ್ಥೆಯನ್ನು ತರವು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿರುವಾಗ ಮಾಧ್ಯಮಗಳು ಬಣ್ಣಕಟ್ಟಿದ ಚಿತ್ರಗಳು ಮಾಸಿಹೋಗುವ ದಿನಗಳ ಬಹಳ ದೂರವೇನಿಲ್ಲ.

ಇಂದಿನ ಅಗತ್ಯ

ಇಂತಹ ಒಂದು ಸನ್ನಿವೇಶಲ್ಲಿ ಈ ದೇಶದ ಜನತೆ ಎಡಪಕ್ಷಗಳಿಂದ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇದು ಅತ್ಯಂತ ಸಹಜ ಹಾಗ ಸಮರ್ಥನೀಯ ಕೂಡಾ. ಇಂತಹ ರೀಕ್ಷೆಗಳನ್ನು ಈಡೇರಿಸುವುದು ಹೇಗೆ ಎಂದು ಎಡಪಕ್ಷಗಳು ೋಜಿಸಬೇಕಾಗಿದೆ. ಅಷ್ಟೇ ಏಕೆ, ಮುಂಬರುವ ದಿನಗಳಲ್ಲಿ ಇಂತಹ ರೀಕ್ಷೆಗಳು ಇನ್ನಷ್ಟು ಪಟ್ಟು ಹೆಚ್ಚುತ್ತವೆ ಎಂಬ ಎಚ್ಚರಿಕೆಯನ್ನು ನಾವು ೂಂದಿರಬೇಕಾಗುತ್ತದೆ. ಯುಪಿಎ ಸರ್ಕಾರ ಉದಾರೀಕರಣ ಖಾಸಗೀಕರಣ- ಜಾಗತೀಕರಣದ ನೀತಿಗಳನ್ನು ಅನುಸರಿಸುತ್ತಾ ಗುತ್ತಿರುವ ರೀತಿ ನೋಡಿದರೆ, ಜನಗಳ ನಿಜ ಆದಾಯ, ಕೊಳ್ಳುವ ಕ್ತಿ ಮತ್ತು ಜೀವನಮಟ್ಟ ಇಳಿಮುಖಗೊಳ್ಳುತ್ತ ವೆಂಬುದು ನಿಶ್ಚಿತ. ಡಪಕ್ಷಗಳು ಈ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧರಾಗಬೇಕು.



ಅವರು ಜನಗಳ ಬಳಿ ಹೋಗಿ ಈ ನೀತಿಗಳ ವಿರುದ್ಧ ಮತ್ತು ಪರ್ಯಾಯ ನೀತಿಗಳ ಪರವಾಗಿ ಜನಗಳನ್ನು ಅಣಿನೆರೆಸಬೇಕಾಗುತ್ತದೆ. ಎಡಪಕ್ಷಗಳು ಹೀಗೆ ಮಾಡಲು ವಿಫಲರಾದರೆ ಇದರಿಂದ ಹುಟ್ಟುವ ಸಾಮೂಹಿಕ ಅಸಂತೃಪ್ತಿಯನ್ನು ಕೋಮುವಾದಿ ಶಕ್ತಿಗಳು ದುರುಪಯೋಗ ಪಡಿಸಿಕೊಂಡು ಮತ್ತೆ ಅಧಿಕಾರಕ್ಕೆ ರುವ ಅಪಾಯವಿರುವುದರಿಂದ ಇದು ಇನ್ನಷ್ಟು ಮಹತ್ವದ್ದಾಗುತ್ತದೆ. ೀಮುವಾದಿ ಶಕ್ತಿಗಳು ಅದೇ ಸಾಮ್ರಾಜ್ಯಶಾಹಿ-ಪರ ನೀತಿಗಳ ತಿಪಾದಕರಾಗಿರುವುದರಿಂದ ಅವರು ಅಧಿಕಾರಕ್ಕೆ ಮರಳಿದರೆ ನಗಳಿಗೆ ಈ ನೀತಿಗಳಿಂದ ರಕ್ಷಣೆ ಸಿಗುತ್ತದೆ ಎಂದು ರೀಕ್ಷಿಸುವುದಂತೂ ನಿರರ್ಥಕ.

ಆದರೆ ಎಡಪಕ್ಷಗಳು ತಮ್ಮ ಕೆಲಸ ಮಾಡಲು ಧ್ಯವಾಗಬೇಕಾದರೆ ಅವು ಕೇವಲ ಸಾಂಕೇತಿಕ ಹೋರಾಟಗಳನ್ನಷ್ಟೇ ಲ್ಲ, ದೃಢ ಹೋರಾಟಗಳನ್ನು ಹರಿಯಬಿಡಬೇಕಾಗುತ್ತದೆ. ಈ ಮೂಲಕ ಇನ್ನೂ ದೊಡ್ಡ ಹೋರಾಟಗಳಿಗೆ ಕ್ತಿಗೂಡಿಸಿಕೊಳ್ಳಬೇಕಾಗುತ್ತದೆ. ಎಡಶಕ್ತಿಗಳು ಬಲಿಷ್ಟವಾಗುವುದು ನ-ವಿರೋಧಿ ನೀತಿಗಳನ್ನು ಸೋಲಿಸಲಿಕ್ಕಷ್ಟೇ ಅಲ್ಲ, ಇತರ ಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಚಂಚಲತೆಗಳನ್ನು ಮೀರಿ ಲ್ಲಲು ಕೂಡಾ ಅಗತ್ಯ. ಅದೇ ವೇಳೆಗೆ ನಾವು ಕೇಂದ್ರದಲ್ಲಿನ ಾತ್ಯತೀತ ಕೂಟವನ್ನು ಬೆಂಬಲಿಸಲು ಬದ್ಧರಾಗಿದ್ದರೂ ನಮ್ಮ ನಸಮುಹಗಳ ಎದುರು ಒಂದು ನೈಜ ಪರ್ಯಾಯವನ್ನು ುಂದಿಡಲು ಸಾಧ್ಯವಾಗುವಂತೆ ದೇಶದ ದೂರಗಾಮೀ ತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

ತೃತೀಯ ರಂಗ ಮತ್ತು ಸಿಪಿಐ(ಎಂ)

ರಾಜಕೀಯ ವಲಯಗಳಲ್ಲಿ ಮತ್ತೊಮ್ಮೆ ತೃತೀಯ ರಂಗವನ್ನು ಪುನರ್ ಸ್ಥಾಪಿಸುವ ಚರ್ಚೆಯನ್ನು ಪ್ರಾರಂಭಿಸಲಾಗಿದೆ. ಸಮಾಜವಾದಿ ಪಕ್ಷ ಮತ್ತಿತರರು ಹಾಗೂ ಹಿಂದಿನ ಸಂಯುಕ್ತ ರಂಗದ ಕೆಲವು ಅಂಗ ಪಕ್ಷಗಳು ಈ ಪ್ರಸ್ತಾಪವನ್ನು ಮಾಡಿವೆ. ಕಾಂಗ್ರೆಸ್ ಹಾಗೂ ಬಿಜೆಪಿಯೇತರ ರಾಜಕೀಯ ಪರ್ಯಾಯ ರೂಪಿಸಲು ಮುಂಚೂಣಿಯಲ್ಲಿದ್ದವರು ಹಾಗೂ 'ತೃತೀಯ ರಂಗ' ಶಬ್ದಗುಚ್ಛ ಹುಟ್ಟಿಹಾಕಿದ್ದವರೆ ಸಿಪಿಐ(ಎಂ) ನವರು ಎಂದು ವ್ಯಾಪಕವಾಗಿ ಗುರುತಿಸಲಾಗಿರುವ ಕಾರಣ ಈ ಕುರಿತು ದೇಶದ ಪ್ರಸಕ್ತ ರಾಜಕೀಯ ಪರಿಸ್ಥಿತಿಯಲ್ಲಿ ಸಿಪಿಐ(ಎಂ)ನ ಪ್ರತಿಕ್ರಿಯೆಯನ್ನು ಸ್ಪಷ್ಟಪಡಿಸುವುದು ಅಗತ್ಯ.


ಮೊದಲಿಗೆ ಪುನರುಚ್ಚರಿಸಬೇಕಾದ ಅಂಶವೆಂದರೆ ತೃತೀಯ ರಂಗದ ಪ್ರತಿಪಾದನೆ ಮಾಡಿದ್ದ ಸಿಪಿಐ(ಎಂ) ಮತ್ತು ಇಂದು ಸಹಾ ಕಾಂಗ್ರೆಸ್ ಹಾಗೂ ಬಿಜೆಪಿ ಕೋಮುವಾದಿ ಎತ್ತರ ಕಾರ್ಯಸಾಧುವಾಗಬಲ್ಲ ರಾಜಕೀಯ ಪರ್ಯಾಯಕ್ಕಾಗಿ ದುಡಿಯಬಯಸುತ್ತದೆ. ಆದರೆ ಇಲ್ಲಿ ಪ್ರಮುಖವಾಗಿ ಗುರುತಿಸಬೇಕಾದ ಅಂಶವೆಂದರೆ ತೃತೀಯ ರಂಗವನ್ನು ಕೇವಲ ಚುನಾವಣಾ ರಂಗವನ್ನಾಗಿ ಸಿಪಿಐ(ಎಂ) ಮನಗಾಣುವುದಿಲ್ಲ ಎಂಬುದು. ಜನತೆಯ ನಿರಂತರ ಹೋರಾಟ ಮತ್ತು ಚಳುವಳಿಗಳ ಮೂಲಕ ಅಂತಹ ರಂಗವನ್ನು ರೂಪಿಸಬೇಕೆಂದು ಸಿಪಿಐ(ಎಂ)ನ 17ನೇ ಮಹಾಧಿವೇಶನ ನಿರ್ಣಯಿಸಿದೆ. ಭಾರತದ ಜನತೆ ಎದುರಿಸುತ್ತಿರುವ ಎರಡು ಮೂಲಭೂತ ಅಂಶಗಳ ಆಧಾರದಲ್ಲಿ ಅಂದರೆ ಕೋಮುವಾದಿ ವಿರೋಧಿ ಹಾಗೂ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಈ ಹೋರಾಟ ಮತ್ತು ಚಳುವಳಿ ರೂಪಿತವಾಗಬೇಕಿದೆ. ಅಂತೆಯೇ ತಾತ್ವಿಕ ಸಾಮ್ರಾಜ್ಯಶಾಹಿ ವಿರೋಧಿ ನಿಲುಮೆಯನ್ನು ಸಹಾ ಇದು ಒಳಗೊಳ್ಳಬೇಕಿದೆ. ಹಾಗಾಗಿ ಅಂತಹ ಜಂಟಿ ಹೋರಾಟಗಳ ಶಕ್ತಿಯ ಮೇಲೆ ತೃತೀಯ ರಂಗವನ್ನು ನಿರ್ಮಿಸಬೇಕಿದೆ. ಅಂತಹ ರಂಗ ಮಾತ್ರವೇ ಕಾರ್ಯಸಾಧುವಾಗಬಲ್ಲ, ವಿಶ್ವಾರ್ಹ, ಹೆಚ್ಚು ಕಾಲ ಉಳಿಯಬಲ್ಲ ರಾಜಕೀಯ ಪರ್ಯಾಯವಾಗಿ ಹೊರಹೊಮ್ಮಲಿದೆ. ಅಂತಹ ತೃತೀಯ ರಂಗಕ್ಕಾಗಿ ಸಿಪಿಐ(ಎಂ) ಶ್ರಮಿಸುತ್ತದೆ.



ಕೇವಲ ರಾಜಕೀಯ ದೃಷ್ಟಿಯೊಂದಿಗೆ ಮಾತ್ರ ಇಂದು ಕೆಲವು ರಾಜಕೀಯ ಪಕ್ಷಗಳು ತೃತೀಯ ರಂಗವನ್ನು ಪ್ರಸ್ತಾಪಿಸುತ್ತಿವೆ. ಹಿಂದಿನ ಸಂಯುಕ್ತ ರಂಗದ ಕೆಲವು ಅಂಗಪಕ್ಷಗಳು ಕೇವಲ ಅಧಿಕಾರದ ದುರಾಸೆಯೊಂದಿಗೆ, ಬಿಜೆಪಿ ನೇತೃತ್ವದ ಎನ್‌ಡಿಎ ಸೇರುವ ಮೂಲಕ ಕೋಮುವಾದಿ ವಿರೋಧಿ ವೇದಿಕೆಯನ್ನು ತ್ಯಜಿಸಿ, ಸಮಯಸಾಧಕತನವನ್ನು ಪ್ರದರ್ಶಿಸಿವೆ. ಕೆಲವರಂತು ಕೇವಲ ಜಾತ್ಯಾತೀತ ಶಕ್ತಿಗಳನ್ನು ತ್ಯಜಿಸಿದರು ಮಾತ್ರವಲ್ಲದೆ, ತೆಲುಗು ದೇಶಂ ಪಕ್ಷದಂತವರು ವಿಶ್ವಬ್ಯಾಂಕ್ ಆಣತಿಯಂತೆ ಸಾಮ್ರಾಜ್ಯಶಾಹಿಪರ ಜನವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸಲು ಮುಂದಾದರು.

ಇದರೊಟ್ಟಿಗೆ 'ಜನತಾರಂಗ'ದ ಅನುಭವವನ್ನು ಗಮನದಲ್ಲಿರಿಸಬೇಕು. ಇದನ್ನು ಜ್ಯೋತಿಬಸು ಅಧ್ಯಕ್ಷತೆ ಹಾಗೂ ಮುಲಾಯಂ ಸಿಂಗ್ ಸಂಚಾಲಕತ್ವದಲ್ಲಿ ರಚಿಸಲಾಯಿತು. ಕಳೆದ ರಾಷ್ಟ್ರಪತಿ ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ/ ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸುವ ಮೂಲಕ, 'ಜನತಾರಂಗ'ದ ಯತ್ನವನ್ನು ಸಮಾಜವಾದಿ ಪಕ್ಷವು ಭಗ್ನಗೊಳಿಸಿತು. ಕೇವಲ ರಾಜಕೀಯ ಲೆಕ್ಕಾಚಾರ ಮತ್ತು ಚುನಾವಣಾ ಚೌಕಾಸಿಗಷ್ಟೇ ಸೀಮಿತವಾಗುವ ಯಾವುದೇ ರಂಗವು ಸಿಪಿಐ(ಎಂ)ನ ಉದ್ದೇಶಿತ ವಾಸ್ತವವನ್ನು ಈಡೇರಿಸದು. ಜನತೆಯ ಜಂಟಿ ಹೋರಾಟದ ಅಸ್ತ್ರದ ಮೂಲಕ ಜನತೆಯ ಹಾಗೂ ರಾಷ್ಟ್ರದ ಹಿತಾಸಕ್ತಿಗಳನ್ನು ಪ್ರತಿಪಾದಿಸುವ ಹಾಗೂ ಭಾರತದ ರಾಜಕೀಯಕ್ಕೆ ಪ್ರಗತಿಪರ ತಿರುವಿನ ಕೊಡುಗೆ ನೀಡಬಹುದಾದ ರಂಗವೇ ಸಿಪಿಐ(ಎಂ) ಕಣ್ಣೋಟದ ತೃತೀಯ ರಂಗ.

ಜನಪರ ಅಜೆಂಡಾ ಆಧಾರಿತ ಜಂಟಿ ಜನಪ್ರಿಯ ಹೋರಾಟಗಳ ಮೇಲೆ ಅಂತಹ ರಂಗವನ್ನು ರಚಿಸಬಯಸುವಾಗಲೇ ಕೋಮುವಾದಿ ಶಕ್ತಿಗಳನ್ನು ಪ್ರಭುತ್ವದ ಅಧಿಕಾರದಿಂದ ದೂರವಿಡುವ ಸಲುವಾಗಿ ಸಿಪಿಐ(ಎಂ) ಇತರೆ ಮೈತ್ರಿಯನ್ನು ಬಯಸುತ್ತದೆ. ಇಂತಹ ಅಭಿವ್ಯಕ್ತ ಉದ್ದೇಶಕ್ಕಾಗಿಯೇ ಕೇಂದ್ರದಲ್ಲಿನ ಯುಪಿಎ ಸರ್ಕಾರಕ್ಕೆ ಸಿಪಿಐ(ಎಂ) ಬೆಂಬಲ ನೀಡಿರುವುದು. ಹಾಗೆಯೇ ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷವು ಪ್ರಮುಖ ಕೋಮುವಾದಿ ವಿರೋಧಿ ರಾಜಕೀಯ ಶಕ್ತಿಯಾಗಿರುವ ಕಾರಣ ಅದಕ್ಕೆ ಬೆಂಬಲ ನೀಡಲಾಗಿದೆ. ಅಂತೆಯೇ ಮುಂಬರುವ ಬಿಹಾರ ಮತ್ತು ಝಾರ್‌ಖಂಡ್ ಚುನಾವಣೆಗಳಿಗೆ ಸ್ಥಳೀಯ ಜಾತ್ಯಾತೀತ ಮೈತ್ರಿಗಳನ್ನು ಸಿಪಿಐ(ಎಂ) ಬಯಸುತ್ತದೆ. ಆದರೂ ಇದು ಪ್ರತಿ ರಾಜ್ಯದ ನಿರ್ದಿಷ್ಟ ಪರಿಸ್ಥಿತಿಯ ಮೇಲೆ ಇದು ಅವಲಂಬಿತವಾಗಿದೆ.



ಹಾಗಾಗಿ 14ನೇ ಲೋಕಸಭೆಯ ರಾಜಕೀಯ ಗಣಿತದಿಂದಾಗಿ ಪ್ರಸಕ್ತ ರಾಷ್ಟ್ರದ ಪರಿಸ್ಥಿತಿಯಲ್ಲಿ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರವಿರಿಸಲು ಯುಪಿಎ ಸರ್ಕಾರಕ್ಕೆ ಬೆಂಬಲ ನೀಡದೇ ಬೇರೆ ಪರ್ಯಾಯವಿಲ್ಲ.

ಕೋಮುವಾದದ ವಿರೋಧಿ ಹೋರಾಟದಲ್ಲಿ ಸಿಪಿಐ(ಎಂ) ರಾಜಿ ಮಾಡಿಕೊಳ್ಳದು.

ಇದೇ ಸಮಯದಲ್ಲಿ ಮೇಲಿನ 2 ವಿಷಯಗಳ ಆಧಾರದಲ್ಲಿ ಇತರೆ ಸಮಾನ ಮನಸ್ಕ ಶಕ್ತಿಗಳೊಂದಿಗೆ ಜಂಟಿ ಹೋರಾಟಗಳನ್ನು ಬೆಳೆಸಲು ಸಿಪಿಐ(ಎಂ) ಕೆಲಸ ಮಾಡಲಿದೆ. ಹಿಂದಿನ ಅನುಭವಗಳು ತೋರುವ ಅಂಶವೆಂದರೆ, ಒಮ್ಮೆ ಇಂತಹ ಹೋರಾಟಗಳು ಪ್ರಾಭಲ್ಯ ಪಡೆದಂತೆ, ನಮ್ಮೊಂದಿಗಿರದ ಅನೇಕ ಶಕ್ತಿಗಳು ನಮ್ಮೊಂದಿಗೆ ಸೇರಲಿವೆ. 1994 ರಲ್ಲಿ ವಿಶ್ವವ್ಯಾಪಾರ ಸಂಘಟನೆಗೆ ಎಡೆಮಾಡಿದ ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿದ್ದನ್ನು ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಮಾತ್ರವೇ ಪ್ರತಿಭಟಿಸಿದ್ದು. ಆದರೆ ಡಬ್ಲ್ಯುಟಿಓನ ದೋಹಾ ಹಾಗೂ ಕ್ಯಾಂಕನ್ ಸಭೆಗಳ ಸಮಯದಲ್ಲಿ ಸಮಾಜವಾದಿ ಪಕ್ಷ, ಜನತಾದಳ(ಎಸ್) ರಾಷ್ಟ್ರೀಯ ಜನತಾದಳ ಮತ್ತಿತರೆ ಸಾಮಾಜಿಕ ಚಳುವಳಿಗಳು, ಕಾರ್ಯಕರ್ತರು, ಗುಂಪುಗಳು ಮತ್ತಿತರರು ಡಬ್ಲ್ಯುಟಿಓ ವಿರೋಧಿ ಪ್ರತಿಭಟನೆಗಳಲ್ಲಿ ಭಾಗವಹಿಸಿದರು. ವಿಶ್ವ ಸಾಮಾಜಿಕ ವೇದಿಕೆ ಚಳುವಳಿಯಲ್ಲಿ ಇಂತಹದೇ ಅನುಭವ ನಮ್ಮದಾಗಿದೆ.

ಹಾಗಾಗಿ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧದ ಜನರ ಅತೃಪ್ತಿ ಹೆಚ್ಚಿದಂತೆ ಅದು ಪ್ರಭಲ ಹೋರಾಟಗಳ ಮೂಲಕ ಪ್ರತಿಫಲನಗೊಳ್ಳಲಿದೆ. ಸಂಯುಕ್ತ ಹೋರಾಟಗಳ ಮೂಲಕ ಸಿಪಿಐ(ಎಂ) ಈ ಅತೃಪ್ತಿಯನ್ನು ಕೈಗೆತ್ತಿಕೊಳ್ಳಲಿದೆ. ಈ ಹೋರಾಟಗಳ ಶಕ್ತಿಯು ಇತರೆ ಶಕ್ತಿಗಳನ್ನು ಜಂಟಿ ಕಾರ್ಯಾಚರಣೆಗೆ ಸೆಳೆಯಲಿದೆ. ಜನಸಮೂಹಗಳ ಜೀವನ ಪರಿಸ್ಥಿತಿ ಅದೋಗತಿಗೆ ಹೋದಂತೆ ಅನೇಕ ರಾಜಕೀಯ ಶಕ್ತಿಗಳು ತಮ್ಮದೇ ಆದ ಸಾಮಾಜಿಕ ನೆಲೆಯಿಂದ ಅದರ ಕಾವನ್ನು ಅನುಭವಿಸಲಿವೆ. ಇದು ಅವರನ್ನು ಸಂಯುಕ್ತ ಪ್ರತಿಭಟನೆಗಳೆಡೆಗೆ ದೂಡಲಿವೆ. ಈ ಆಧಾರದಲ್ಲಿ ಸಿಪಿಐ(ಎಂ) ಕಣ್ಣೋಟದ 'ತೃತೀಯ ರಂಗ' ರೂಪಿಸಬೇಕಿದೆ.

ಕೇವಲ ರಾಜಕೀಯ ಲೆಕ್ಕಾಚಾರ ಹಾಗೂ ಚುನಾವಣಾ ಚೌಕಾಶಿಗಾಗಿ 'ತೃತೀಯರಂಗ' ಕುರಿತ ಕೇವಲ ಮಾತುಗಳ ಮೇಲಿನ ಉದ್ದೇಶಗಳನ್ನು ಈಡೇರಿಸವು ಮಾತ್ರವಲ್ಲದೆ ಕೋಮುವಾದಿ ಶಕ್ತಿಗಳು ಕೇಂದ್ರ ಸ್ಥಾನಕ್ಕೆ ಬರಲು ಅನುವುಗೊಳಿಸಲಿವೆ. ಇಂದಿನ ಭಾರತವನ್ನು ಬಲ್ಲ ಯಾರಾದರೂ ಅಂತಹುದಕ್ಕೆ ಅನುಮತಿಸರು.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಉಡುಪಿ ಜಿಲ್ಲಾ 2ನೇ ಸಮ್ಮೇಳನ



ಜನಪರ ಹೋರಾಟಗಳನ್ನು ಬೆಳೆಸಲು ಕರೆ

ಸಿಪಿಐ(ಎಂ) ನ ಉಡುಪಿ ಜಿಲ್ಲಾ 2ನೇ ಸಮ್ಮೇಳನದ ಆರಂಭದಲ್ಲಿ ಜಿಲ್ಲಾ ಹಿರಿಯ ಮುಖಂಡ ಡೇವಿಡ್ ಎ.ಕರ್ಕಡರವರು ಧ್ವಜಾರೋಹಣ ಮಾಡಿ, ಜಿಲ್ಲೆಯಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಬೆಳೆಸಲು ಎಲ್ಲಾ ರೀತಿಯಲ್ಲಿ ಶ್ರಮಿಸಬೇಕೆಂದು ಹೇಳಿದರು.

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕೆ.ಆರ್ ಶ್ರೀಯಾನ್ ರವರು ಸಮ್ಮೇಳನದ ಉದ್ಘಾಟನೆ ಮಾಡುತ್ತಾ ಅಮೇರಿಕದ ಯುದ್ಧಖೋರ ನೀತಿಯನ್ನು ವಿವರಿಸಿದರು. ಈ ಹಿಂದಿನ ಎನ್‌ಡಿಎ ಸರಕಾರದ ಜನವಿರೋಧಿ ನೀತಿಯನ್ನು ಹಾಗೂ ಈಗಿನ ಕೇಂದ್ರ ಸರಕಾರದ ನೀತಿಯ ಕುರಿತು ವಿಶ್ಲೇಷಿಸಿದರು.

ಕೇಂದ್ರ ಸರಕಾರ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ವನ್ನು ಜಾರಿ ಮಾಡಲು ಮುಂದಾಗದಿದ್ದಲ್ಲಿ ದುಡಿಯುವ ಜನತೆಯ ಪ್ರತಿಭಟನೆ ಬರಬೇಕಾಗಿದೆ. ಸಿಪಿಐ(ಎಂ) ಪಕ್ಷ ಅದಕ್ಕೆ ನೇತೃತ್ವ ಕೊಡಬೇಕಾಗಿ ಬರುತ್ತದೆ. ಜನತೆಯ ಹಿತಕ್ಕಾಗಿ ಜನಪರ ಹೋರಾಟವನ್ನು ಬೆಳೆಸಬೇಕೆಂದು ಕರೆ ನೀಡಿದರು.



ಈ ದೇಶದ ದುಡಿಯುವ ಜನತೆಯ ಹಿತಕ್ಕಾಗಿ, ದೇಶದ ಸಮಗ್ರತೆ - ಐಕ್ಯತೆಯನ್ನು ರಕ್ಷಿಸಲು ದೇಶವ್ಯಾಪಿ ಸಿಪಿಐ(ಎಂ) ಚಳುವಳಿಯನ್ನು ರೂಪಿಸಲು ನಿರ್ಧರಿಸಿದೆ. ಪ್ರಜಾಸತ್ತಾತ್ಮಕ ರೀತಿಯಲ್ಲಿ ಪ್ರತಿ 3 ವರ್ಷಕ್ಕೊಮ್ಮೆ ಪಕ್ಷದ ಶಾಖೆಗಳ ಸಮ್ಮೇಳನಗಳನ್ನು ಮಾಡಿ ತಾಲ್ಲೂಕು, ಪ್ರದೇಶ, ಜಿಲ್ಲಾ, ರಾಜ್ಯ ಹಾಗೂ ಅಖಿಲ ಭಾರತ ಮಟ್ಟದಲ್ಲಿ ಪಕ್ಷದ ಅಧಿವೇಶನಗಳನ್ನು ನಡೆಸಿ ಸಮಿತಿಗಳನ್ನು ರಚಿಸುವ ಮೂಲಕ ಪ್ರಜಾಪ್ರಭುತ್ವ ಮತ್ತು ಕೇಂದ್ರೀಕೃತ ಪ್ರಜಾಪ್ರಜಾಭುತ್ವದ ಕ್ರಮಗಳನ್ನು ಪ್ರತಿ ಹಂತದಲ್ಲೂ ಪ್ರಾಯೋಗಿಕವಾಗಿ ಕಾರ್ಯಾಚರಣೆ ನಡೆಸುತ್ತಾ ಇದ್ದೇವೆ. ಬಂಡವಾಳಶಾಹಿಯಂತಹ ಇತರ ಪಕ್ಷಗಳಲ್ಲಿ ಈ ವಿಧಾನ ಇಲ್ಲ. ಆ ಪ್ರಯುಕ್ತ ಬಂಡವಾಳಶಾಹಿ ಪಕ್ಷಗಳು ಜನರಿಂದ ದೂರವಾಗುತ್ತಾ ಇವೆ. ಬೇರೆ ಪಕ್ಷಗಳಲ್ಲಿ ಆಂತರಿಕ ತಿಕ್ಕಾಟ, ಗುಂಪುಗಾರಿಕೆ ಹಾಗೂ ಸರ್ವಾಧಿಕಾರೀ ಪ್ರವೃತ್ತಿ ಬೆಳೆಯುತ್ತಿದೆ.

ಈ ದೇಶದ ಜನರ ಹಿತಕ್ಕಾಗಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಯನ್ನು ಬೆಳೆಸುತ್ತಾ, ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಜನಪರ ಬೇಡಿಕೆಗಳಿಗಾಗಿ ಸಂಘಟಿತ ಹೋರಾಟ ನಡೆಸಲು ಮುಂದಾಗಬೇಕೆಂದು ಕರೆ ನೀಡಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಡೇವಿಡ್ ಎ.ಕರ್ಕಡರವರು ವಹಿಸಿದರು. ಸಿಪಿಐ(ಎಂ) ನ ಜಿಲ್ಲಾ ಕಾರ್ಯದರ್ಶಿ ಯವರಾದ ಕೆ.ಶಂಕರ್‌ರವರು ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಕಾರ್ಯ ದರ್ಶಿ ಮಂಡಳಿಯ ಸದಸ್ಯರಾದ ಮಹಾಬಲ ಒಡೇರ ಹೋಬಳಿ ಯವರು ವಂದನಾರ್ಪಣೆ ಮಾಡಿದರು.

ಮೆರವಣಿಗೆ ಮತ್ತು ಸಾರ್ವಜನಿಕ ಸಭೆ

ಸಮ್ಮೇಳನದ ಬಹಿರಂಗ ಅಧಿವೇಶನದ ಅಂಗವಾಗಿ 20.12.2004 ರಂದು ಕುಂದಾಪುರದಲ್ಲಿ ಬೃಹತ್ ಮೆರವಣಿಗೆ ಶಾಸ್ತ್ರ ಸರ್ಕಲಿನಿಂದ ಹೊರಟು ನಗರದ ಸುತ್ತು ಬಂದು ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಿಪಿಐ(ಎಂ) ಕುಂದಾಪುರ ತಾಲ್ಲೂಕು ಸಮಿತಿಯ ಕಾರ್ಯದರ್ಶಿಯುವರಾದ ಮಹಾಬಲ ವಡೇರಹೋಬಳಿಯುವರು ಆರಂಭದಲ್ಲಿ ಸಮ್ಮೇಳನದ ಮಹತ್ವವನ್ನು ವಿವರಿಸಿ ಎಲ್ಲರನ್ನೂ ಸ್ವಾಗತಿಸಿದರು.

ಸಭೆಯ ಅಧ್ಯಕ್ಷತೆಯನ್ನು ಮರು ಆಯ್ಕೆಗೊಂಡ ಜಿಲ್ಲಾ ಸಮಿತಿಯ ಕಾರ್ಯದರ್ಶಿಯುವರಾದ ಕೆ.ಶಂಕರ್ ವಹಿಸಿ ಸಭಾ ಕಾರ್ಯಕಲಾಪಗಳನ್ನು ನಡೆಸಿದರು.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಬಿ.ಮಾಧವನವರು ಮಾತನಾಡಿ, ಕೇಂದ್ರ ಸರಕಾರಕ್ಕೆ ಎಡಪಕ್ಷಗಳಿಂದ ಹೊರಗಿನಿಂದ ಬೆಂಬಲ ನೀಡಿದ ಬಗ್ಗೆ ಸಮರ್ಥಿಸುತ್ತಾ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಜನಪರ ಅಂಶಗಳನ್ನು ಜಾರಿಗೊಳಿಸಲು ಸಂಘಟನೆ ಮತ್ತು ಹೋರಾಟ ಹಾಗೂ ಐಕ್ಯ ಹೋರಾಟಗಳನ್ನು ನಡೆಸಿ ಸರಕಾರದ ಮೇಲೆ ಒತ್ತಡ ಹೇರುವುದು ಅಗತ್ಯವಿದೆ ಎಂದು ಹೇಳಿದರು. ಅದೇ ವೇಳೆಗೆ ಎಡ ಪಕ್ಷಗಳ ಮಧ್ಯಪ್ರವೇಶವನ್ನು ಬಲಪಡಿಸುವ ರಾಜಕೀಯ ಕರ್ತವ್ಯದ ಅವಿಭಾಜ್ಯ ಅಂಗ, ಇಂತಹ ಮಧ್ಯಪ್ರವೇಶ ಜಾತ್ಯಾತೀತ ಆಡಳಿತವನ್ನು ಉಳಿಸಲು, ಕೋಮುವಾದಿ ಶಕ್ತಿಗಳನ್ನು ದೂರ ಇರಿಸಲು ಅಗತ್ಯವೆಂದು ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿಯುವರು ಸಭೆಯನ್ನುದ್ದೇಶಿಸಿ ಮಾತನಾಡಿ ಸಮ್ಮೇಳನದ ನಿರ್ಣಯಗಳನ್ನು ವಿವರಿಸಿ, ಬಾಬಾಬುಡನ್‌ಗಿರಿ ಯಲ್ಲಿ ಕೋಮುಸೌಹಾರ್ದಕ್ಕಾಗಿ ಹೈಕೋರ್ಟು ತೀರ್ಪು ಹಾಗೂ ಅದನ್ನು ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟಿನ ತೀರ್ಪಿಗೆ ಅನುಸಾರವಾಗಿ, ಕೇವಲ 1975 ರ ಹಿಂದೆ ಇದ್ದ ಆಚರಣೆಗಳಿಗೆ ಮಾತ್ರ ಅವಕಾಶವಿರಬೇಕು. ಯಾವುದೇ ಹೊಸ ಆಚರಣೆಗಳಿಗೆ ಕಿಂಚಿತ್ ಅವಕಾಶ ನೀಡಬಾರದು. ಸರಕಾರ ಈ ಪ್ರಯತ್ನ ಗಳನ್ನು ದೃಢವಾಗಿ ಎದುರಿಸಬೇಕು ಎಂದು ಒತ್ತಾಯಿಸಿದರು.

ಕಂಚಿ ಸ್ವಾಮಿಗಳು ಕೊಲೆ ಕೃತ್ಯದ ಒಳಸಂಚಿನ ಆರೋಪದ ಮೇಲೆ ಬಂಧನದಲ್ಲಿರುವ ಬಗ್ಗೆ ಬಿಜೆಪಿ, ವಿಹೆಚ್‌ಪಿ ಮೊದಲಾದ ಸಂಘಪರಿವಾರದ ಆರ್ಭಟ ಮತ್ತು ಅಬ್ಬರಗಳು ಪ್ರಜಾಪ್ರಭುತ್ವ ಮೂಲ ತತ್ವಗಳಿಗೆ ನ್ಯಾಯಾಲಯಗಳು ತಮ್ಮ ಕೆಲಸವನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸಲಿಕ್ಕೆ ಕೊಡಲ್ಪಿ ಪೆಟ್ಟಾಗಿದೆ. ಕಾನೂನು ಎಲ್ಲರಿಗೂ ಸಮಾನವಾಗಿದೆ ಎಂದು ಹೇಳಿದರು. ಜನತೆ ಬೆಲೆ ಏರಿಕೆಗಳ ವಿರುದ್ಧ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಪ್ರತಿಭಟನೆಗೆ ಮುಂದಾಗಬೇಕೆಂದು ಕರೆ ನೀಡಿದರು.

ಕೆ.ಶಂಕರ್ ಜಿಲ್ಲಾ ಕಾರ್ಯದರ್ಶಿಯಾಗಿ ಮರು ಆಯ್ಕೆಗೊಂಡರು. ಡೇವಿಡ್ ಎ.ಕರ್ಕಡ, ಪಿ.ವಿಶ್ವನಾಥ್ ರೈ, ಮಹಾಬಲ ಒಡೇರಹೋಬಳಿ, ಸಿ.ನಾರಾಯಣ, ಯು.ದಾಸ.ಭಂಡಾರಿ, ದೋಗು ಸುವರ್ಣ, ಚಂದ್ರಶೇಖರ ವಿ., ಎ.ಎಸ್. ಆಚಾರ್ಯ, ರಮೇಶ ಮೆಂಡನ್, ಎಚ್.ವಿಠ್ಠಲ ಪೂಜಾರಿ ಹಾಗೂ ಮುತ್ತಯ್ಯ ಕನ್ಯಾಣ ಇವರು ಜಿಲ್ಲಾ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡರು.

ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಚಂದ್ರಶೇಖರ ವಿ.ಯುವರು ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

- ಕೆ.ಶಂಕರ್

ಸಿಪಿಐ(ಎಂ) ಮಂಗಳೂರು ನಗರ ಸಮ್ಮೇಳನ

ಅಂತರಾಷ್ಟ್ರೀಯ ಮಟ್ಟದಲ್ಲಿ ಇಂದು ಗಂಭೀರ ಪರಿಸ್ಥಿತಿ ಎದುರಾಗಿದೆ. ಸೋವಿಯತ್ ಒಕ್ಕೂಟದ ಪತನದ ಪರಿಣಾಮವನ್ನು ಇಡೀ ಜಗತ್ತಿನ ಜನತೆ ಅನುಭವಿಸುತ್ತಿದೆ. ಇದರ ಲಾಭ ಪಡೆಯಲು ಹೊರಟ ಅಮೇರಿಕಾ ಜಗತ್ತಿನ ಮೇಲೆ ತನ್ನ ಅಧಿಪತ್ಯ ಸಾಧಿಸಲು ಹೊರಟಿದೆ. ಇರಾಕ್, ಯುಗೋಸ್ಲಾವಿಯಾ, ಅಫಘಾನಿಸ್ತಾನ, ಮುಂತಾದ ರಾಷ್ಟ್ರಗಳ ಮೇಲೆ ವಿನಾಃ ಕಾರಣ ಧಾಳಿ ನಡೆಸಿ ಲಕ್ಷಾಂತರ ಅಮಾಯಕ ಮುಗ್ಧ ಜನತೆಯನ್ನು ಬಲಿ ತೆಗೆದುಕೊಂಡಿದೆ. ಅಮೇರಿಕಾದ ಇಂತಹ ಆಕ್ರಮಣಕಾರಿ ನೀತಿಯ ವಿರುದ್ಧ ಜಗತ್ತಿನೆಲ್ಲೆಡೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಬಲಗೊಳ್ಳುತ್ತಿದೆ ಎಂದು ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವರವರು ಅಭಿಪ್ರಾಯಪಟ್ಟರು.

ಅವರು 26.12.2004ರಂದು ಬಜಾಲ್ ಪಕ್ಕಲಡ್ಕದಲ್ಲಿ ಜರುಗಿದ ಸಿಪಿಐ(ಎಂ) ಮಂಗಳೂರು ನಗರ ಸಮ್ಮೇಳನವನ್ನು ಉದ್ಘಾಟಿಸುತ್ತಾ ಈ ಮಾತನಾಡಿದರು.

ವಿಶ್ವಬ್ಯಾಂಕ್ ರಾಜ್ಯಗಳಿಗೆ ನೇರವಾಗಿ ಸಾಲ ಕೊಡುವ ಕ್ರಮಕ್ಕೆ ಕಳೆದ ವಾಜಪೇಯಿ ಸರ್ಕಾರವು ಒಪ್ಪಿಗೆ ನೀಡಿದ್ದರ ಫಲವಾಗಿ ರಾಜ್ಯದ ಆರ್ಥಿಕತೆಯನ್ನೇ ಬಲಿಕೊಟ್ಟಿದೆ. 2004 ರ ಮಹಾಚುನಾವಣೆಗೆ ಭಾರೀ ಮಹತ್ವವಿತ್ತು. ಸಂಪೂರ್ಣ ಬಹುಮತದಿಂದ ಅಧಿಕಾರಕ್ಕೇರುತ್ತೇನೆಂದು ನಂಬಿದ ಬಿಜೆಪಿಗೆ ತೀರಾ ಮುಖಭಂಗವಾಗಿದೆ. ಎನ್‌ಡಿಎ ಸರ್ಕಾರದ ಸೋಲು-ದೇಶದ ಪ್ರಜಾಪ್ರಭುತ್ವದ ಗೆಲುವಾಗಿದೆ. ಹಿಂದೂ ಧರ್ಮಕ್ಕೆ ಅಪಾಯ ಬಂದಿದೆ ಎಂದು ಸಂಘಪರಿವಾರದವರು ಜನತೆಯನ್ನು ದಾರಿ ತಪ್ಪಿಸುತ್ತಿದ್ದಾರೆ. ಹಿಂದೂ ಧರ್ಮ ಉಳಿದಿರುವುದು ಸಂಘಪರಿವಾರದಿಂದಲ್ಲ" ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕೆ.ಯಾದವ ಶೆಟ್ಟಿಯವರು ವಹಿಸಿದ್ದರು. ವೇದಿಕೆಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಮುಖಂಡರಾದ ಜೆ.ಬಾಲಕೃಷ್ಣಶೆಟ್ಟಿ, ವಸಂತ ಆಚಾರಿ, ಕೃಷ್ಣಪ್ಪ ಕೊಂಚಾಡಿ, ಬಾಬು ದೇವಾಡಿಗ ಹಾಗೂ ಬಜಾಲ್ ಶಾಖಾ ಕಾರ್ಯದರ್ಶಿ ಸುರೇಶ್ ಬಜಾಲ್‌ರವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಧ್ವಜಾರೋಹಣವನ್ನು ಸಿಪಿಐ(ಎಂ) ಪಕ್ಷದ ಹಿರಿಯ ಸದಸ್ಯರಾದ ಪೂವಪ್ಪ ಸಾಲ್ಯಾನ್‌ರವರು ನೆರವೇರಿಸಿದರು. ಕಳೆದ ಸಮ್ಮೇಳನದಿಂದೀಚೆಗೆ ಅಗಲಿದ ಸಿಪಿಐ(ಎಂ) ಪಕ್ಷದ ನಾಯಕರಿಗೆ ಶ್ರದ್ಧಾಂಜಲಿ ನಿರ್ಣಯವನ್ನು ಸುನೀಲ್ ಕುಮಾರ್ ಬಜಾಲ್‌ರವರು ಮಂಡಿಸಿದರು.


ಸ್ವಾಗತ ಸಮಿತಿಯ ಅಧ್ಯಕ್ಷರಾದ ನಾಗೇಶ್‌ಶೆಟ್ಟಿಯವರು ಸ್ವಾಗತಿಸಿದರೆ, ದೀಪಕ್ ಬಜಾಲ್‌ರವರು ವಂದಿಸಿದರು.

ಹೊಸ ನಗರ ಸಮಿತಿ

ಮಂಗಳೂರು ನಗರದಲ್ಲಿರುವ ಹಲವಾರು ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚರ್ಚಿಸಿದ ಸಮ್ಮೇಳನವು ನಿರ್ಣಯಗಳನ್ನು ಕೈಗೊಂಡು ಮುಂದಿನ ದಿನಗಳಲ್ಲಿ ಹೋರಾಟ ರೂಪಿಸಲು ತೀರ್ಮಾನಿಸಿದೆ.

11 ಜನರ ನೂತನ ನಗರ ಸಮಿತಿಯನ್ನು ಆಯ್ಕೆ ಮಾಡಿತು. ನೂತನ ಕಾರ್ಯದರ್ಶಿಯಾಗಿ ಜೆ.ಬಾಲಕೃಷ್ಣ ಶೆಟ್ಟಿಯವರು ಸರ್ವಾನುಮತದಿಂದ ಪುನರಾಯ್ಕೆಗೊಂಡರು.

ನಗರ ಸಮಿತಿ ಸದಸ್ಯರಾಗಿ ವಸಂತ ಆಚಾರಿ, ಯಾದವಶೆಟ್ಟಿ, ಸುನಿಲ್‌ಕುಮಾರ್ ಬಜಾಲ್, ಶಶಿಧರ್ ಶಕ್ತಿನಗರ, ಕೃಷ್ಣಪ್ಪ ಕೊಂಚಾಡಿ, ಸದಾಶಿವಶೆಟ್ಟಿ, ಪೂವಪ್ಪ ಸಾಲ್ಯಾನ್,ಜೆ.ವೀರಪ್ಪ, ಬಾಬು ದೇವಾಡಿಗ, ಉದಯಚಂದ್ರ ರೈರವರನ್ನು ಆರಿಸಲಾಯಿತು.



Printed & Published by Communist Party of India (M...

ಸಾಂಸ್ಕೃತಿಕ ಕಲೆಗಳಿಗೆ ಜೀವ ತುಂಬಿದ ಹಂಪಿ ಉತ್ಸವ

ಜಾಗತೀಕರಣದ ಪ್ರಕ್ರಿಯೆಯಲ್ಲಿ ನಶಿಸಿ ಹೋಗುತ್ತಿರುವ ಗ್ರಾಮೀಣ, ಜನಪದ, ಸಾಂಸ್ಕೃತಿಕ ಕಲೆಗಳಿಗೆ ಜೀವ ತುಂಬುವ, ಪ್ರೋತ್ಸಾಹಿಸುವ ಕೆಲಸ ಹಂಪಿ ಉತ್ಸವದಲ್ಲಿ ನಡೆಯುತ್ತಿರುವುದು ಅಭಿನಂದನಾರ್ಹ ವಿಷಯ.

ವಿಶ್ವಪ್ರಸಿದ್ದಿ ಹಂಪಿಯಲ್ಲಿ ಪ್ರತಿವರ್ಷ ನವೆಂಬರ್ 3,4,5 ಈ ಮೂರು ದಿನಗಳ ಕಾಲ ಸ್ಥಳೀಯ ಮತ್ತು ರಾಜ್ಯದ ಹಾಗೂ ದೇಶದ ವಿವಿಧ ಭಾಗಗಳಲ್ಲಿ ಅಡಗಿರುವ ಕಲಾಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಭಾರತದ ದೇಶದ ಹಾಗೂ ಕರ್ನಾಟಕ ರಾಜ್ಯದ ಅದರಲ್ಲೂ ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಜನಪದ, ಸಾಂಸ್ಕೃತಿಕ ಕಲೆಗಳನ್ನು ಮೆಲುಕು ಹಾಕುವ ಒಂದು ಪ್ರಯತ್ನ ಇಲ್ಲಿ ಪ್ರತಿವರ್ಷ ನಡೆಯುತ್ತಿದೆ.

ಕಳೆದ ನವೆಂಬರ್- 3 ರಂದು ಸಂಜೆ ಉದ್ಘಾಟನಾ ಸಮಾರಂಭ ಮುಗಿಯುತ್ತಿದ್ದಂತೆಯೇ ಪ್ರಮುಖ ವೇದಿಕೆಗಳಾದ ಲಕ್ಕಣ್ಣ ದಂಡೇಶ ವೇದಿಕೆ (ಮುಖ್ಯವೇದಿಕೆ), ಹರಿಹರ ವೇದಿಕೆ ಕಂದಗಲ್ ಹನುಮಂತರಾಯ ವೇದಿಕೆ, ಕನಕ ವೇದಿಕೆಗಳಲ್ಲಿ ಏಕಕಾಲಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಶುರುವಾದವು.

ಮೂರು ದಿನಗಳ ಕಾಲ ಎಡೆಬಿಡದೇ ಕಾರ್ಯಕ್ರಮಗಳು ನಡೆದವು. ಸುಗಮ ಸಂಗೀತ, ಶಾಸ್ತ್ರೀಯಸಂಗೀತ, ವಚನ ಸಂಗೀತ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನಾಟಕಗಳು, ಭರತನಾಟ್ಯಗಳು, ಡೊಳ್ಳುಕುಣಿತ ಲಂಬಾಣಿ ನೃತ್ಯ, ಸುಗ್ಗಿ ಕುಣಿತ, ಕೋಲಾಟ, ಕುಸ್ತಿಪಂದ್ಯಾವಳಿ, ತೊಗಲು ಗೊಂಬೆಯಾಟ, ಅಲ್ಲದೇ ಹೊರರಾಜ್ಯದ ಕಲೆಗಳಾದ ಸಾರ್ರೈಕಲಾಚಾ, ತಪ್ಪಟಂ, ಗಾತಿಕಾ, ತಗರಿಗಜಾ ಹೀಗೆ ವಿವಿಧ ರೀತಿಯ ಕಲೆಗಳು ಪ್ರದರ್ಶನಗೊಂಡು ಜನಮನ ಸೂರೆಗೊಂಡವು.

ಸಿನಿಮಾ, ಟಿ.ವಿಯ ಮಾಯಾಲೋಕದಲ್ಲಿನ ಇಂತಹ ಸಂದರ್ಭದಲ್ಲಿ ಮೇಲೆ ತಿಳಿಸಿರು... ಎಲ್ಲಾ ಕಲೆಸಾಹಿತಿಗಳು ಜನರ ಮನಸ್ಸುಗಳನ್ನು ಪರ್ಯಾಯ ದಿಕ್ಕಿಗೆ ಕೊಂಡೊಯ್ಯುತ್ತಿರುವಂತೆ ಹಂಪಿ ಉತ್ಸವದಲ್ಲಿ ಪಾಲ್ಗೊಂಡಿದ್ದ ಅಸಂಖ್ಯ ಜನರಿಂದ ತಿಳಿಯುತ್ತದೆ. ಅಷ್ಟು ಮಾತ್ರವಲ್ಲದೆ, ಪುಸ್ತಕ ಪ್ರದರ್ಶನ, ವಸ್ತುಪ್ರದರ್ಶನ ಮತ್ತು ಮಾರಾಟವನ್ನೂ ಸಹ ಏರ್ಪಡಿಸಲಾಗಿತ್ತು. ವಿಶೇಷವಾಗಿ ಈ ವರ್ಷ ಬಾಣ ಬಿರುಸುಗಳ ಪ್ರದರ್ಶನವು ಎಲ್ಲವನ್ನೂ ಆಕರ್ಷಿಸಿತು.


ದಸರಾ ಉತ್ಸವದಂತೆಯೂ ಗ್ರಾಮೀಣ ಜನಪದ ಸಾಂಸ್ಕೃತಿಕ ಕಲೆಗಳನ್ನು ಜೀವಂತವಾಗಿಡುವ ಕೆಲಸ ಹಂಪಿ ಉತ್ಸವದಲ್ಲಿ ನಡೆದಿರುವುದು ಸಂತೋಷ ತರುವ ವಿಷಯ.

ದೇಶ, ಭಾಷೆ, ಗಡಿ-ರೇಖೆ, ಜಾತಿ-ಧರ್ಮ ಎನ್ನದೇ ಬಹುಸಂಸ್ಕೃತಿಯ ಬಹುರೂಪಿ ಕಲೆಗಳು ಪ್ರದರ್ಶನಗೊಂಡು ಸೌಹಾರ್ದತೆ ಮೆರೆದಿರುವುದು ಗಮನಾರ್ಹ ವಿಷಯ.

“ನೈಜ ಇತಿಹಾಸ ಮರೆಸುವ ‘ವಿಜಯನಗರ ವೈಭವ”

ಧ್ವನಿ ಬೆಳಕು

ಹಂಪಿ ಉತ್ಸವದಲ್ಲಿ ವಿಶೇಷ ಕಾರ್ಯಕ್ರಮಗಳಲ್ಲೊಂದಾದ ಧ್ವನಿ-ಬೆಳಕು ಕಾರ್ಯಕ್ರಮದಲ್ಲಿ ಸತ್ಯವನ್ನೇ ಮರೆಮಾಡುವ ವೈಭವದ್ದೇ ಕಾರುಬಾರು. ಪ್ರತಿವರ್ಷ ತಪ್ಪದೇ ನಡೆಯುವ ಈ ಕಾರ್ಯಕ್ರಮದಲ್ಲಿ ‘ಕರ್ನಾಟಕ ವೈಭವ’, ‘ವಿಜಯನಗರ ವೈಭವ’, ಎಂಬ ವಿಷಯಗಳನ್ನಾಧರಿಸಿ ವೈಭವವನ್ನು ವೈಭವೀಕರಿಸುವುದರೊಂದಿಗೆ ಭವ್ಯ ವಿಜಯನಗರ ಸಾಮ್ರಾಜ್ಯದಲ್ಲಿ ಸತ್ತ ಶವದ ಮೇಲೆಯೂ ತೆರಿಗೆ ಹಾಕಿದ್ದು (ಕೆಲವರನ್ನು ಹೊರತುಪಡಿಸಿ) ಅನೇಕರಿಗೆ ಗೊತ್ತಿಲ್ಲದಿರುವ ಇತಿಹಾಸ. ಅಷ್ಟು ಮಾತ್ರವಲ್ಲದೆ ಮುತ್ತು-ರತ್ನಗಳನ್ನು ಸೇರಿನಲ್ಲಿ ಅಳೆಯುತ್ತಾ ಬಜಾರ್‌ನಲ್ಲಿ ಮಾರಾಟ ಮಾಡುತ್ತಿದ್ದ (ನಂಬಲರ್ಹ ವಿಷಯ) ಇಂತಹ ವಿಶ್ವಪ್ರಸಿದ್ಧಿ ಹಂಪೆಯಲ್ಲಿ



ರಾಜಾರೋಷವಾಗಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಬಜಾರವೇ (ಸೂಳೆ ಬಜಾರ್) ಇತ್ತೆನ್ನುವುದಾದರೆ ಇಂತಹ ವೈಭವದ ಸಾಮ್ರಾಜ್ಯದಲ್ಲಿ ಬಡತನ, ನಿರುದ್ಯೋಗ ದಾರಿದ್ರ್ಯ ಇತ್ತೆನ್ನುವುದೂ ಅಷ್ಟೇ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬಹುದಾದ ವಿಷಯ. ಜೊತೆಗೆ ವಿಜಯನಗರ ಸಾಮ್ರಾಜ್ಯದ ಅವನತಿ ಮುಸ್ಲೀಮರಿಂದಲೇ ಆದುದು, ಎಂದು ಪಠ್ಯ ಪುಸ್ತಕಗಳಲ್ಲಿ ಮುದ್ರಿಸುವ ಮೂಲಕ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಎರಡು ಪ್ರಮುಖ ಪಂಗಡಗಳಾದ ಶೈವ ಹಾಗೂ ವೈಷ್ಣವ ಪಂಗಡಗಳ ನಡುವೆ ಆಂತರಿಕ ಸಂಘರ್ಷವಿತ್ತೆನ್ನುವ ಇತಿಹಾಸವನ್ನು ಮತೀಯಶಕ್ತಿಗಳು ಹಾಗೂ ಆಳುವ ವರ್ಗಗಳು ಬಹಳ ಪ್ರಜ್ಞಾಪೂರ್ವಕವಾಗಿಯೇ ಮುಚ್ಚಿಡುವಂತಹ ಕೆಲಸವನ್ನು ಮಾಡುತ್ತಿದೆ. ಈ ರೀತಿ ವೈಭವವನ್ನೇ ತೋರಿಸುವ ‘ಧ್ವನಿ ಬೆಳಕು’, ನೈಜ ಇತಿಹಾಸದ ಮೇಲೆ ತನ್ನ ಬೆಳಕನ್ನು ಚೆಲ್ಲಬೇಕಾಗಿರುವ ಕೆಲಸ ತುರ್ತಾಗಿ ನಡೆಯಬೇಕಿದೆ.

ಹಂಪಿ ಉತ್ಸವಕ್ಕೆ ಎಸ್‌ಎಫ್‌ಐ ತಂಡ

ಎಸ್‌ಎಫ್‌ಐ ನ ಜಿಲ್ಲಾ ಹಾಗೂ ತಾಲೂಕು ಮುಖಂಡರನ್ನೊಳಗೊಂಡ ತಂಡವು ಎರಡು ಉದ್ದೇಶಗಳಿಗಾಗಿ ಮೂರು ದಿನಗಳ ಕಾಲ ನಡೆಯುವ ಈ ಹಂಪಿ ಉತ್ಸವಕ್ಕೆ ಬರುವ ಜನಪದ, ಸಾಂಸ್ಕೃತಿಕ ಕಲೆ ಹಾಗೂ ನಾಟಕಗಳನ್ನು ವೀಕ್ಷಿಸುವುದು ಎರಡನೆಯದು ಇದೇ ಸಂದರ್ಭದಲ್ಲಿ ಕ್ರಾಂತಿಕಾರಿ ಸಾಹಿತ್ಯ ಮಾರಾಟ ಇವತ್ತಿನ ಯುವಜನರ ನಿರುದ್ಯೋಗ ಸಮಸ್ಯೆಯನ್ನು ಕುರಿತಾಗಿ ಡಿವೈಎಫ್‌ಐ ರಾಜ್ಯಸಮಿತಿ ಹೊರತಂದಿರುವ ‘ನಿರುದ್ಯೋಗ ಭತ್ಯೆ ಏಕೆ? ಹಾಗೂ ತ್ರೈಮಾಸಿಕ ಪತ್ರಿಕೆಯಾದ ‘ವಾರ್ತಾ’ ಹಾಗೂ ಎಸ್‌ಎಫ್‌ಐ ರಾಜ್ಯಸಮಿತಿ ಹೊರತಂದಿರುವ ಸಿಇಟಿ ಬಿಕ್ಕಟ್ಟು ಮತ್ತು ಪರಿಹಾರ ಹಾಗೂ ಎಸ್‌ಎಫ್‌ಐ ಕೇಂದ್ರ ಸಮಿತಿ ಹೊರತರುತ್ತಿರುವ ಮಾಸ ಪತ್ರಿಕೆ ‘Student Struggle’ಗಳನ್ನು ಓದಲು ಜನರು ಎಡೆಬಿಡದೇ ಕೊಂಡುಕೊಳ್ಳುತ್ತಿದ್ದುದು ಪ್ರಗತಿಪರ ವಿಚಾರ, ಸಾಹಿತ್ಯಕ್ಕಿರುವ ಬೇಡಿಕೆಯನ್ನು ಎತ್ತಿ ತೋರಿಸುತ್ತದೆ. ಹಂಪಿ ಉತ್ಸವದ ಕೊನೆಯ ದಿನದಂದು ಜನಜಾಗೃತಿಗೊಳಿಸುವ ಕ್ರಾಂತಿಗೀತೆಗಳನ್ನು ಹಾಡಿದ್ದು ಎಲ್ಲರ ಗಮನ ಸೆಳೆದವು.

- ಹುಳ್ಳಿ ಉಮೇಶ್

ಚಳ್ಳಕೆರೆ ಶಾಖೆಯ ಸಿಪಿಐ(ಎಂ)ನ ಪ್ರಥಮ ಸಮ್ಮೇಳನ


ಶ್ರಮಿಕ ವರ್ಗವನ್ನು ಲೂಟಿ ಮಾಡುವ ಸರ್ಕಾರಗಳು

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಆರ್ಥಿಕ ನೀತಿಯಿಂದಾಗಿ ದೇಶದ ಬಡಜನ ರೈತ ಹಾಗೂ ಕಾರ್ಮಿಕ ವರ್ಗವನ್ನು ಲೂಟಿ ಮಾಡಿ, ಬಂಡವಾಳಗಾರರನ್ನು ಮುಂದುವರಿಸುವ ನಿಟ್ಟಿನಲ್ಲಿ ಸಾಗುತ್ತಿದೆ. 50 ವರ್ಷಗಳಿಂದ ನಮ್ಮ ದೇಶವನ್ನು ಆಡಳಿತ ಮಾಡಿಕೊಂಡು ಬಂದಂತ ಕಾಂಗ್ರೆಸ್ ಸರ್ಕಾರವಾಗಲೀ, ಜನತಾದಳವಾಗಲೀ ಹಾಗೂ ಬಿಜೆಪಿ ಸರ್ಕಾರವಾಗಲೀ ಇವರ್‍ಯಾರು ಕಾರ್ಮಿಕ ವರ್ಗವನ್ನು ಪರಿಹಾರ ಸೂಚಿಸುವಲ್ಲಿ ವಿಫಲವಾಗಿದ್ದಾರೆ ವಿನಹ, ಬಂಡವಾಳಗಾರರ ಪರವಾಗಿರುವಂತಹ ಸರ್ಕಾರಗಳೇ ಆಗಿರುತ್ತವೆ ಎಂದು ಬಳ್ಳಾರಿ ಜಿಲ್ಲೆಯ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ರಾಜ್ಯ ಸಮಿತಿ ಸದಸ್ಯರಾದ ಯು.ಬಸವರಾಜ್‌ರವರು ಟೀಕಿಸಿದರು.

ಇತ್ತೀಚೆಗೆ ಚಿತ್ರದುರ್ಗದ ಚಳ್ಳಕೆರೆ ಎ.ಪಿ.ಎಂ.ಸಿ ಯಾರ್ಡ್‌ನಲ್ಲಿರುವ ಶ್ರಮಿಕರ ಭವನದಲ್ಲಿ ಚಳ್ಳಕೆರೆ ಶಾಖೆಯ ಸಿಪಿಐ(ಎಂ)ನ ಪ್ರಥಮ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.

ಚಿತ್ರದುರ್ಗ ಜಿಲ್ಲೆಯ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಡಿ.ಎಂ.ಮಲಿಯಪ್ಪನವರು ಮಾತನಾಡಿ, ಸಮ್ಮಿಶ್ರ ಸರ್ಕಾರದಿಂದ ಕಾರ್ಮಿಕ ವರ್ಗದವರಿಗೆ ಯಾವುದೇ ರೀತಿಯಿಂದ ಅನುಕೂಲವಾಗಿಲ್ಲ. ಆದರೆ ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಸರ್ಕಾರ ಬಡ ಕೂಲಿ ಕಾರ್ಮಿಕರಿಗೆ ಹಸಿರು ಕಾರ್ಡುಗಳ ಮೂಲಕ 15 ಪದಾರ್ಥಗಳನ್ನು ನೀಡುತ್ತಿದೆ. ಈ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಏಕೆ ಸಾಧ್ಯವಿಲ್ಲ? ಎಂದು ಪ್ರಶ್ನಿಸಿದರು.

ಸಮ್ಮೇಳನದ ಧ್ವಜಾರೋಹಣವನ್ನು ಟಿ.ತಿಪ್ಪೇಸ್ವಾಮಿಯವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಚಳ್ಳಕೆರೆ ಶಾಖೆಯ ಸಿಪಿಐ(ಎಂ) ಕಾರ್ಯದರ್ಶಿ ಟಿ.ನಿಂಗಣ್ಣರವರು ವಹಿಸಿಕೊಂಡಿದ್ದರು.



ಟಿ.ತಿಪ್ಪೇಸ್ವಾಮಿಯವರು ಸ್ವಾಗತಿಸಿ ವಂದನೆ ಸಲ್ಲಿಸಿದರು. ನೂತನ ಕಾರ್ಯದರ್ಶಿಯನ್ನಾಗಿ, ಕಾಂ. ಟಿ. ನಿಂಗಣ್ಣನವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿ ಉಳಿದ 14 ಜನ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಟಿ. ತಿಪ್ಪೇಸ್ವಾಮಿ

ರಾಜಕೀಯ ಹಿತಾಸಕ್ತಿಗಾಗಿ ಧರ್ಮವನ್ನು ಬಳಸಿಕೊಳ್ಳುತ್ತಿರುವ ಕೋಮುವಾದಿಗಳು

ಡಿಸೆಂಬರ್ 8ರಂದು ಭಾರತ ವಿದ್ಯಾರ್ಥಿ ಫೆಡರೇಷನ್(SFI) ನೇತೃತ್ವದಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಸ.ಪ.ಪೂ.ಕಾಲೇಜ್ (ಚಿತ್ತವಾಡ್ಗಿ)ನಲ್ಲಿ “ಕೋಮು ಸೌಹಾರ್ದತೆಯಲ್ಲಿ ವಿದ್ಯಾರ್ಥಿಗಳ ಪಾತ್ರ” ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ನಡೆಸಲಾಯಿತು.

ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಭಾರತ ಜ್ಞಾನ ವಿಜ್ಞಾನ ಸಮಿತಿಯ ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಸೌಭಾಗ್ಯ ಲಕ್ಷ್ಮಿಯವರು ದೇಶದ ಪ್ರಸಕ್ತ ಪರಿಸ್ಥಿತಿಯಲ್ಲಿ ರಾಜಕೀಯ ಹಿತಾಸಕ್ತಿಗಾಗಿ ಧರ್ಮವನ್ನು ಬಳಸಿಕೊಳ್ಳುತ್ತಿದ್ದಾರೆಂದು ಆತಂಕ ವ್ಯಕ್ತಪಡಿಸಿದರಲ್ಲದೆ, ಕೋಮುವಾದಿಗಳು ದೇವರ ಹಾಗೂ ಧರ್ಮದ ಹೆಸರಿನಲ್ಲಿ ಕೋಮುಗಲಭೆ ಎಬ್ಬಿಸುತ್ತಾ ದುಡಿಯುವ ಜನರ ದೈನಂದಿನ ಸಮಸ್ಯೆಗಳನ್ನು ಮರೆಮಾಚುತ್ತಾ ಬೇರೊಂದು ವಿಷಯದೆಡೆಗೆ ಅವರ ಮನಸ್ಸುಗಳನ್ನು ಸೆಳೆಯುತ್ತಿದ್ದಾರೆ. ಇಂತಹ ಕೋಮುವಾದಿ ಶಕ್ತಿಗಳ ಬಗ್ಗೆ ಎಚ್ಚರದಿಂದಿರಬೇಕಲ್ಲದೇ ಇಂತಹ ಸಂದರ್ಭದಲ್ಲಿ ಕೋಮುಸೌಹಾರ್ದತೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಅತಿ ಮುಖ್ಯವಾದುದ್ದಾಗಿದೆ ಎಂದರು.

ಡಿವೈಎಫ್‌ಐ ಮುಖಂಡರಾದ ಎ.ಕರುಣಾನಿಧಿಯವರು ವಿಚಾರಸಂಕಿರಣದ ವಿಷಯ ಮಂಡನೆ ಮಾಡಿ ನಮ್ಮ ದೇಶ ಕೋಮುವಾದದ ಗಂಡಾಂತರದಲ್ಲಿದೆ. ವಿದ್ಯಾರ್ಥಿಗಳು ನಮ್ಮ ದೇಶದ ಆಸ್ತಿ. ಇವರುಗಳನ್ನು ಸರಿದಾರಿಗೆ ಕೊಂಡೊಯ್ಯದೇ ಅವರ ಪಠ್ಯ ಪುಸ್ತಕಗಳಲ್ಲಿ ದಾರಿ ತಪ್ಪಿಸುವಂತಹ ಕೋಮುವಾದಿ ವಿಚಾರಗಳನ್ನು ಅಳವಡಿಸುವ ಮುಖಾಂತರ ವಿದ್ಯಾರ್ಥಿಗಳನ್ನು ದಾರಿತಪ್ಪಿಸುವಂತಹ ವಿದ್ಯಾರ್ಥಿಗಳನ್ನು ದಾರಿತಪ್ಪಿಸುತ್ತಿದ್ದಾರೆ. ಇಂತಹ ಕೋಮುವಾದಿ ಶಕ್ತಿಗಳನ್ನು ಮಟ್ಟಹಾಕಲು ಅಸಂಘಟಿತ ವಿದ್ಯಾರ್ಥಿಗಳು ಪ್ರಗತಿಪರ ವಿಚಾರವುಳ್ಳ ಎಸ್‌ಎಫ್‌ಐಯಂತಹ ಸಂಘಟನೆಯನ್ನು ರಚಿಸಿಕೊಂಡು ಕೋಮುವಾದದ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸಬೇಕಾಗಿದೆ ಎಂದು ಕರೆ ನೀಡಿದರು. ವಿದ್ಯಾರ್ಥಿಗಳ ಮದ್ಯೆ ಕೋಮು ಭಾವನೆಗಳನ್ನು ಕೆರಳಿಸುವಂತಹ ಕೋಮುವಾದಿ ಶಕ್ತಿ ಎಬಿವಿಪಿಯಂತಹ ಸಂಘಟನೆಗಳ ಬಗ್ಗೆ ಜಾಗರೂಕತೆಯಿಂದ ಇರಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರು ಮಾತನಾಡುತ್ತಾ ಕೋಮುವಾದದ ಅಪಾಯದ ಸಂದಿಗ್ಧ ಪರಿಸ್ಥಿತಿಯಲ್ಲಿ ಕೋಮುವಾದದ ಬಗ್ಗೆ ಮನನ ಮಾಡಿಕೊಳ್ಳಲು ಇಂತಹ ವಿಚಾರ ಸಂಕಿರಣಗಳು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ನಡೆಯಬೇಕಾದಂತಹ ವಿಷಯವೇ ಎಲ್ಲರೂ ನನ್ನವರು ಎಂಬಂತಹ ಸಹೋದರ ಬಾಂಧವ್ಯ ಬೆಳೆಸಬೇಕಾಗಿದೆ ಎಂದರು.

ವೇದಿಕೆಯ ಮೇಲೆ ಎಸ್‌ಎಫ್‌ಐ ತಾಲೂಕು ಸಂಚಾಲಕರಾದ ಪಿ.ಮಹೇಶ್, ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಉಪಾಧ್ಯಕ್ಷರಾದ ಕೆ.ರಮೇಶ್, ಜಿಲ್ಲಾ ಸಹ ಕಾರ್ಯದರ್ಶಿ ವೀರಣ್ಣ ಕಲ್ಲಾನಿ, ಉಪಸ್ಥಿತರಿದ್ದರು. ಎಸ್‌ಎಫ್‌ಐನ ಜಿಲ್ಲಾ ಸಮಿತಿ ಸದಸ್ಯರಾದ ಹೆಚ್.ಪ್ರಕಾಶ್ ಸ್ವಾಗತಿಸಿದರು. ಕಲ್ಯಾಣಯ್ಯ ವಂದಿಸಿದರು. ಈ ಕಾರ್ಯಕ್ರಮವನ್ನು ಎಸ್‌ಎಫ್‌ಐ ಜಿಲ್ಲಾ ಮುಖಂಡರಾದ ಹುಳ್ಳಿ ಉಮೇಶ್ ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರಾಂತರೈತ ಸಂಘದ ಮುಖಂಡ ವಿ.ಅಡಿವಪ್ಪನವರು ಹಾಗೂ ಎಸ್‌ಎಫ್‌ಐ ತಾಲ್ಲೂಕು ಮುಖಂಡರಾದ ಬಸವರಾಜ, ಅಜೇಯ ಉಪಸ್ಥಿತರಿದ್ದರು.

ಜಾಗತೀಕರಣದ ಲಾಭ ಕೆಲವರಿಗೆ ಮಾತ್ರ

ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಧಾನ ನಿರ್ದೇಶಕರಾದ ಜೂವಾನ್ ಸೋಮಾವಿಯಾರವರು ಕಾರ್ಮಿಕ ಸಂಘಟನೆಗಳ ಜೊತೆ ನಡೆದ ಚರ್ಚಾ ಸಮಯದಲ್ಲಿ "ಉದ್ಯೋಗಾವಕಾಶಗಳನ್ನು ಹೆಚ್ಚಿಸುವಲ್ಲಿ ವಿಫಲವಾಗಿರುವುದು ಜಾಗತೀಕರಣದ ಅತ್ಯಂತ ದೊಡ್ಡ ವೈಫಲ್ಯ'' ಎಂದು ತಿಳಿಸಿದ್ದಾರೆ. ಜಾಗತೀಕರಣದ ನಿಯಮಾವಳಿಗಳು ಕೆಲವರ ಪರವಾಗಿಯೂ ಮತ್ತು ಬಹುಸಂಖ್ಯಾತರ ವಿರುದ್ಧವಾಗಿಯೂ ಇರುವುದರಿಂದ ಅದರ ಫಲಿತಾಂಶವು ಸಹ ನ್ಯಾಯಸಮ್ಮತವಾಗಿಲ್ಲ. ಯಾವುದೇ ರಾಷ್ಟ್ರದ ಅಭಿವೃದ್ಧಿಯ ಯಶೋಘಾಥೆಯನ್ನು ಆ ರಾಷ್ಟ್ರದ ಬೆಳವಣಿಗೆಯ ದರದ ಯಶಸ್ಸಿನಿಂದ ಅಳೆಯಲಾಗುವುದಿಲ್ಲ. ಆದರೆ, ಸಾಮಾಜಿಕ ರಕ್ಷಣೆಯು ಯಶಸ್ಸಿನ ಮಾನವದಂಡವಾಗಿರಬೇಕು.

ಪ್ರತಿಯೊಬ್ಬ ನಾಗರೀಕನಿಗೂ ಗೌರವಯುತ ಕೆಲಸ ಮತ್ತು ತನ್ನಲ್ಲಿ ತಾನು ವಿಶ್ವಾಸ ಮೂಡಿಸಿಕೊಳ್ಳಲು ಅವಕಾಶ ಸಿಗಬೇಕೆಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ನಂಬುತ್ತದೆಂದು ಸೋಮಾವಿಯಾ ಅವರು ತಿಳಿಸಿದರು. ಆದರೆ ಈ ಪ್ರಕ್ರಿಯೆ ರಾತ್ರೋರಾತ್ರಿ ಆಗುವುದಿಲ್ಲ. "ಸಂಘಟಿತ ವಲಯದಲ್ಲೇ ಹೆಚ್ಚೆಚ್ಚು ಅಭದ್ರತೆಯನ್ನು ಕಾರ್ಮಿಕರು ಅನುಭವಿಸುತ್ತಿದ್ದರೆ, ಅಸಂಘಟಿತ ವಲಯದಲ್ಲಂತೂ ಪರಿಸ್ಥಿತಿಯು ಅತ್ಯಂತ ದುಸ್ಥಿತಿಯಲ್ಲಿದೆ. ಇಂತಹ ಸನ್ನಿವೇಶಗಳಲ್ಲಿ, ಅಸಂಘಟಿತ ವಲಯದಲ್ಲಿನ ಕಾರ್ಮಿಕರನ್ನು ಒಗ್ಗೂಡಿಸಲು ಶಕ್ತಿಯುತವಾದ ಚಳುವಳಿಗಳನ್ನು ಹುಟ್ಟುಹಾಕುವುದು ಕಾರ್ಮಿಕ ಸಂಘಟನೆಗಳಿಗೆ ಮಾತ್ರ ಸಾಧ್ಯ. ಇದೇ ಸಂದರ್ಭದಲ್ಲಿ ಹಲವು ಕಾರ್ಮಿಕ ಸಂಘಟನೆಗಳ ಕಾರ್ಮಿಕ ಮುಖಂಡರು ಮಾತನಾಡಿದರು.

ಅಸಂಪ್ರದಾಯಿಕ ವಲಯದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ತುರ್ತಾಗಿ ಆಗಬೇಕಿರುವ ಕೆಲಸ ಎಂದು ಭಾರತೀಯ ಮಜದೂರ್ ಸಂಘದ ಕಾರ್ಯದರ್ಶಿ ಆರ್.ಪಿ.ಮಿಶ್ರ ಹೇಳಿದರು. ಬಡ ಗ್ರಾಮೀಣ ಜನತೆಯನ್ನು ಗಮನದಲ್ಲಿಟ್ಟುಕೊಂಡು ನೀತಿಗಳನ್ನು ರೂಪಿಸಬೇಕು, ನಿರುಪಯುಕ್ತ ಭೂಮಿಯನ್ನು ಅಭಿವೃದ್ಧಿಪಡಿಸುವುದು, ಸಣ್ಣ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಉತ್ತೇಜಿಸುವ ಮುಖೇನ ಇದನ್ನು ಸಾಕಾರಗೊಳಿಸಲು ಸಾಧ್ಯ ಎಂದರು. ಸಿಐಟಿಯುನ ಎಂ.ಕೆ.ಪಂಧೆಯವರು ಅಸಂಘಟಿತ ವಲಯದ ಕಾರ್ಮಿಕರನ್ನು ಎರಡನೇ ದರ್ಜೆಯ ನಾಗರೀಕರಂತೆ ಕಾಣಲಾಗುತ್ತಿದೆ ಎಂದರು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾಯಿದೆ ವಿಷಯದಲ್ಲಿ ಕೇಂದ್ರ ಸರ್ಕಾರದ ಬದ್ಧತೆಯನ್ನು ಪ್ರಶಂಸಿಸಿದ ಅವರು ಈ ಯೋಜನೆಯನ್ನು ಯಶಸ್ವಿಗೊಳಿಸಲು ಅಗತ್ಯ ನಿಧಿಯನ್ನು ಒತ್ತಟ್ಟಿಗಿರಿಸಬೇಕೆಂದರು. ಕೂಲಿಗಾಗಿ ಕಾಳು ಯೋಜನೆಯ ಅನುಷ್ಠಾನ ಕಾರ್ಯದಲ್ಲಿ ಕಾರ್ಮಿಕ ಸಂಘಟನೆಗಳೊಡನೆ ಸಮಾಲೋಚಿಸಬೇಕು. 'ಅಸಂಘಟಿತ ವಲಯ ಸಾಮಾಜಿಕ ರಕ್ಷಣೆ ವಿಧೇಯಕ'ವು ಅಸಂಪೂರ್ಣತೆಯಿಂದಿದ್ದು ಕಾರ್ಮಿಕ ಸಂಘಟನೆಗಳು ಸಲಹೆ ನೀಡಿರುವಂತೆ ಅದನ್ನು ತಿದ್ದುಪಡಿ ಮಾಡಬೇಕೆಂದು. ಎಐಯುಟಿಎಸಿಯ ಕಾರ್ಯದರ್ಶಿ ಎ.ಸಿಂಗ್‌ರವರು ಮಾತನಾಡಿ ನೇಮಕ ಮಾಡಿಕೊಳ್ಳುವುದು ಮತ್ತು ಕಿತ್ತೊಗೆಯುವ (HIRE AND FIRE) ನೀತಿಗಳಲ್ಲಿ ನಂಬಿಕೆಯಿಟ್ಟಿರುವ ಬಹುರಾಷ್ಟ್ರೀಯ ಕಂಪನಿಗಳ ಒಳಹರಿವಿಗೆ ತಡೆಯೊಡ್ಡುವುದಕ್ಕೆ ಕೇಂದ್ರ ಸರ್ಕಾರವು ಬದ್ಧವಾಗಿದೆ ಎಂದರು. ಯಾವುದೇ ಕಾರ್ಮಿಕನನ್ನು ಕೆಲಸದಿಂದ ತೆಗೆದ ನಂತರ ಎರಡು ವರ್ಷಗಳವರೆಗೂ ತಿಂಗಳಿಗೆ ರೂ.2000/- ನೀಡಬೇಕು ಎಂದರು.

ಗುತ್ತಿಗೆಕರಣ (CONTRACTUALISATION) ಮತ್ತು ಹಂಗಾಮೀಕರಣವು (COSUALISATION) ದೈನಂದಿನ ಕ್ರಮವಾಗುತ್ತಿದು ಕಾರ್ಮಿಕ ಸಂಘಟನಾ ಚಳುವಳಿಗಳಿಗೆ ಜಾಗತೀಕರಣವು ಅಪಾಯಕಾರಿಯಾಗಿದೆ ಎಂದು ಎಐಟಿಯುಸಿಯ ಕಾರ್ಯದರ್ಶಿ ಅಮರ್‌ಜಿತಕೌರ್ ಹೇಳಿದರು. ಅಸಂಘಟಿತ ವಲಯದಲ್ಲಿ ಕಾರ್ಮಿಕ ಸಂಘಟನೆಗಳು ಹೆಚ್ಚೇನೂ ಮಾಡಲಾಗದ್ದನ್ನೂ ಒಪ್ಪಿಕೊಂಡ ಅವರು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಕ್ರಮವಹಿಸಲಾಗುವುದೆಂದರು. ಸರ್ಕಾರದ ಬಹುತೇಕ ಕಾನೂನುಗಳು ಅಸಂಘಟಿತ ವಲಯವನ್ನು ಮುಟ್ಟುತ್ತಿಲ್ಲವೆಂದ ಹಿಂದ್ ಮಜ್‌ದೂರ್ ಸಭಾದ ಅಧ್ಯಕ್ಷ ಥಂಪನ್ ಥಾಮಸ್‌ರವರು ಸಂಘಟಿತ ಕ್ಷೇತ್ರದ ಕಾರ್ಮಿಕರನ್ನು ಕಡೆಗಣಿಸುತ್ತಿದ್ದು ಹೊರಗುತ್ತಿಗೆ ನೀಡುವ ಮೂಲಕ ಅಸಂಘಟಿತ ವಲಯಕ್ಕೆ ದೂಡಲಾಗುತ್ತಿದೆ ಎಂದು ತಿಳಿಸಿದರು. ಕೆಲವೇ ಕೈಗಳಲ್ಲಿ ಸಂಪತ್ತೆಲ್ಲವೂ ಕೇಂದ್ರೀಕೃತವಾಗಿದ್ದು ಸಾಮಾನ್ಯ ಜನರು ಬಡತನವನ್ನು ಹಂಚಿಕೊಂಡಿದ್ದಾರೆ. "ಇದೊಂದು ಬೇರಿಲ್ಲದ ಬೆಳವಣಿಗೆಯಾಗಿದ್ದು, ಅಭಿವೃದ್ಧಿ ಮತ್ತು ಬಡತನ ಜೊತೆಜೊತೆಯಾಗಿ ಸಾಗುವುದಿಲ್ಲ. ಜಾಗತೀಕರಣದ ಫಲವು ಬಡಜನರನ್ನು ಮತ್ತು ಕಡೆಗಣಿಸಲ್ಪಟ್ಟ ಕಾರ್ಮಿಕರನ್ನು ಮುಟ್ಟಿಲ್ಲ" ಎಂದು ಅಭಿಪ್ರಾಯಪಟ್ಟರು.

ಜಯಣ್ಣ

ಕೃಪೆ : ದಿ ಹಿಂದೂ

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಆರೋಗ್ಯ ಕ್ಷೇತ್ರಕ್ಕೆ ಸುನಾಮಿ ದುರಂತದ ಸವಾಲು

26 ಡಿಸೆಂಬರ್ 2004 ರಂದು ಪೂರ್ವ ಏಶಿಯಾದ ಹನ್ನೆರಡು ದೇಶಗಳು ಸುನಾಮೀ ದುರಂತದಿಂದ ತತ್ತರಿಸಿ ಹೋಗಿವೆ. ಕನಿಷ್ಟ 2 ಲಕ್ಷ ಜನರು, ಸಾವನ್ನಪ್ಪಿದರೆ, 5 ದಶಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಈ ಸಂಖ್ಯೆ ಮುಂದಿನ ದಿನಗಳಲ್ಲಿ ಹೆಚ್ಚಲಿದೆ ಎಂದು ಅಂದಾಜು ಮಾಡಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಲ್ಲಿ ಸಂಭವಿಸಿದ ಭೀಕರ ದುರಂತ ಇದಾಗಿದೆ.

ಬದುಕುಳಿದ ನಿರಾಶ್ರಿತರು ಅನೇಕ ರೋಗರುಜಿನಗಳಿಗೆ ಬಲಿಯಾಗುವ ಸಾಧ್ಯತೆ ಇದೆ. ಅವರ ರಕ್ಷಣೆ ಸಮಾಜದ ಜವಾಬ್ದಾರಿಯಾಗುತ್ತದೆ. ಇಂದು ಸುನಾಮೀ ನಿರಾಶ್ರಿತರಿಗೆ ಜಗತ್ತಿನ ಎಲ್ಲೆಡೆಯಿಂದಲೂ ಸಹಾಯ ಬಂದೊದಗುತ್ತಿದೆ. ಈ ಪೂರೈಕೆಗಳನ್ನು ಸಮಂಜಸವಾಗಿ ಉಪಯೋಗಿಸುವ ವ್ಯವಸ್ಥೆಯ ಕೊರತೆ ಇದ್ದುದು ಕಂಡುಬರುತ್ತದೆ. ಸಾಮಾಜಕ್ಕೆ ತುರ್ತು ಪರಿಸ್ಥಿತಿಯಲ್ಲಿ ಕಾರ್ಯಾಚರಣೆಗೆ ತೊಡಗುವ ಅಭ್ಯಾಸಿದ ಕೊರತೆ ಇದ್ದದ್ದು ಇದಕ್ಕೆ ಕಾರಣವೆನ್ನಬಹುದು.

ವಿಶ್ವ ಆರೋಗ್ಯ ಸಂಸ್ಥೆ ಜಗತ್ತಿನ ಹಲವಾರು ದೇಶಗಳಲ್ಲಿ ಸಂಭವಿಸಿದ ದುರಂತಗಳನ್ನು ಎದುರಿಸಿದ ಅನುಭವ ಹೊಂದಿದ ಸಂಸ್ಥೆ. ಈ ದುರಂತವನ್ನು ಎದುರಿಸಿದ, ಸ್ಥಳಕ್ಕೆ ಧಾವಿಸಿದವರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪ್ರಯತ್ನಗಳು ಪ್ರಶಂಸನೀಯ. ಸ್ಥಳಕ್ಕೆ ಧಾವಿಸಿ ನೂರು ದಿವಸಗಳ ಒಂದು ಪರಿಹಾರ ಯೋಜನೆಯನ್ನು ಕೂಡಲೇ ಜಾರಿಗೊಳಿಸಿ, ಈ ದುರಂತವನ್ನು ಎದುರಿಸಲು, ಆರೋಗ್ಯ ವ್ಯವಸ್ಥೆಗಳನ್ನು ನೋಡಿಕೊಳ್ಳಲು ವಿಶ್ವಸಂಸ್ಥೆ ಜಗತ್ತಿನ ರಾಷ್ಟ್ರಗಳಿಗೆ 37,714 ಯ ಅಮೇರಿಕನ್ ಡಾಲರ್ ನೆರವನ್ನು ಕೋರಿದೆ. ಈ ದುರಂತಕ್ಕೆ ಹಲವಾರು ಸಂಸ್ಥೆಗಳು,ಜನರು ವಿವಿಧ ಸಹಾಯಗಳನ್ನು ನೀಡಲು ಮುಂದಾಗಿದ್ದಾರೆ ಎಂಬುದು ಸಂತೋಷದ ವಿಷಯ

ವಿಶ್ವಸಂಸ್ಥೆಯ ಕಾರ್ಯಾಚರಣೆ:

ಸ್ಥಳೀಯವಾಗಿ ಉಂಟಾಗುವ ರೋಗರುಜಿನಗಳನ್ನು ಗುರುತಿಸುವುದು ಆರೋಗ್ಯ ಒದಗಿಸಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು

ದುರಂತದಲ್ಲಿ ನಾಶವಾದ ಚಿಕಿತ್ಸಾಕೇಂದ್ರಗಳನ್ನು ಗುರುತಿಸಿ ಚಿಕಿತ್ಸಾ ವ್ಯವಸ್ಥೆಯನ್ನು ಕಲ್ಪಿಸುವುದು. ಸಿಬ್ಬಂದಿ ವರ್ಗವನ್ನು ತಂತ್ರಜ್ಞರು, ಚಿಕಿತ್ಸಾ ತಜ್ಞರನ್ನು ನೇಮಕ ಮಾಡುವುದು. ಬೇರೆ ಬೇರೆ ಕಡೆಗಳಿಂದ ಬಂದ ಸೌಲಭ್ಯಗಳನ್ನು ಅಗತ್ಯತೆಗೆ ತಕ್ಕಂತೆ ಉಪಯೋಗಿಸುವುದು

24 ಘಂಟೆ ಸಂಪರ್ಕಕ್ಕೆ ವ್ಯವಸ್ಥೆ ಮಾಡುವುದು

ಅಗತ್ಯ ಔಷಧಿ ಉಪಕರಣಗಳನ್ನು ತರಿಸಿಕೊಳ್ಳುವುದು, ಕುಡಿಯುವ ನೀರು ಆಹಾರ, ಬಟ್ಟೆ, ವಸತಿಯ ವ್ಯವಸ್ಥೆ ಮಾಡುವುದು

ಸ್ಥಳೀಯವಾಗಿ ಕೈಗೊಂಡ ವ್ಯವಸ್ಥೆಗಳ ಬಗ್ಗೆ ಆಯಾ ದೇಶದ ಅಧಿಕಾರಿಗಳಿಗೆ ಹಾಗೂ ಮಾಧ್ಯಮಗಳಿಗೆ ಮಾಹಿತಿ ನೀಡುವುದು

ಸಾರಿಗೆ (Transport) ಮಾಹಿತಿ ಕೊಡಲು (Telecommunication) ಸೂಕ್ತ ವ್ಯವಸ್ಥೆ ಮಾಡುವುದು.

ಈ ಎಲ್ಲಾ ವ್ಯವಸ್ಥೆಗಳ ಉದ್ದೇಶ

ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಿ ಮುಂದೆ ಉಂಟಾಗಬಹುದಾದ ಸಾವುಗಳನ್ನು ತಡೆಗಟ್ಟಬೇಕಾಗಿದೆ. ಸಾಮಾನ್ಯವಾಗಿ ಕುಡಿಯುವ ನೀರಿನ ವ್ಯವಸ್ಥೆ ಅಸ್ತವ್ಯಸ್ಥೆಯಾದಲ್ಲಿ, ವಾತಾವರಣದಲ್ಲಿ ಅನೈರ್ಮಲ್ಯತೆ ಇದ್ದಲ್ಲಿ ಜನಜಂಗುಳಿ ಇದ್ದಲ್ಲಿ ಸಾಂಕ್ರಾಮಿಕ ರೋಗಗಳು ಉಂಟಾಗುತ್ತದೆ. ಸಮುದ್ರ ನೀರಿನಿಂದಾಗಿ ಸಮಸ್ಯೆ ಉಲ್ಬಣಗೊಳ್ಳುತ್ತದೆ. ಈ ಪ್ರದೇಶಗಳಲ್ಲಿ ಕಂಡುಬರುವ ಸಾಂಕ್ರಾಮಿಕ ರೋಗಗಳು ಕಾಲರಾ, ಬೇದಿ ರೋಗ, ಹೆಪೆಟೈಟಿಸ್ (ಎ) ಹಾಗೂ (ಇ) ಮಹಿಳೆಯ ಲೈಂಗಿಕ ಅಂಗಾಂಗಗಳ (ವೆಜೈನಲ್ ಇನ್‌ಫೆಕ್ಷನ್) ಸೋಂಕು, ಟೈಫಾಯಿಡ್, ಶೀಗೆಲೋಸಿಸ್, ಮಲೇರಿಯಾ, ಡೆಂಗೂ ಜ್ವರ, ಧಡಾರ, ಇನ್‌ಫ್ಲೂಯೆಂಝಾ, ಮೆನಿಂಜೈಟಿಸ್, ಉಸಿರಾಟದ ಸೋಂಕು, ಕ್ಷಯಾ, ಲೆಪ್ಟೋಸ್ಪೈರಾ ಮುಂತಾದ ಸೋಂಕುರೋಗವಾಗಿ ಹರಡುವ ಸಾಧ್ಯತೆ ಉಂಟು.

ಈ ಸ್ಥಳಗಳಲ್ಲಿ ಜನಾರೋಗ್ಯ ಕಾಪಾಡಲು ಈ ಕೆಳಗಿನವುಗಳು ಪ್ರಾಮುಖ್ಯತೆ ಪಡೆಯುತ್ತದೆ.

1. ವೈದ್ಯರು 2 ವೈದ್ಯಕೀಯ ಸಲಕರಣೆಗಳು 3.ಔಷಧಿಗಳು 4.ಲಸಿಕೆಗಳು 5. ಸ್ವಚ್ಛ ಕುಡಿಯುವ ನೀರು 6.ಸಾರಿಗೆ ವೈದ್ಯರು ನಿರಂತರವಾಗಿ ಲಭ್ಯವಿದ್ದು ರೋಗಪರೀಕ್ಷೆ ಮಾಡುವುದಲ್ಲದೆ ಅಲ್ಲಿರುವ ಆರೋಗ್ಯವಂತರನ್ನು ಪರೀಕ್ಷೆ ಮಾಡಬೇಕಾಗುತ್ತದೆ. ಅನೇಕ ಬಾರಿ ರೋಗ ಚಿಕಿತ್ಸೆ ಇಲ್ಲದಿದ್ದರೂ ಗಾಯದ ಚಿಕಿತ್ಸೆಯನ್ನಾದರೂ ಮಾಡಬೇಕಾಗುತ್ತದೆ. ಈ ವ್ಯಕ್ತಿಗಳಲ್ಲಿ ಕಂಡುಬರುವ ಇನ್ನೊಂದು ಮುಖ್ಯ ಸಮಸ್ಯೆಯೆಂದರೆ ಮಾನಸಿಕ ಆಘಾತ ಹಾಗೂ ಅದರಿಂದುಂಟಾಗುವ ರೋಗಗಳು-ಖಿನ್ನತೆ, ಆತಂಕ ಇತ್ಯಾದಿ. ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆ ಈ ಕೆಲಸದಲ್ಲಿ ಮುಂದಾಳತ್ವವನ್ನು ವಹಿಸಿ, ಸಮಸ್ಯೆಗೆ ಪರಿಹಾರ ನೀಡುತ್ತ ಬಂದಿದೆ.

ಜನರಿಗೆ ರೋಗ ರುಜಿನಗಳ ಚಿಕಿತ್ಸೆಯಿಲ್ಲದೆ ಆಹಾರ, ಶುದ್ಧ ಕುಡಿಯುವ ನೀರು, ತಾತ್ಕಾಲಿಕ ವಸತಿ, ಬಟ್ಟೆ ಮುಂತಾದವುಗಳನ್ನು ನೋಡಿಕೊಳ್ಳಲು ಸ್ಥಳೀಯ ಆಡಳಿತ ಸಜ್ಜಾಗಿ ಕೆಲಸ ಮಾಡಬೇಕಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ ಸ್ಥಳೀಯ ಆಡಳಿತಕ್ಕೆ ಸಹಾಯವಾಗಲು ತುರ್ತು ಆರೋಗ್ಯ ಕಿಟ್, ವೈದ್ಯಕೀಯ, ಉಪಕರಣ ಹಾಗೂ ಕ್ಲೋರಿನ್ ಮಾತ್ರೆಗಳನ್ನು ಸರಬರಾಜು ಮಾಡುತ್ತಿದೆ. 24 ಘಂಟೆಯ ತುರ್ತು ಸೇವೆಗೆ ಸಜ್ಜಾಗಿ ನಿಂತಿದೆ.

ಯಾವುದೇ ಸ್ವಾಭಾವಿಕ ದುರಂತದಲ್ಲಿ ಸಾಮಾನ್ಯವಾಗಿ ಬಡವರೇ ಹೆಚ್ಚಿನ ಸಂಖ್ಯೆಯಲ್ಲಿ ಮೃತರಾಗುತ್ತಾರೆ.

ಮೃತದೇಹವನ್ನು ಗುರುತಿಸಲು ಯಾರೂ ಬರುವುದೇ ಇಲ್ಲ. ಸಾವಿರಾರು ದೇಹಗಳನ್ನು ವಿಲೇವಾರಿ ಮಾಡುವುದು ಸ್ಥಳೀಯರ ಸಮಸ್ಯೆಯಾಗುತ್ತದೆ. ಸಮೂಹ ಗೋರಿ (mass grave) ನಿರ್ಮಿಸುವುದೇ ಅವರಿಗಿರುವ ಸಾಧ್ಯತೆ. ಈ ಸಮೂಹ ಗೋರಿಗಳನ್ನು ನಿರ್ಮಿಸಲು ಬಹಳ ತರಾತುರಿಯಿಂದ ಎಲ್ಲರೂ ಮುಂದಾಗುತ್ತಾರೆ.

ಕಾರಣ ಈ ಮೃತದೇಹಗಳು ಸಾಂಕ್ರಾಮಿಕ ರೋಗಗಳನ್ನು ಹರಡುತ್ತವೆ ಎಂಬ ತಪ್ಪು ನಂಬಿಕೆಯಿಂದ. ವಾಸ್ತವವಾಗಿ ಈ ತರಹದ ಸ್ವಾಭಾವಿಕ ದುರಂತದಲ್ಲಿಯ ಮೃತದೇಹಗಳಲ್ಲಿ ರೋಗ ಉಂಟಾಗುವ ಕ್ರಿಮಿಗಳು ಇರುವುದಿಲ್ಲ. ಇದ್ದರೂ ಕೂಡಲೇ ನಾಶಹೊಂದುತ್ತವೆ. ಸಾಂಕ್ರಾಮಿಕ ರೋಗಗಳಿಂದುಂಟಾದ ಸಾವುಗಳಲ್ಲಿ, ಮೃತದೇಹದಲ್ಲಿ ಕ್ರಿಮಿಗಳು ಅಪಾರ ಸಂಖ್ಯೆಯಲ್ಲಿದ್ದು ಅವು ಮೃತದೇಹದಲ್ಲಿ ವೃದ್ಧಿಹೊಂದಿ ಇತರರಿಗೆ ರೋಗ ಉಂಟುಮಾಡಲು ಸಾಧ್ಯ. ಕೊಳೆಯುವ ದೇಹ ಅಪಾಯ ಉಂಟುಮಾಡುತ್ತದೆ ಎಂಬುದು ಎಲ್ಲರ ಪ್ರತಿಕ್ರಿಯೆಯಾಗಿರಲು ಸಾಧ್ಯ, ಆದರೆ ಅದು ಸತ್ಯವಲ್ಲ. ತರಾತುರಿಯಲ್ಲಿ ಮೃತದೇಹಗಳನ್ನು ಸಮೂಹ ಗೋರಿಯೊಂದಿಗೆ ಸಾಗಿಸುವುದರಿಂದ ಉಂಟಾಗುವ ತೊಂದರೆ- ಸಂಬಂಧಿಕರಿಗೆ ತಮ್ಮವರನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಶೋಕವ್ಯಕ್ತಪಡಿಸಲು ಅವಕಾಶ ಸಿಗದೇ ಇತರೇ ಮಾನಸಿಕ ತೊಂದರೆಯಾಗಲು ಸಾಧ್ಯ ಹಾಗೂ ಸಮೂಹ ಗೋರಿ ಉಪಯೋಗದಿಂದ ಅನಾರೋಗ್ಯ ಕಡಿಮೆ ಮಾಡಲು ಸಾಧ್ಯವಾಗುವುದಿಲ್ಲ.

ಸ್ವಾಭಾವಿಕ ದುರಂತಗಳು ಕಡಿಮೆಯಾಗುತ್ತಿರುವ ದಿನಗಳಲ್ಲಿ, ಸುನಾಮೀ ದುರಂತ ಆತಂಕವನ್ನು ತಂದೊಡ್ಡಿದೆ. ನಿರಾಶ್ರಿತರಿಗೆ ಆರೋಗ್ಯ ಸೌಕರ್ಯಗಳನ್ನು ಒದಗಿಸಿ, ಅನಾರೋಗ್ಯ ಉಂಟಾಗದಂತೆ ನೋಡಿಕೊಳ್ಳುವುದು ಸಮಾಜದ ಕರ್ತವ್ಯ. ಹಲವಾರು ಸಂಘಟನೆಗಳು ವ್ಯಕ್ತಿಗಳು ಈ ದುರಂತಕ್ಕೆ ಸ್ಪಂದಿಸಿ ಸಹಾಯ ನೀಡುತ್ತಿದ್ದಾರೆ. ವಿಶ್ವ ಆರೋಗ್ಯಸಂಸ್ಥೆ ಈ ಪರಿಹಾರ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದೆ. ಪರಿಹಾರ ಸುಗಮವಾಗಿ ನಡೆಯಲಿ ಎಂದು ಆಶಿಸೋಣ.

ಜಾಗತೀಕರಣ ಯುಗದಲ್ಲಿ ಸಮಾಜವಾದ

ಮುಂದುವರಿಂದ ಭಾಗ

ಬಂಡವಾಳಶಾಹಿಗೆ ಸಮರ್ಥ ಮತ್ತು ಶಾಶ್ವತ ಪರ್ಯಾಯ

ಸಂ : ಅಂತಹ ಪ್ರಚಂಡ ಮುನ್ನಡೆಯಿದ್ದರೂ, ಏಕೆ ಸೋವಿಯತ್ ಒಕ್ಕೂಟ ಬಲಗೊಂಡು ಸಮಾಜವಾದಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ?

ಯೆಚೂರಿ : ಮೊದಲನೆಯದಾಗಿ ಸಮಕಾಲೀನ ಪ್ರಪಂಚದ ವಾಸ್ತವತೆಗಳನ್ನು ಅಂದಾಜು ಮಾಡುವಲ್ಲಿ ಮತ್ತು ಸಮಾಜವಾದಿ ಪರಿಕಲ್ಪನೆಯ ಬಗೆಗೇ ತಪ್ಪು ಗ್ರಹಿಕೆ ಮತ್ತು ತತ್ಸಂಬದ್ಧ ತಪ್ಪು ಮಾಡಲಾಯಿತು. ಎರಡನೆಯದಾಗಿ ಸಮಾಜವಾದಿ ರಚನಾವಧಿಯಲ್ಲಿ ಪ್ರಾಯೋಗಿಕ ಸಮಸ್ಯೆಗಳನ್ನು ಎದುರಿಸುವಲ್ಲಿ ತಪ್ಪೆಸಗಲಾಯಿತು.

20ನೇ ಶತಮಾನದಲ್ಲಿ ಸಮಾಜವಾದವು ಹಿಂದೆಂದೂ ಕಾಣದ ಮತ್ತು ಅಭೂತಪೂರ್ವ ಯಶಸ್ಸುಗಳಿಸಿದ್ದರೂ ಸಹ, ಪೂರ್ವ ಯುರೋಪ್ ಹೊರತುಪಡಿಸಿ ಬೇರೆಲ್ಲ ಕಡೆ ಸಾಪೇಕ್ಷವಾಗಿ ಹಿಂದುಳಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಷ್ಟೇ ಸಮಾಜವಾದಿ ಕ್ರಾಂತಿಯಾಗಿತ್ತು. ಬಂಡವಾಳಶಾಹಿ ಸರಪಳಿಯ ದುರ್ಬಲ ಕೊಂಡಿಯನ್ನು ಕಿತ್ತೆಸೆಯುವುದು ಎಂಬ ಲೆನಿನ್‌ವಾದಿ ಅರ್ಥತೆಯನ್ನು ಇದು ಧೃಡಪಡಿಸಿತು. ಆದರೆ, ಅಭಿವೃದ್ಧಿಗೊಂಡಿರುವ ಉತ್ಪಾದನಾ ಶಕ್ತಿಗಳು ಹಾಗೆಯೇ ಬಂಡವಾಳಶಾಹಿಗಳ ನಿಯಂತ್ರಣದಲ್ಲಿರಲು ಮತ್ತು ಭವಿಷ್ಯತ್‌ನಲ್ಲಿ ಮತ್ತಷ್ಟು ವಿಸ್ತರಿಸಲು ಅವಕಾಶ ಕಲ್ಪಿಸಿತು. ಬಂಡವಾಳಶಾಹಿಯಿಂದ ಮೂರನೇ ಒಂದರಷ್ಟು ವಿಶ್ವ ಮಾರುಕಟ್ಟೆಯನ್ನು ಸಮಾಜವಾದಿ ರಾಷ್ಟ್ರಗಳು ಕಸಿದುಕೊಂಡವು. ಆದಾಗ್ಯೂ ಅಷ್ಟರಲ್ಲೇ ಬಂಡವಾಳಶಾಹಿ ರಾಷ್ಟ್ರಗಳು ಉತ್ಪಾದನಾ ಶಕ್ತಿಗಳನ್ನು ಅಭಿವೃದ್ಧಿಪಡಿಸಿದ್ದರಿಂದ ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ತಳಹದಿಯ ಮೇಲೆ ಮತ್ತಷ್ಟು ವಿಸ್ತರಿಸಿದ್ದರಿಂದ, ಸಮಾಜವಾದಿ ದೇಶಗಳ ಕ್ರಾಂತಿಗಳ ಹಿನ್ನಡೆಯಿಂದ ಚೇತರಿಸಿಕೊಂಡು ಬಂಡವಾಳಶಾಹಿ ಮಾರುಕಟ್ಟೆಯನ್ನು ವಿಸ್ತರಿಸಲು ಸಾಧ್ಯವಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ವರ್ಗ ಶಕ್ತಿಗಳ ಹೊಂದಾಣಿಕೆಯಲ್ಲಿ, ನವ-ವಸಾಹತುಕರಣದಿಂದ ಬಂಡವಾಳಶಾಹಿಯು ತನ್ನ- ಮಾರುಕಟ್ಟೆಯನ್ನು ವಿಸ್ತರಿಸಿತು.

ಮತ್ತೊಂದೆಡೆ, ಅಲ್ಪಾವಧಿಯಲ್ಲಿ (ಅಮೇರಿಕಾ 300 ವರ್ಷಗಳಲ್ಲಿ ಮಾಡಿದ ಸಾಧನೆಯನ್ನು ಸೋವಿಯತ್ ಒಕ್ಕೂಟ ಕೇವಲ 30 ವರ್ಷಗಳಲ್ಲಿ ಮಾಡಿತು) ಸಮಾಜವಾದವು ಮಾಡಿದ ಸಾಧನೆಯಿಂದ ತೃಪ್ತಿಗೊಂಡು ಇದನ್ನು ಹಿಮ್ಮುಖಗೊಳಿಸಲಾಗದೆಂಬ ನಿಲುವು ತಳೆಯಲಾಯಿತು. ಗಾಯಗೊಂಡ ಬಂಡವಾಳಶಾಹಿಯು ನೂರುಪಟ್ಟು ಹೆಚ್ಚು ಶಕ್ತಿಯಿಂದ ಬಂದೆರಗುತ್ತದೆಂಬ ಲೆನಿನ್‌ರ ಎಚ್ಚರಿಕೆಯನ್ನು ಸಂಪೂರ್ಣ ಗಮನಕ್ಕೆ ತೆಗೆದುಕೊಳ್ಳಲಿಲ್ಲ.

ಬಂಡವಾಳಶಾಹಿಯ ಅನಿವಾರ್ಯ ಅಧಃಪತನವು ತಾನೇತಾನಾಗಿ ಆಗುವ ಕ್ರಿಯೆಯಲ್ಲ. ಬಂಡವಾಳಶಾಹಿಯನ್ನು ಕಿತ್ತೊಗೆಯಬೇಕು. ಅದರ ಶಕ್ತಿಯನ್ನು ತಪ್ಪಾಗಿ ಅಂದಾಜಿಸದೆ ದುಡಿಯುವ ಜನರ ಕ್ರಾಂತಿಕಾರಿ ಸೈದ್ಧಾಂತಿಕ ಹೋರಾಟಗಳನ್ನು ಬಲಗೊಳಿಸುವುದು ಮತ್ತು ತೀಕ್ಷ್ಣಗೊಳಿಸುವುದು ಮತ್ತು ಮಾರ್ಕ್ಸಿಸಂ - ಲೆನಿನಿಸಮ್ ತತ್ವಕ್ಕೆ ಬೆಸೆದುಕೊಂಡಿರುವ ಪಕ್ಷದ ನಾಯಕತ್ವದಡಿಯಲ್ಲಿ ಅದರ ನಿರ್ಣಾಯಕ ಮಧ್ಯಸ್ಥಿಕೆಯನ್ನು ಪಡಿಸಬೇಕು- ಇದಲ್ಲದೆ ಯಾವುದೇ ಕ್ರಾಂತಿಕಾರಿ ಬದಲಾವಣೆಯೂ ಸಾಧ್ಯವಿಲ್ಲ.

ಸಮಾಜವಾದವು ನೇರ ಹಾದಿಯ ಪ್ರಕ್ರಿಯೆಯಿಂದೂ, ಒಮ್ಮೆ ಸಮಾಜವಾದವನ್ನು ಸಾಧಿಸಿದ ನಂತರ ಅದು ಯಾವುದೇ ಅಡೆತಡೆಯಿಲ್ಲದೆ ವರ್ಗರಹಿತ ಕಮ್ಯೂನಿಸ್ಟ್ ಸಮಾಜವನ್ನು ತಲುಪುತ್ತದೆಂದೂ ತಪ್ಪಾಗಿ ಅರ್ಥೈಸಲಾಗಿತ್ತು. ಸಮಾಜವಾದವು ಸ್ಥಿತ್ಯಂತರ ಅವಧಿಯಾಗಿದ್ದು, ಕಮ್ಯೂನಿಸಂನ ಪ್ರಥಮ ಹಂತ- ವರ್ಗ ಆಧಾರಿತ ಶೋಷಣಾ ಬಂಡವಾಳಶಾಹಿ ವ್ಯವಸ್ಥೆ ಮತ್ತು ವರ್ಗರಹಿತ ಕಮ್ಯೂನಿಸ್ಟ್ ವ್ಯವಸ್ಥೆಯ ನಡುವಿನ ಅವಧಿ. ಈ ಸ್ಥಿತ್ಯಂತರ ಅವಧಿಯ ವರ್ಗ ತಿಕ್ಕಾಟಗಳನ್ನು ನಾಶಪಡಿಸದೆ ಅದನ್ನು ಮತ್ತಷ್ಟು ಉಲ್ಬಣಗೊಳಿಸಿ, ಬಂಡವಾಳಶಾಹಿಯು ಕಳೆದುಹೋದ ತನ್ನ ನೆಲೆಗಳನ್ನು ಮತ್ತೆ ಗಳಿಸಲು ಯತ್ನಿಸುತ್ತದೆ. ಹೀಗಾಗಿ ಈ ಅವಧಿಯು ಸುದೀರ್ಘ ಹಾಗೂ ಸಂಕೀರ್ಣದ್ದಾಗಿದ್ದು ಹಲವು ತಿರುವು-ಮುರುವು ಮತ್ತು ವಕ್ರವಾದ ಹಾದಿಯದ್ದಾಗಿರುತ್ತದೆ. ಅದರಲ್ಲೂ ಹಿಂದುಳಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕ್ರಾಂತಿಯ ಸಮಯದಲ್ಲಿ ಈ ತೆರನಾಗಿರುತ್ತದೆ.

ವಿಶ್ವ ಸಮಾಜವಾದಿ ಶಕ್ತಿಗಳ ಹೋರಾಟಗಳ ಯಶಸ್ಸು ಅಥವಾ ವೈಫಲ್ಯವು ಸಮಾಜವಾದಿ ರಚನೆಯಲ್ಲಿ ಅದು ಪಡೆದಿರುವ ಯಶಸ್ಸು, ವರ್ಗಶಕ್ತಿಗಳ ಆಂತರಿಕ ಹೊಂದಾಣಿಕೆ ಮತ್ತು ಅದರ ಸರಿಯಾದ ಅಂದಾಜುಗಳ ಮೇಲೆ ಅವಲಂಬಿಸಿದೆ. ಸಮಾಜವಾದಿ ದೇಶಗಳ ಸಮಸ್ಯೆಗಳನ್ನು ಮತ್ತು ಬಂಡವಾಳಶಾಹಿ ರಾಷ್ಟ್ರಗಳು ಗಳಿಸಿರುವ ಅಭಿವೃದ್ಧಿ ಮತ್ತು ಅದರ ಶಕ್ತಿಯನ್ನು ಸರಿ ಅಂದಾಜು ಮಾಡುವಲ್ಲಿ ಕರಾರುವಾಕ್ಕಾಗಿರಬೇಕು.

ಮೂಲ ಸನ್ನಿವೇಶಗಳ ನಿರ್ದಿಷ್ಟ ವಿಶ್ಲೇಷಣೆಯೇ ಭೌತಿಕವಾದದ ಜೀವಸಾರ ಎಂದು ಲೆನಿನ್




ಯಾವಾಗಲೂ ನೆನಪಿಸುತ್ತಿದ್ದರು. ವಿಶ್ಲೇಷಣೆ ಎಡವಿದರೆ ಅಥವಾ ವಾಸ್ತವ ಸನ್ನಿವೇಶದ ಅರ್ಥೈಸುವಿಕೆ ತಪ್ಪಾಗಿದ್ದರೆ, ತಪ್ಪಾದ ಗ್ರಹಿಕೆ ಮತ್ತು ವಿರೂಪಗಳು ಮೂಡಿಬರುತ್ತವೆ. ಇಂತಹ ಮಾರ್ಕ್ಸಿಸಂ ಮತ್ತು ಲೆನಿನಸಂ ತತ್ವದಿಂದ ದೂರಸರಿದು ವಿರೂಪ ಮತ್ತು ಅಡ್ಡ ಹಾದಿಗಳಿಂದ ಸೋವಿಯತ್ ಒಕ್ಕೂಟವು ಕೊನೆಯ ದಿನಗಳಲ್ಲಿ ವಿನಾಶದ ಅಂಚಿಗೆ ತಲುಪಿತು.

ಸಂ : ಸಮಾಜವಾದಿ ರಚನೆಲ್ಲಿದ್ದ ಪ್ರಧಾನ ನ್ಯೂನ್ಯತೆಗಳೇನು

ಕಾಂ. ಸೀತಾರಾಂ : ಸಮಾಜವಾದವು ಮಾನವ

ಸಮಾಜವಾದಕ್ಕೆ ಭವಿಷ್ಯವಿದೆಯೇ ಎಂದು ಕೇಳುತ್ತಾ ಬರಲಾದ ಮಾತು ಹಳೆಯದಾದರೂ ಅದು ಬೇರೆ ಬೇರೆ ರೂಪಗಳಲ್ಲಿ ಜನರ ನಡುವೆ ಆಗಾಗ ನುಸುಳುತ್ತಲೇ ಇರುತ್ತದೆ. ಶೋಷಣೆ-ಸುಲಿಗೆ, ದಮನ, ಅಸಮಾನತೆ, ಕ್ರೌರ್ಯದ ಮೂಲವಾಗಿರುವ ಬಂಡವಾಳಶಾಹಿ ವ್ಯವಸ್ಥೆಗೆ ಶಾಶ್ವತ ಪರ್ಯಾಯವಾಗಿರುವ ಸಮಾಜವಾದದ ಬೆಳವಣಿಗೆ - ಕೊಡುಗೆಗಳನ್ನು ಪ್ರಸಕ್ತವಾಗಿ ಅದರ ಮಹತ್ವವನ್ನು ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಕಳೆದ ವಾರ ವಿವರಿಸಿದ್ದರು ಅದರ ಮುಂದುವರಿದ ಭಾಗ.



ಇತಿಹಾಸದಲ್ಲೇ ಹಿಂದೆಂದೂ ತುಳಿಯದ ಹಾದಿಯಲ್ಲಿ ಸಾಗಿದ್ದು, ಅದಕ್ಕೆ ಯಾವುದೇ ನೀಲಿನಕ್ಷೆ ಅಥವಾ ನಿರ್ದಿಷ್ಟ ಸೂತ್ರವೇನೂ ಇರಲಿಲ್ಲ. ಸಮಾಜವಾದಿ ರಚನೆಯಲ್ಲಿ ಪ್ರಧಾನವಾಗಿ ನಾಲ್ಕು ನ್ಯೂನ್ಯತೆಗಳಿದ್ದವು.

ಪ್ರಥಮವಾಗಿ, ಸಮಾಜವಾದದಡಿಯಲ್ಲಿರುವ ರಾಷ್ಟ್ರದ ವರ್ಗಗುಣ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತ ಶೋಷಕರು ಬಹುಸಂಖ್ಯಾತರ ಶೋಷಣೆಗಾಗಿ ಏಕಾಧಿಪತ್ಯ ಸಾಧಿಸಿದರೆ, ಅಲ್ಪಸಂಖ್ಯಾತ ಶೋಷಕ ವರ್ಗದ ಮೇಲೆ ಬಹುಸಂಖ್ಯಾತ ದುಡಿಯುವ ವರ್ಗ ಏಕಾಧಿಪತ್ಯವನ್ನು ಸಾಧಿಸುವುದು ಸಮಾಜವಾದಿ ರಾಷ್ಟ್ರದ ವರ್ಗ ಗುಣ. ಈ ವರ್ಗಾಧಿಪತ್ಯದ ಸ್ವರೂಪಗಳು ಸನ್ನಿವೇಶಕ್ಕೆ ತಕ್ಕಂತೆ ಸಮಾಜವಾದದ ಮುನ್ನಡೆಯೊಂದಿಗೆ ಮಾರ್ಪಾಡಾಗುತ್ತಾ ಹೋಗಬೇಕು. ದುಡಿಯುವ ವರ್ಗದ ಏಕಾಧಿಪತ್ಯ ನಿರಂತರವಾಗಿ ಅಭಿವೃದ್ಧಿಯಾಗಬೇಕಾದರೆ ಹಲವು ಹಂತಗಳಲ್ಲಿ ಹಲವು ರೂಪತಾಳಿ ಹೋರಾಟ ನಡೆಸಬೇಕು. ಹೀಗಾಗಿ ಹೆಚ್ಚೆಚ್ಚು ಜನರನ್ನು ಈ ಎಲ್ಲ ಹಂತಗಳ ರೂಪಾಂತರ ಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುವು ಮಾಡದಿದ್ದಲ್ಲಿ ಎಲ್ಲ ಬದಲಾವಣೆ ಪ್ರಕ್ರಿಯೆಗಳಿಂದ ಅತೃಪ್ತಗೊಂಡು ಜನರು ದೂರಸರಿಯುತ್ತಾರೆ. ಸಮಾಜವಾದ ರೂಪಾಂತರ ಎಲ್ಲ ರಾಷ್ಟ್ರಗಳಲ್ಲೂ ಏಕತೆಯಿಂದೇನೂ ಇರುವುದಿಲ್ಲ, ಸಮಾಜವಾದಿ ರೂಪಾಂತರ ವಿಧಾನವು ಆಯಾಯ ದೇಶದ ಐತಿಹಾಸಿಕ ಹಿನ್ನೆಲೆ ಮತ್ತು ಮೂಲ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ.

ಬಂಡವಾಳಶಾಹಿ ರಾಷ್ಟ್ರಗಳ ಮಾದರಿಯು ಬದಲಾದಂತೆ, ಬಂಡವಾಳಶಾಹಿ ಸ್ಥಿತಿಯಿಂದ ಸಮಾಜವಾದಕ್ಕೆ ಸ್ಥಿತ್ಯಂತರ ಹೊಂದುವ ಅವಧಿಯಲ್ಲಿ ಖಂಡಿತವಾಗಿಯೂ ವೈವಿಧ್ಯಮಯವಾದ ರಾಜಕೀಯ ಮಾದರಿಗಳು ರೂಪ ತಾಳುತ್ತವೆ ಎಂದು ಲೆನಿನ್‌ರವರು ತಮ್ಮ ಕ್ರಾಂತಿಕಾರಿ ಕೃತಿ 'ರಾಷ್ಟ್ರ ಮತ್ತು ಕ್ರಾಂತಿ'ಯಲ್ಲಿ ನಿರೂಪಿಸಿದ್ದಾರೆ. ಮಾದರಿಗಳು ವಿವಿಧ ತೆರನಾದರೂ ಶ್ರಮಜೀವಿ ವರ್ಗದ ಏಕಾಧಿಪತ್ಯವೇ ಅನಿವಾರ್ಯವೆಂಬುದು ಮೂಲಸಾರ.

ಆದ್ದರಿಂದ ತಮ್ಮ ಮೂಲ ಸಾಮಾಜಿಕ-ಆರ್ಥಿಕ ಸನ್ನಿವೇಶ ಮತ್ತು ಐತಿಹಾಸಿಕ ಹಿನ್ನೆಲೆಗಳನ್ನು ಕಡೆಗಣಿಸಿ ಪೂರ್ಣ ಯುರೋಪ್‌ನ ಎರಡನೇ ಮಹಾಯುದ್ಧದ ನಂತರದ ಸಮಾಜವಾದಿ ರಾಷ್ಟ್ರಗಳು ಸೋವಿಯತ್ ಮಾದರಿಯನ್ನು ಅಳವಡಿಸಿಕೊಂಡವು. ಉದಾಹರಣೆಗೆ, ಕ್ರಾಂತಿಗೆ ಮುನ್ನವೇ ಜೆಕೊಸ್ಲೋವಾಕಿಯಾ ದಲ್ಲಿ ಸಮಾಜವಾದದಡಿ ಬಹುಪಕ್ಷೀಯ ವ್ಯವಸ್ಥೆ ನಿಷೇಧವನ್ನು ಹಲವರು ಹಿಮ್ಮುಖ ಚಲನೆಯೆಂದು ತಿಳಿದರು. ಇದು ಜನರಲ್ಲಿ ಅತೃಪ್ತಿ ಬೆಳೆಯಲು ಮತ್ತು ಅವರನ್ನು ದೂರೀಕರಿಸಲು (ALIENTATION) ಕಾರಣವಾಯಿತು.

ಎರಡನೆಯದಾಗಿ, ಸಮಾಜವಾದಿ ಪ್ರಜಾಪ್ರಭುತ್ವದಲ್ಲಿ ಮುಖ್ಯವಾದ ನ್ಯೂನ್ಯತೆಗಳಿದ್ದವು. ಬಂಡವಾಳಶಾಹಿ ವ್ಯವಸ್ಥೆಗಿಂತಲೂ ಸಮಾಜವಾದದಡಿ ಯಲ್ಲಿ ಪ್ರಜಾಪ್ರಭುತ್ವವು ಆಳವಾಗಿದ್ದು ಶ್ರೀಮಂತಿಕೆಯಿಂದ ಕೂಡಿರುತ್ತದೆ. ಬಂಡವಾಳಶಾಹಿಯು ಔಪಚಾರಿಕ ಪ್ರಜಾಪ್ರಭುತ್ವ ಹಕ್ಕುಗಳನ್ನು ನೀಡಿದರೆ, ಬಹುಸಂಖ್ಯಾತ ಜನರು ಆ ಹಕ್ಕುಗಳನ್ನು ಉಪಯೋಗಿಸಲು ಅವಕಾಶ ನೀಡುವುದಿಲ್ಲ (ಬಂಡವಾಳಶಾಹಿಯಡಿ, ಯಾರೊಬ್ಬರು ಏನಾದರೂ ಕೊಂಡುಕೊಳ್ಳುವ ಹಕ್ಕಿರುತ್ತಾದರೂ ಬಹುಸಂಖ್ಯಾತ ಜನರಿಗೆ ಈ ಹಕ್ಕನ್ನು ಬಳಸಲು ಸಾಮರ್ಥ್ಯವಿರುವುದಿಲ್ಲ). ಸಮಾಜವಾದವು ಈ ಹಕ್ಕು ಮತ್ತು ಅದನ್ನು ಬಳಸುವ ಸಮರ್ಥ್ಯವನ್ನು ಜನರಿಗೆ ನೀಡಬೇಕು.

ಆದಾಗ್ಯೂ, ಹಲವು ರಾಷ್ಟ್ರಗಳ ಸಮಾಜವಾದಿ ರಚನೆಯಲ್ಲಿ ಎರಡು ವಿಧದ ನ್ಯೂನ್ಯತೆಗಳು ಕಂಡುಬಂದವು. ಮೊದಲನೆಯದಾಗಿ, ಒಂದು ವರ್ಗದ ಏಕಾಧಿಪತ್ಯವು ಕಾಲಾನಂತರ ಹೋಗಿ ವರ್ಗ ಮುಂದಾಳು ಅಂದರೆ ಪಕ್ಷದ ಏಕಾಧಿಪತ್ಯವು ಅಸ್ತಿತ್ವಕ್ಕೆ ಬಂತು. ಇದು ಸ್ವಲ್ಪ ಕಾಲಾನಂತರ ಪಕ್ಷದ ನಾಯಕತ್ವಕ್ಕೆ ಜಾಗ ಬಿಟ್ಟುಕೊಟ್ಟಿತು. ಎಲ್ಲ ವರ್ಗ ಮತ್ತು ದುಡಿಯುವ ವರ್ಗವನ್ನು ಪ್ರತಿನಿಧಿಸುವ ಸಮಾಜವಾದಿ ರಾಷ್ಟ್ರವನ್ನು ಪಕ್ಷದ ಕೆಲವೇ ನಿರ್ಣಯಗಳನ್ನು ಹೇರುವಂತಹ ವಿಚಿತ್ರ ಸನ್ನಿವೇಶದ ನಿರ್ಮಾಣಕ್ಕೆ ಇದು ಕಾರಣವಾಯಿತು. ಸೋವಿಯತ್ ಗಳಂಥಹ ಪ್ರಜಾಪ್ರಭುತ್ವ ಯಂತ್ರಮುಖೇನಾ, ಪಕ್ಷದ ಸದಸ್ಯರಲ್ಲದ ಬಹುಸಂಖ್ಯಾತ ಜನರಿಗೆ ತಿಳುವಳಿಕೆ ಮೂಡಿಸುವ ಬದಲು ಆಜ್ಞಾರ್ಥ್ಯರೀತಿ ಇದನ್ನು ತಿಳಿಸಲಾಯಿತು. ಜನರ ವೇದಿಕೆಗಳಲ್ಲಿ ಮತ್ತು ಪಕ್ಷದ ನಾಯಕತ್ವದಲ್ಲಿ ಲೆನಿನ್‌ವಾದಿ ತತ್ವಗಳನ್ನು ಪ್ರಜಾಪ್ರಭುತ್ವ ವಿಧಾನದಲ್ಲಿ ರೂಪಿಸುವ ಬದಲು ಆಜ್ಞೆ ಮುಖೇನಾ ಅಳವಡಿಸಲಾಯಿತು. ಇದು ಜನರು ದೂರ ಸರಿಯುವುದಕ್ಕೆ ಮುಖ್ಯ ಕಾರಣ.

ಮುಂದುವರಿಯುವುದು

ಕುವೆಂಪು ಆಶಯಗಳ 'ಕೊಲಾಜ್'


ಕುವೆಂಪು ಕಾವ್ಯ ದೃಶ್ಯದ ಯಶಸ್ವಿ ಪ್ರಯೋಗ

ಕುವೆಂಪು ಶತಮಾನೋತ್ಸವದ ಆಚರಣೆಯ ಭಾಗವಾಗಿ ನಾಡಿನಾದ್ಯಂತ ವಿವಿಧ ರೀತಿಯ ಕಾರ್ಯಕ್ರಮಗಳಾಗುತ್ತಿವೆ. ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ಕುವೆಂಪು ಅವರನ್ನು ವಿಭಿನ್ನವಾಗಿ ಅರ್ಥೈಸುವ, ಚಿತ್ರಿಸುವ ಪ್ರಯತ್ನ ನಡೆದಿದೆ. ವಿಚಾರ ಸಂಕಿರಣ, ಸಂವಾದ, ಪುಸ್ತಕ ಪ್ರಕಟಣೆ, ನಾಟಕ ಇತ್ಯಾದಿಗಳ ಮೂಲಕ ಕುವೆಂಪು ಅವರ ನೆನಪನ್ನು ಮಾಡಲು ಹೊರಟಿದ್ದಾರೆ. ಆದರೆ ಕುವೆಂಪು ಅವರ ಒಂದು ಕೃತಿಯನ್ನು ಮಾತ್ರ ಆಯ್ದುಕೊಳ್ಳದೇ, ಅವರ ಎಲ್ಲ ಕೃತಿಗಳ ಆಯ್ದ ತುಣುಕುಗಳನ್ನು ಒಂದೆಡೆ ಸೇರಿಸಿದ 'ಕೊಲಾಜ್'ನ್ನು ರಂಗಭೂಮಿಯ ಮೇಲೆ ಪ್ರದರ್ಶಿಸುವ ತೀರಾ ವಿಶಿಷ್ಟ ಪ್ರಯೋಗ ಇತ್ತೀಚೆಗೆ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಜರುಗಿತು. ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಡಾ.ಕೇಶವ ಶರ್ಮಾರವರ ನೇತೃತ್ವದಲ್ಲಿ, ಯುವ ನಿರ್ದೇಶಕ ಶ್ರೀಪಾದ ಭಟ್ ಹೊನ್ನಾವರ ಇವರ ನಿರ್ದೇಶನದಲ್ಲಿ ಪ್ರದರ್ಶಿಸಿದರು; ಈ ವರ್ಷ ರಂಗಭೂಮಿಯ ಮೇಲೆ ಪ್ರದರ್ಶಿಸಲ್ಪಟ್ಟ ಕುವೆಂಪು ಅವರ ಕೃತಿಗಳಲ್ಲಿ ಅತ್ಯಂತ ವಿಶಿಷ್ಟವೂ, ಸಮಕಾಲೀನವೂ ಆದ ಪ್ರಯೋಗವಿದೆಂದು ಅಂದು ಹಾಜರಿದ್ದ ಗಣ್ಯರ-ತಜ್ಞರ ಅಭಿಪ್ರಾಯವೂ ಆಗಿತ್ತು.

ಕುವೆಂಪು ಕಾವ್ಯವನ್ನು ದೃಶ್ಯ ಮಾಧ್ಯಮದಲ್ಲಿ ಓದುವ ಉತ್ಸಾಹದಲ್ಲಿ 'ಕುವೆಂಪು ದೃಶ್ಯಕಾವ್ಯ' ರೂಪಿತವಾಗಿದೆ. ಸಾಗರದಿಂದೆತ್ತಿದ್ದ ಬೊಗಸೆ ನೀರಿನಲ್ಲಿ ಸಾಗರದಾಳದ ಕತೆಯನ್ನು ಕಾಣಹೊರಟಿರುವ ಮಹತ್ವಾಕಾಂಕ್ಷೆ ನಮ್ಮದು ಎಂದು ಇದರ ನಿರ್ದೇಶಕ ಶ್ರೀಪಾದ ಭಟ್ ಹೇಳುತ್ತಾರೆ. ಈ ನಿಟ್ಟಿನಲ್ಲಿ ಎಲ್ಲಾ ಕಲಾವಿದರು ಒಂದು ತಂಡವಾಗಿ ಶ್ರಮಿಸಿದ್ದು ಪ್ರಯೋಗದಲ್ಲಿ ಎದ್ದುಕಾಣುತ್ತದೆ.

ಪ್ರಸಿದ್ಧ 'ಕಿಂದರಜೋಗಿ' ಇಲ್ಲಿ ಕಥೆಯ ನಿರೂಪಕ ಏಕನಾದದೊಂದಿಗೆ ಮಕ್ಕಳಿಗೆ ಕಥೆ ಹೇಳುತ್ತಾನೆ. ಆ ಕಥೆಗಳೆಲ್ಲವೂ ಕುವೆಂಪುರವರ ವಿವಿಧ ಕೃತಿಗಳು ಮತ್ತು ವಿಭಿನ್ನ ಆಶಯಗಳನ್ನು ಹೇಳುವಂತಹುದು. 'ಅಸಮಾನತೆಯ ವಿರುದ್ಧ ಎದ್ದು ನಿಂತ ಬಡ ಬಗ್ಗರ ಜಠರಾಗ್ನಿಯನ್ನು 'ಕಲ್ಕಿ'ಯ ಮೂಲಕ, ಯುದ್ಧದ ಭೀಕರತೆಯಲ್ಲಿ ನಲುಗುವ ಜನಸಾಮಾನ್ಯರ ನೋವನ್ನು ಸ್ಮಶಾನ ಕುರುಕ್ಷೇತ್ರದ ನಾಟಕ ದೃಶ್ಯದ ಮೂಲಕ, ಯುದ್ಧದ ನಿರರ್ಥಕತೆಯನ್ನು, ದೇವರಿಗಿಂತ ಮಿಗಿಲಾದದ್ದು ತಾಯ್ತನ ಎನ್ನುವುದನ್ನು 'ಪೆಪ್ಪರ್‌ಮೆಂಟ್ ಚಂದ್ರ' ಕವನದ ಮೂಲಕ ಇಲ್ಲಿ ಅಭಿವ್ಯಕ್ತಿಸಲಾಗಿದೆ.

'ಧನಿಕರ ಮನೆಗಳು ಒಂದೆಡೆ ನಿಂತಿವೆ. ಬಡವರ ಗುಡಿಸಲು ಒಂದೆಡೆ ನಿಂತಿವೆ' ಎನ್ನುವ ಮಾತಿನೊಂದಿಗೆ ಪ್ರಾರಂಭವಾಗುವ 'ಕಲ್ಕಿ' ಕವಿತೆಯನ್ನು ದೃಶ್ಯದಲ್ಲಿ ಬಡವರು ಮತ್ತು ಶ್ರೀಮಂತರ ನಡುವೆ ನಡೆಯಬೇಕಾದ ಸಂಘರ್ಷವನ್ನು ಮತ್ತು ಸಂಘರ್ಷಕ್ಕೆ ಇರುವ ಅನಿವಾರ್ಯ ಕಾರಣಗಳ ಬಗ್ಗೆ ಮಾತುಕತೆಯನ್ನು ಹೆಣೆದಿದ್ದಾರೆ. ರಕ್ತ ಹೀರುವ 'ಕಲ್ಕಿ' ಪ್ರೇತದ ರೂಪ ಪಡೆದು ಕೊಳ್ಳಿದೆವ್ವಗಳನ್ನು ನೆನಪಿಸುವ ಪಂಜಿನೊಂದಿಗೆ ರಂಗ ಪ್ರವೇಶಿಸಿದ್ದು, ಪತ್ರಿಕೆ ಓದುಗ ಅಮೇರಿಕಾ ಮತ್ತು ಇರಾಕ್ ನಡುವೆ ನಡೆಯುತ್ತಿರುವ ಯುದ್ಧದ ಸುದ್ದಿ ಓದುವ ಮೂಲಕ 'ಸ್ಮಶಾನ ಕುರುಕ್ಷೇತ್ರ' ನಾಟಕದ ಮಗನನ್ನು ಗಂಡನನ್ನು ಅರಸುವ ದೃಶ್ಯವನ್ನು ಪ್ರಾರಂಭಿಸಿದ್ದು, ಆಟವೂ ಇರುವ, ಹಾಡೂ ಇರುವ ಕಥೆ ಹೇಳಜ್ಜ' ಎಂದು ಕಿಂದರಿ





ಜೋಗಿಯನ್ನು ಪೀಡಿಸುವ ಮಕ್ಕಳ ಒತ್ತಾಯದ ಮೇರೆಗೆ ಪ್ರಾರಂಭವಾಗುವ 'ಪೆಪ್ಪರಮೆಂಟ್ ಚಂದಿರ' ಇವೆಲ್ಲವೂ ಕುವೆಂಪು ಅವರ ಆಶಯವನ್ನು ಸಮರ್ಥವಾಗಿ ಅಭಿವ್ಯಕ್ತಿಸುವಂತಹುದಾಗಿದೆ. "ದಶಾನನ ಸ್ವಪ್ನಸಿದ್ಧಿ' ದೃಶ್ಯರೂಪ ರಾಮಾಯಣದ ಬಗ್ಗೆ ಇರುವ ಹೊಸ ವ್ಯಾಖ್ಯಾನವೇ ಆಗಿದೆ.

ಕಿಂದರಜೋಗಿ ಮಕ್ಕಳೊಂದಿಗೆ ಸಂವಾದ ಮಾಡುವ ಮೂಲಕ ಕಥೆ ಬಿಚ್ಚಿಕೊಳ್ಳುತ್ತದೆ. ಓದುವಾಗ ಸ್ವಲ್ಪ ತೊಡಕಾದಂತೆ ಕಾಣುವ ನಾಟಕ-ಮಹಾಕಾವ್ಯದ ಭಾಷೆಯು ರಂಗಭೂಮಿಯಲ್ಲಿ ತೊಡಕಾದಂತೆ ಕಾಣಲಿಲ್ಲ. 'ಕಾವ್ಯದೃಶ್ಯದಲ್ಲಿ ಮೂಲಕೃತಿಯ ಭಾಷೆಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಅತ್ಯಂತ ಸರಳ ಮತ್ತು ಪರಿಣಾಮಕಾರಿಯಾದ ರಂಗಸಜ್ಜಿಕೆ ಗಮನ ಸೆಳೆಯುವಂತಿತ್ತು. ವೇದಿಕೆಯ ಮಧ್ಯದಲ್ಲಿ ನಿಂತಿರುವ ತ್ರಿಕೋನಾಕಾರದ ಸಣ್ಣ ಪೇಂಟಿಂಗ್ ಆಯ್ಕೆ ದೃಶ್ಯದ ಒಟ್ಟು ಆಶಯವನ್ನು ಪ್ರತಿನಿಧಿಸುತ್ತಿತ್ತು. ಮತ್ತೆಲ್ಲ ಸಂದರ್ಭಗಳಲ್ಲಿ ನಟರ ಗುಂಪು ಅಗತ್ಯ ದೃಶ್ಯವನ್ನು ಸ್ವತಃ ನಿರ್ಮಿಸಿಕೊಳ್ಳುತ್ತಿತ್ತು. ದೇಹಭಾಷೆಯೂ ಪರಿಣಾಮಕಾರಿ ಯಾಗಿತ್ತು.

ರಂಗ ನಿರ್ಮಿತಿಯಲ್ಲಿ ಯುವ ಕಲಾವಿದ ದಾಮೋದರ ನಾಯ್ಕ ಅವರ ಕಲೆಗಾರಿಕೆ ಎದ್ದುಕಾಣುತ್ತಿತ್ತು. ದಶಾನನ ಸ್ವಪ್ನ ಸಿದ್ಧಿಯಲ್ಲಿ ಬಳಸಿದ ಯಕ್ಷಗಾನದ ಪಗಡೆ, ಮುಖವಾಡಗಳು, ಪರಿಕರಗಳೆಲ್ಲವೂ ಆಯಬದ್ಧ 'ಸುಂದರ ಪೇಂಟಿಂಗ್' ಇದ್ದಂತೆ ಅನಿಸುತ್ತಿತ್ತು. ರಾವಣನ ಪಾತ್ರದಾರಿಯಾಗಿ ಉತ್ತಮ ಅಭಿನಯ ನೀಡಿದ ನಾಗೋಡಿ ವಿಶ್ವನಾಥ ವಸ್ತ್ರ ವಿನ್ಯಾಸದಲ್ಲಿ, ಯಕ್ಷಗಾನದ ಹೆಜ್ಜೆಯ ಲಯದಲ್ಲಿ ಗಮನ ಸೆಳೆದವು.

'ಪೆಪ್ಪರಮೆಂಟ್ ಚಂದಿರ'ದ ಹುಡುಗನಾಗಿ, ಕಲ್ಕಿಯಾಗಿ ಎಳೆಯ ನಡುಶ, ಜೋಗಿಯ ಪಾತ್ರದಲ್ಲಿ ರಾಜೇಶ್ವರಿ ಜಿ.ವಿ, ಮುದುಕಿಯಾಗಿ ಶ್ವೇತ ಹೆಚ್.ಬಿ ಗಮನ ಸೆಳೆದರು. ಉಳಿದಂತೆ ಪ್ರಸನ್ನ, ನಾಗೇಶ್ವರ, ಶಿವಕುಮಾರ, ಕಿರಣಕುಮಾರ್ ದಿವ್ಯಾ, ಸವಿತಾ, ಮಂಜುನಾಥ, ಪರಮೇಶ್ವರ, ಚಂದ್ರಶೇಖರ, ಪ್ರಕಾಶ ಮಾಳಗಿ, ಈಶ್ವರ, ಸುದರ್ಶನಗೌಡ ಇವರು ಮಕ್ಕಳಾಗಿ ಮತ್ತು ಕೋರಸ್‌ನಲ್ಲಿ ನಿಪುಣ ಕಲಾವಿದರಂತೆ, ಅಭಿನಯ ಮತ್ತು ರಂಗ ಚಲನೆಯಲ್ಲಿನ ಶಿಸ್ತು ಕಾಯ್ದುಕೊಂಡರು. ರಾಜೇಂದ್ರ ಮತ್ತು ಸುನಿತ ಸುಂದರವಾಗಿ ಹಾಡಿದರೂ ಒಟ್ಟಾಗಿ ಹಾಡುವಾಗ ಹೊಂದಾಣಿಕೆ ಕೊರತೆ ಕಾಣುತ್ತಿತ್ತು.

ರಂಗ ಪಠ್ಯವನ್ನು ಡಾ.ಎಂ.ಜಿ ಹೆಗಡೆ ತಾರ್ಕಿಕವಾಗಿ ಜೋಡಿಸಿ, ಸಿದ್ದಪಡಿಸಿಕೊಟ್ಟಿದ್ದಾರೆ. ಕಿಂದರಜೋಗಿಯನ್ನೇ ರೂಪಾಂತರಿಸಿ ಕಾವ್ಯದೃಶ್ಯ ನೆಯ್ದಿದ್ದಾರೆ. 'ರಾಮಾಯಣ ದರ್ಶನಂ' ತುಣುಕು ಇನ್ನಷ್ಟು ಚಿಕ್ಕದಾಗಿದ್ದರೆ ಒಳ್ಳೆಯದಿತ್ತೆಂದು ಅನಿಸಿದರೂ ಮತ್ತು ಬೆರಳ್ಗೆ ಕೊರಳ್, ಶೂದ್ರತಪಸ್ವಿ, ಗೊಬ್ಬರ, ಸಾಲದ ಮಗು ದಂಥ ಕೃತಿಗಳ ತುಣುಕುಗಳು ಸೇರಿಲ್ಲವೆಂಬ ಕೊರಗು ಹುಟ್ಟಿದರೂ ಅದನ್ನು ಈ ರಂಗಕೃತಿಯ ಋಣಾತ್ಮಕ ಅಂಶವೆಂದು ಪರಿಗಣಿಸಬೇಕಾಗಿಲ್ಲ. ಇಡೀ ನಾಟಕದ ಸಂಗೀತ ಸಂಯೋಜಿಸಿ ನಿರ್ದೇಶಿಸಿದ ಶ್ರೀಪಾದ ಭಟ್ ಜನಪದ ರಂಗಭೂಮಿಯ ಅನೇಕ ಸಾಧ್ಯತೆಗಳನ್ನು ಸಮರ್ಥವಾಗಿ ಬಳಸಿದ್ದಲ್ಲದೆ, ರಂಗಮಂದಿರದ ಹೊರಗೆ, ಹಗಲುರಾತ್ರಿ ಭೇದವಿಲ್ಲದೆ ಕಡಿಮೆ ಪರಿಕರಗಳನ್ನು ಬಳಸಿ ಯಶಸ್ವಿಯಾಗಿಸಬಹುದಾದ್ದನ್ನು ತೋರಿಸಿದ್ದಾರೆ. ಮುಖವರ್ಣಿಕೆಯನ್ನು ಚಂದ್ರ ಉಡುಪಿ ಹಾಗೂ ಡಾ.ಕೇಶವಶರ್ಮ ಮಾಡಿದ್ದಾರೆ. ರಂಗಪರಿಕರ, ನಟನೆ, ನಿರ್ದೇಶನ, ಸಂಗೀತ, ಪಠ್ಯ ಇವೆಲ್ಲವುಗಳ 'ಕೊಲಾಜ್' ನಿರ್ಮಿಸಲು ಪ್ರಮುಖ ಕಾರಣರಾದ ಡಾ.ಕೇಶವ ಶರ್ಮ ಅಭಿನಂದನಾರ್ಹರು. ಕುವೆಂಪು ವಿಶ್ವವಿದ್ಯಾಲಯ ಅಗತ್ಯ ಕಾರ್ಯಕ್ರಮ ರೂಪಿಸಿ, ಹಣಕಾಸಿನ ನೆರವು ನೀಡಿ ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರದರ್ಶನ ನೀಡುವಂತಾದರೆ ಕುವೆಂಪುರವರ ಆಶಯಗಳನ್ನು ನಿಜವಾಗಿ ಪ್ರತಿನಿಧಿಸಿದಂತಾಗುತ್ತದೆ. ವಿಚಾರಸಂಕಿರಣ - ನೂರಾರು ಪುಟಗಳ ವಿಮರ್ಶಾ ಪುಸ್ತಕಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಈ ರೀತಿಯ ಪ್ರದರ್ಶನದಿಂದಾಗುತ್ತದೆ.

ಯಮುನಾ ಗಾಂವ್ಕರ್.

ಹಿರಿಯ ಹೋರಾಟಗಾರ ಕಾಂ. ಪಿ.ಜಿ. ಮಶಾಲ್ದಿಯವರಿಗೆ ಸನ್ಮಾನ

ಕಾಂ.ಪರಶುರಾಮ ಮಶಾಲ್ದಿಯವರು ಶಿರಸಿಯಲ್ಲಿ ಪಕ್ಷದ ಪ್ರಾರಂಭದ ದಿನಗಳಿಂದ ಕೆಲಸ ಮಾಡಿದವರು. ಪಕ್ಷ ಕಟ್ಟಲು, ಬೆಳೆಸಲು ದುಡಿದವರು. ಮಂಜುನಾಥ ಪುಲ್ಕರ, ಎಂ.ಎಸ್.ಧಾರೇಶ್ವರ ಮುಂತಾದವರ ಜೊತೆ ಶಿರಸಿಯಲ್ಲಿ ನಡೆದ ಅನೇಕ ಚಳುವಳಿಯಲ್ಲಿ ಭಾಗವಹಿಸಿದವರು; ನಾಯಕತ್ವ ವಹಿಸಿದ್ದವರು; 1964ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಮಶಾಲ್ದಿಯವರು ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾಗಿ ಉ.ಕ. ಜಿಲ್ಲೆಯ 7ನೇ ಸಮ್ಮೇಳನದವರೆಗೂ ಮುಂದುವರಿದರು.

ಸುಮಾರು75 ವರ್ಷ ವಯಸ್ಸಿನ ಮಶಾಲ್ದಿಯವರು ವಯಸ್ಸು ಮತ್ತು ಆರೋಗ್ಯದ ಕಾರಣದಿಂದ ಜಿಲ್ಲಾ ಸಮಿತಿ ಸದಸ್ಯತ್ವದಿಂದ ಈ ಸಮ್ಮೇಳನದಲ್ಲಿ ಬಿಡುಗಡೆಗೊಂಡ ಈ ಸಂದರ್ಭದಲ್ಲಿ ಅವರನ್ನು ಆತ್ಮೀಯವಾಗಿ ಶಾಲು ಹೊದೆಸಿ ಸನ್ಮಾನಿಸಲಾಯಿತು.

ನಯಾ ಪೈಸೆ ಚಳುವಳಿ, ಕಟ್ಟಿಗೆ ಚಳುವಳಿ, 'ಉಳುವವನದೆ ಭೂಮಿ' ಚಳುವಳಿ, ನಗರ ಸಭೆಯ ಭ್ರಷ್ಟಾಚಾರ ವಿರೋಧಿಸಿ ಚಳುವಳಿ ಹೀಗೆ ಹತ್ತು ಹಲವು ಹೋರಾಟದಲ್ಲಿ ಪಾಲ್ಗೊಂಡ ಮಶಾಲ್ದಿಯವರನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮತ್ತು ಕಾರ್ಯದರ್ಶಿ ಮಂಡಲಿ ಸದಸ್ಯರಾದ ನಿತ್ಯಾನಂದ ಸ್ವಾಮಿಯವರು ಕೆಂಪು ಶಾಲು ಹೊದೆಸಿ ಸನ್ಮಾನಿಸಿದರು ಮತ್ತು ಅವರು ಪಕ್ಷಕ್ಕೆ ಕೊಟ್ಟ ಸ್ಮರಣೀಯವಾದ, ಮೌಲಿಕವಾದ ಕೊಡುಗೆಯನ್ನು ನೆನಪಿಸಕೊಳ್ಳಲಾಯಿತು.

'ಜೀವಿತದ ಕೊನೆಯವರೆಗೂ ನಾನು ಪಕ್ಷದ ಸದಸ್ಯನಾಗಿ ಮುಂದುವರಿಯಲು ಬಯಸುತ್ತೇನೆ' ಎಂದು ಬಿಡುಗಡೆಯ ಸಂದರ್ಭದಲ್ಲಿ ಅವರು ವ್ಯಕ್ತಪಡಿಸಿದ ಮನದಾಳದ ಇಂಗಿತ ಸಭೆಯಲ್ಲಿ ಉಪಸ್ಥಿತರಿದ್ದ ಪಕ್ಷದ ಕಿರಿಯ ಸದಸ್ಯರಿಗೆ ಮಾರ್ಗದರ್ಶಕವೂ ಆಗಿತ್ತು. ಜಿಲ್ಲಾ ಸಮಿತಿ ಸದಸ್ಯತ್ವದಿಂದ ಬಿಡುಗಡೆಗೊಂಡರು ಕೂಡ ಅವರ ಅಪಾರ ಅನುಭವ ಮತ್ತು ಮಾರ್ಗದರ್ಶನವನ್ನು ಪಕ್ಷಕ್ಕೆ ಕಾಲಕಾಲಕ್ಕೆ ನೀಡಬೇಕೆಂದು ಅವರಲ್ಲಿ ವಿನಂತಿಸಲಾಯಿತು.

ಎರಡು ದಿನಗಳ ಕಾಲ ನಡೆದ ಸಮ್ಮೇಳನ ದಲ್ಲಿ ಸಂಪೂರ್ಣವಾಗಿ ಪಾಲ್ಗೊಂಡ ಅವರಲ್ಲಿ ಇಳಿವಯಸ್ಸಿನಲ್ಲಿಯೂ ಬತ್ತದ ಉತ್ಸಾಹ ಎದ್ದು ಕಾಣುತ್ತಿತ್ತು.

- ವಿಠ್ಠಲ ಭಂಡಾರಿ



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್ ಎರಡನೇಯದಾಗಿ,
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S Y GURUSHANTH

ಪ್ರಜಾಪ್ರಭುತ್ವ, ಪಕ್ಷದ ಆಂತರಿಕ
ಕೇಂದ್ರೀಯ ಪ್ರಜಾಪ್ರಭುತ್ವ